ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)




ಕೋರ್ಸ್ – 1

ಬ್ಲಾಕ್ – 4

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

**Higher Education To Everyone Everywhere**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್-೧

# ಬ್ಲಾಕ್
# 4

P.No

ಘಟಕ - 12

ಕಾಂಚಿಯ ಪಲ್ಲವರು - ರಾಜಕೀಯ ಇತಿಹಾಸ 1-20

ಘಟಕ - 13

ಸಮಾಜ, ಧರ್ಮ ಮತ್ತು ಸಾಹಿತ್ಯಕ್ಕೆ ಪಲ್ಲವರ ಕೊಡುಗೆಗಳು 21-33

ಘಟಕ - 14

ಕಂಚಿಯ ಪಲ್ಲವರು-ಆಡಳಿತ, ಆರ್ಥಿಕ ಸ್ಥಿತಿಗತಿ, ಕಲೆ ಮತ್ತು ಶಿಲ್ಪಕಲೆಗೆ ಕೊಡುಗೆಗಳು 35-48

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಕರಾಮುವಿ,
ಮೈಸೂರು

***ವಿಷಯ ಸಂಯೋಜಕರು***

## ಘಟಕ ಬರೆದವರು

**ಡಾ. ಜಿ. ರಾಮರತನ್**
ಇತಿಹಾಸ ಪ್ರವಾಚಕರು
ಕರಾಮುವಿ,
ಮೈಸೂರು

ಘಟಕಗಳು 12, 13 ಮತ್ತು 14

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. **2013**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಕೋರ್ಸ್ - 1

# ಬ್ಲಾಕ್ - 4

## ಪೀಠಿಕೆ

ಈ ಬ್ಲಾಕ್ 4 ರಲ್ಲಿ ಪಲ್ಲವರ ಇತಿಹಾಸಕ್ಕೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಲಾಗಿದೆ. ಒಟ್ಟು ಮೂರು ಘಟಕಗಳನ್ನೂ ಹೊಂದಿರುವ ಈ ಬ್ಲಾಕ್ ಪಲ್ಲವರ ಕಾಲದ ವಿವಿಧ ಬೆಳವಣಿಗೆಗಳನ್ನು ಕುರಿತಂತೆ ವಿವರಗಳನ್ನು ನೀಡುತ್ತದೆ, ಘಟಕ 12 ರಲ್ಲಿ ಕಂಚಿಯ ಪಲ್ಲವ ರಾಜಕೀಯ ಇತಿಹಾಸ, ಅಂದರೆ, ಪಲ್ಲವ ರಾಜ್ಯವನ್ನು ಆಳಿದ ದೊರೆಗಳ ಬಗ್ಗೆ ಹಾಗೂ ಅವರ ಸಾಧನೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಘಟಕ 13 ಪಲ್ಲವರ ಕಾಲದಲ್ಲಿ ಸಮಾಜ, ಧರ್ಮ ಮತ್ತು ಸಾಹಿತ್ಯ ರಚನೆಯಲ್ಲಾದ ಪ್ರಮುಖ ಬದಲಾವಣೆಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಘಟಕ 14 ಪಲ್ಲವರ ಕಾಲದ ಆಡಳಿತ ವ್ಯವಸ್ಥೆಯ ವಿವಿಧ ಅಂಗಗಳು, ಅವರ ಕಾಲದ ಆರ್ಥಿಕ ಚಟುವಟಿಕೆಗಳು ಮತ್ತು ಕಲೆ ಹಾಗೂ ಶಿಲ್ಪಕಲೆಗೆ ಪಲ್ಲವರು ನೀಡಿದ ಕೊಡುಗೆಗಳನ್ನು ವಿವರಿಸುತ್ತದೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

## ಘಟಕ -12 ಕಾಂಚಿಯ ಪಲ್ಲವರು-ರಾಜಕೀಯ ಇತಿಹಾಸ

<u>ವಿನ್ಯಾಸ</u>


12.0 ಉದ್ದೇಶಗಳು

12.1 ಪೀಠಿಕೆ

12.2 ಪಲ್ಲವರ ಮೂಲ

12.3 ಆರಂಭ ಕಾಲದ ದೊರೆಗಳು

12.4 ಪ್ರತಿಷ್ಠಿತ ಪಲ್ಲವ ದೊರೆಗಳು

12.4.1 ಒಂದನೇ ಮಹೇಂದ್ರವರ್ಮನ್

12.4.2 ಒಂದನೇ ನರಸಿಂಹ ವರ್ಮನ್

12.4.3 ಎರಡನೇ ನರಸಿಂಹವರ್ಮನ್

12.4.4 ಎರಡನೇ ನಂದಿ ವರ್ಮನ್

12.5 ಕೊನೆಯ ಕಾಲದ ದೊರೆಗಳು

12.6 ಅವನತಿ

12.7 ಸಾರಾಂಶವನ್ನು ಗ್ರಹಿಸೋಣ

12.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

12.9 ಕ್ಲಿಷ್ಟಪದಗಳು

12.10 ಪಲ್ಲವರ ವಂಶಾವಳಿ

12.11 ಅಭ್ಯಸನೀಯಗ್ರಂಥಗಳು


ನಿಮ್ಮ ಅಧ್ಯಯನದ ಅನುಕೂಲಕ್ಕಾಗಿ ಈ ಘಟಕವನ್ನು ಮೇಲ್ಕಂಡಂತೆ ವಿನ್ಯಾಸಗೊಳಿಸಲಾಗಿದೆ.

## 12.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಈ ಕೆಳಕಂಡ ಅಂಶಗಳನ್ನು ನೀವು ಅರ್ಥಮಾಡಿಕೊಂಡಿರಬೇಕು

a) ದಕ್ಷಿಣ ಭಾರತದ ಇತಿಹಾಸದಲ್ಲಿ ಪಲ್ಲವರಾಳ್ವಿಕೆಯ ಪ್ರಾಮುಖ್ಯತೆ

b) ಪಲ್ಲವರ ಮೂಲದ ಬಗ್ಗೆ ಇರುವ ವಿವಿಧ ಸಿದ್ಧಾಂತಗಳು ಹಾಗೂ ಮೂಲಕ್ಕೆ ಸಂಬಂಧಿಸಿದಂತೆ ಇರುವ ಸಮಸ್ಯೆಗಳು

c) ಆರಂಭದ ಪಲ್ಲವ ದೊರೆಗಳು ಎದುರಿಸಬೇಕಾಗಿ ಬಂದ ಸವಾಲುಗಳು ಮತ್ತು ಸಮಸ್ಯೆಗಳು

d) ಪ್ರಮುಖ ದೊರೆಗಳಾದ ಒಂದನೇ ಮಹೇಂದ್ರವರ್ಮ, ಒಂದನೇ ನರಸಿಂಹ ವರ್ಮ, ಎರಡನೇ ನರಸಿಂಹವರ್ಮ ಮತ್ತು ಎರಡನೇ ನಂದಿವರ್ಮನ್ ಇವರ ಆಳ್ವಿಕೆಯ ರಾಜಕೀಯ ಹಾಗೂ ಸಾಂಕ್ಕೃತಿಕ ಪ್ರಾಮುಖ್ಯತೆ

e) ಒಂದು ಕಡೆ ಪಲ್ಲವರಿಗೂ, ಮತ್ತೊಂದು ಕಡೆ ಬಾದಾಮಿ ಚಾಳುಕ್ಯರಿಗೂ, ಪಾಂಡ್ಯರಿಗೂ ಹಾಗೂ ಚೋಳರಿಗೂ ಮಧ್ಯ ಇದ್ದ ರಾಜಕೀಯ ಪೈಪೋಟಿ, ಈ ರಾಜಕೀಯ ಮೇಲುಗೈಗೆ ನಡೆದ ಪೈಪೋಟಿಯ ಕಾರಣಗಳು ಹಾಗೂ ಫಲಿತಾಂಶಗಳು

f) ಪಲ್ಲವರ ಅವನತಿ ಹಾಗೂ ಅಂತಿಮವಾಗಿ ರಾಜಕೀಯ ರಂಗದಿಂದ ಕಣ್ಮರೆಯಾಗಲು ಇದ್ದ ಕಾರಣಗಳು

g) ದಕ್ಷಿಣ ಭಾರತದ ಸಮಾಜ, ಧರ್ಮ, ಆರ್ಥಿಕತೆ, ಕಲೆ ಹಾಗೂ ಶಿಲ್ಪ ಕಲೆಗೆ ಪಲ್ಲವರು ನೀಡಿರುವ ಕೊಡುಗೆಗಳು.

## 12.1 ಪೀಠಿಕೆ

ಕ್ರಿ.ಶ. ಏಳನೇ ಶತಮಾನದಿಂದ ಸುಮಾರು ಮೂನ್ನೂರು ವರ್ಷಗಳ ಕಾಲ ಪಲ್ಲವರು ದಕ್ಷಣ ಭಾರತದ ರಾಜಕೀಯ ರಂಗದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಶಾತವಾಹನರ ಅವನತಿ ಹಾಗೂ ಸಂಘಂ ಯುಗದ ರಾಜವಂಶಗಳ ಆಳ್ವಿಕೆ ಕೊನೆಗೊಂಡಿದ್ದರಿಂದ ಪಲ್ಲವರಿಗೆ ರಾಜಕೀಯವಾಗಿ ದಕ್ಷಿಣ ಭಾರತದಲ್ಲಿ ಮುಂದುವರೆಯಲು ಅವಕಾಶವಾಯಿತು. ಕಂಚಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಪಲ್ಲವರು, ಸತತವಾಗಿ ತಮ್ಮ ಅಸ್ಥಿತ್ವಕ್ಕೆ ಹೋರಾಡಬೇಕಾಯಿತು. ಪಲ್ಲವರು ಅತ್ಯಂತ ಪ್ರಬಲ ಶಕ್ತಿಯಾಗಿದ್ದ ಕಾಲದಲ್ಲಿ ಅವರ ಸಾಮ್ರಾಜ್ಯ ಇಡೀ ತಮಿಳುದೇಶವನ್ನು ವ್ಯಾಪಿಸಿತ್ತು. ಬಾದಾಮಿ ಚಾಳುಕ್ಯರೊಂದಿಗೆ ದಕ್ಷಿಣ ಭಾರತದ ರಾಜಕಾರಣದಲ್ಲಿ ಪ್ರಮುಖ ಸ್ಥಾನಕ್ಕಾಗಿ ನಡೆದ ಧೀರ್ಘ ಹೋರಾಟದಲ್ಲಿ ಅಂತಿಮವಾಗಿ ವಿಜಯಿಗಳಾದರು. ಆದರೆ ಚಾಳುಕ್ಯರ ಅವನತಿಯೊಂದಿಗೆ, ದಕ್ಷಿಣ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ತಮಿಳು ಪ್ರಾಂತ್ಯದಲ್ಲಿ ಪ್ರವರ್ಧಮಾನಕ್ಕೆ ಬಂದ ಚೋಳರು ಅಂತಿಮವಾಗಿ ಪಲ್ಲವರ ಅವನತಿ ಹಾಗೂ ನಾಶಕ್ಕೆ ಕಾರಣರಾದರು. ಅನೇಕ ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಿದ ಪಲ್ಲವರು ದಕ್ಷಿಣ ಭಾರತದ ಸಂಸ್ಕೃತಿಗೆ, ಅದರಲ್ಲೂ ವಿಶೇಷವಾಗಿ ಸಾಹಿತ್ಯ ಹಾಗೂ ಕಲೆ ಮತ್ತು ಶಿಲ್ಪಕಲೆಗೆ ವಿಶೇಷವಾದ ಕೊಡುಗೆಗಳನ್ನು ನೀಡಿದ್ದಾರೆ.

ಈ ಘಟಕದಲ್ಲಿ ಮೇಲ್ಕಂಡ ವಿಷಯಗಳ ಬಗ್ಗೆ ಹಾಗೂ ಪ್ರಮುಖ ದೊರೆಗಳಾದ ಒಂದನೇ ಮಹೇಂದ್ರವರ್ಮನ್, ಒಂದನೇ ನರಸಿಂಹವರ್ಮನ್, ಎರಡನೇ ನರಸಿಂಹವರ್ಮನ್ ಮತ್ತು ಎರಡನೇ ನಂದಿವರ್ಮನ್ ಅವರುಗಳು ದಕ್ಷಿಣ ಭಾರತದ ರಾಜಕೀಯದಲ್ಲಿ ನಿರ್ವಹಿಸಿದ ಪಾತ್ರ ಹಾಗೂ ಇತರ ರಂಗಗಳಲ್ಲಿ ಅವರ ಸಾಧನೆಗಳನ್ನು ಕುರಿತಂತೆ ವಿಷಯಗಳನ್ನು ತಿಳಿಸಿಕೊಡುತ್ತದೆ. ಈ ದೊರೆಗಳು ಮಾಡಿದ ಕದನಗಳ ಬಗ್ಗೆ ಹಾಗೂ ಈ ಕದನಗಳ ರಾಜಕೀಯ ಪ್ರಾಮುಖ್ಯತೆಯ ಬಗೆಗೂ ಸಹ ನೀವು ಅರಿಯುವಿರಿ.

## 12.2 ಪಲ್ಲವರ ಮೂಲ

ಪ್ರಬಲ ರಾಜ್ಯವೊಂದರ ನಿರ್ಮಾಣ ಮಾಡಿ, ದಕ್ಷಿಣ ಭಾರತದ ರಾಜಕಾರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದ ಈ ಪಲ್ಲವರು ಯಾರು? ಎಲ್ಲಿಂದ ಬಂದವರು? ಅವರು ಸ್ಥಳೀಕರೆ? ವಿಂಧ್ಯ ಪರ್ವತ ಶ್ರೇಣಿಯ ದಕ್ಷಿಣದಲ್ಲಿರುವ ಭೂಪ್ರದೇಶದ ನಿವಾಸಿಗಳೇ? ಅಥವ ಅವರು ಭಾರತದ ಹೊರಗಿನಿಂದ ಬಂದ ವಿದೇಶಿಯರೇ? ಅವರು ಕಾಂಚೀ ನಗರವನ್ನು ಅಕ್ರಮಿಸಿದ ಬಗೆ ಹೇಗೆ? ಪಲ್ಲವರ ಇತಿಹಾಸಕ್ಕೆ ಸಂಬಂಧಿಸಿದ ಈ ಪ್ರಮುಖ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡುವುದು ಕಷ್ಟ ಸಾಧ್ಯವಾದ ಮಾತು! ಇದುವರೆವಿಗೂ ಲಭ್ಯವಾಗಿರುವ ಆಧಾರಗಳಿಂದ ಈ ಪ್ರಶ್ನೆಗಳಿಗೆ ನಿರ್ದಿಷ್ಟವಾದ ಉತ್ತರಗಳನ್ನು ನೀಡಲು ಸಾಧ್ಯವಾಗಿಲ್ಲ. ಅನೇಕ ವಿದ್ವಾಂಸರು ಪಲ್ಲವರ ಮೂಲದ ಬಗೆಗೆ ತಮ್ಮದೇ ಆದ ವಾದಗಳನ್ನು ಮಂಡಿಸಿದ್ದಾರೆ. ಆದರೆ ಯಾವುದೇ ಒಂದು ವಾದವು ನಿರ್ದಿಷ್ಟವಾದ ಹಾಗೂ ನಿಖರವಾದ ಆಧಾರವನ್ನು ಅವಲಂಬಿಸಿಲ್ಲ ಹಾಗಾಗಿ ಯಾವುದೇ ವಾದವು ಸಂಪೂರ್ಣವಾಗಿ ನಂಬುವ ಹಾಗಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಬಹು ಪಾಲು ವಿದ್ವಾಂಸರು ಪಲ್ಲವರು ದಕ್ಷಿಣ ಭಾರತದ ನಿವಾಸಿಗಳು, ಅವರು ಭಾರತ ಹೊರ ಪ್ರದೇಶವಾದ ಬಂದ ವಿದೇಶಿಯರಲ್ಲ ಎಂಬ ವಾದವನ್ನು ಒಪ್ಪುತ್ತಿದ್ದಾರೆ. ಯಾವುದೇ ಒಂದು ಖಚಿತವಾದ ಹಾಗೂ ಏಕಾಭಿಪ್ರಾಯವಿಲ್ಲದಿರುವುದರಿಂದ ತಾತ್ಕಾಲಿಕವಾಗಿ, ಅವರು ದಕ್ಷಿಣ ಭಾರತದ ನಿವಾಸಿಗಳು ಎಂಬ ವಾದವನ್ನು ಬಹುಮಟ್ಟಿಗೆ ಒಪ್ಪಬಹುದು.

ಪಲ್ಲವರ ಮೂಲಕ್ಕೆ ಸಂಬಂಧಿಸಿದ ಹಾಗೇ ಆರು ಪ್ರಮುಖವಾದ ವಾದಗಳನ್ನು ವಿದ್ವಾಂಸರು ಮುಂದಿಟ್ಟಿದ್ದಾರೆ. ಪಲ್ಲವರು ವಿದೇಶಿಯರು ಎಂಬ ವಾದವನ್ನು ಪ್ರಥಮವಾಗಿ ಮುಂದಿಟ್ಟವರೆಂದರೆ ಪ್ರಸಿದ್ಧ ಸಂಶೋಧಕರಾದ ಲೇವಿಸ್ ರೈಸ್ ಅವರು. ಪಲ್ಲವರು ಪರ್ಶಿಯಾ ಮೂಲದವರು, ಅವರು ಪರ್ಶಿಯಾದ ಪೆಹ್ಲವ ವಂಶಕ್ಕೆ ಸೇರಿದವರು ಎಂಬ ಸಿದ್ಧಾಂತವನ್ನು ಅವರು ಪ್ರತಿಪಾದಿಸಿದರು. ವಂಶದ ಹೆಸರು ಸಾಮ್ಯತೆ ಹೊಂದಿರುವುದು ಹಾಗೂ ಪುರಾಣಗಳಲ್ಲಿ 'ಪಲ್ಲವ' ವಂಶದ ಬಗ್ಗೆ ವಿವರಗಳು ಕಂಡು ಬರುವುದು ಇತ್ಯಾದಿಗಳನ್ನು ಆಧರಿಸಿ ರೈಸ್‌ರವರು ಪಲ್ಲವರು ವಿದೇಶಿಯರು ಎಂಬ ತಿರ್ಮಾನಕ್ಕೆ ಬಂದರು. ವೆಂಕಯ್ಯ ಎಂಬುವ ಪ್ರಸಿದ್ಧ ಶಾಸನ ತಜ್ಞರು ರೈಸ್‌ರವರ ವಾದವನ್ನು ಪುಷ್ಟೀಕರಿಸಿದರು. 'ಪಲ್ಲವ' ಎಂಬುವ ಪದ 'ಪೆಹ್ಲವ' ಎಂಬುದರ ಸಂಸ್ಕೃತದ ರೂಪಾಂತರ ಎಂಬುವ ವಾದವನ್ನು ಅವರು ಮಂಡಿಸಿದ್ದಾರೆ. ಜೆವೋದುಬ್ರಯೆಲ್ ಎಂಬ ಫ್ರೆಂಚ್ ವಿದ್ವಾಂಸರು ವಿದೇಶಿ ಮೂಲದ ಸಿದ್ಧಾಂತವನ್ನು ಒಪ್ಪಿದುದಲ್ಲದೇ, ಪಲ್ಲವರು ಪೆಹ್ಲವ ವಂಶದ ಪ್ರಸಿದ್ಧ ದೊರೆ ರುದ್ರದಾಮನ್‌ನ ಸಚಿವರಲ್ಲಿ ಒಬ್ಬನಾದ ಸುವಿಶ್ಕ ಎಂಬುವನ ವಂಶಜರು ಎಂಬ ವಾದವನ್ನು ಸಹ ಪೂರಕವಾಗಿ ಮಂಡಿಸಿದ್ದಾರೆ. ಈ ವಾದ ಕೆಲವು ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಲು

ವಿಫಲವಾದುದರಿಂದ ವಿದೇಶಿ ಮೂಲವನ್ನು ಒಪ್ಪಲು ಬಹುಪಾಲು ವಿದ್ವಾಂಸರು ಸಿದ್ಧರಿಲ್ಲ. ಯಾವುದೇ ಕುರುಹುಗಳನ್ನು ಬಿಡದೆ ಪಲ್ಲವರು ಪರ್ಶಿಯಾದಿಂದ ದಕ್ಷಿಣ ಭಾರತಕ್ಕೆ ವಲಸೆ ಬರಲು ಹೇಗೆ ಸಾಧ್ಯ? ಫಲವತ್ತಾದ ಹಾಗೂ ಸಮೀಪದ ಪ್ರದೇಶಗಳನ್ನು ಬಿಟ್ಟು ಆಂಧ್ರಪ್ರದೇಶದ ಆಗ್ನೇಯಾ ಭಾಗವನ್ನು ಪಲ್ಲವರು ಆಯ್ಕೆಮಾಡಲು ಇದ್ದ ಸನ್ನಿವೇಶ ಅಥವ ಒತ್ತಡ ಏನೆಂಬುದನ್ನು ವಿವರಿಸಲು ಈ ವಾದವನ್ನು ಪ್ರತಿಪಾದಿಸುವವರಿಗೆ ಸಾಧ್ಯವಾಗಿಲ್ಲ. ಅದಲ್ಲದೇ ತಮಿಳುನಾಡಿನ ಪಲ್ಲವರು ಯಾವುದೇ ಶಿಲಾ ಶಾಸನದಲ್ಲಿ ಅಥವ ಇತರ ಸಂದರ್ಭಗಳಲ್ಲಿ ತಾವು ವಿದೇಶಿ ಮೂಲದವರು ಹಾಗೂ ಪರ್ಶಿಯಾದಿಂದ ಬಂದವರೆಂದು ಹೇಳಿಕೊಂಡಿಲ್ಲ. 'ಪಲ್ಲವ' ಮತ್ತು 'ಪೆಹ್ಲವ' ಪದಗಳ ಮಧ್ಯೆಯಿರುವ ಸಾಮ್ಯತೆ ಹಾಗೂ ಪುರಾಣಗಳಲ್ಲಿ 'ಪಲ್ಲವ' ಉಲ್ಲೇಖದ ಆಧಾರದಿಂದ ಮಾತ್ರವೇ ಪಲ್ಲವರು ವಿದೇಶಿ ಮೂಲದವರು ಎಂಬ ವಾದವನ್ನು ಸಮರ್ಥಿಸಲು ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ ಈ ವಾದವನ್ನು ಸಮರ್ಥಿಸುವ ವಿದ್ವಾಂಸರ ಸಂಖ್ಯೆಗಣನೀಯವಾಗಿ ಕಡಿಮೆಯಾಗಿದೆ.

ಕೆಲಕಾಲದ ಹಿಂದೆ ಬೆಳಕಿಗೆ ಬಂದ ಹೊಸ ಆಧಾರದ ಮೇಲೆ ವಿದೇಶಿ ಸಿದ್ಧಾಂತ ಮತ್ತೊಮ್ಮೆ ಜೀವ ಪಡೆದಿತ್ತು. ವೆಂಕಟ ಸುಬ್ಬಯಾರ್ ಎಂಬ ವಿದ್ವಾಂಸರು ಶಿಲ್ಪಕೃತಿಯೊಂದರ ಆಧಾರದ ಮೇಲೆ ಈ ವಾದವನ್ನು ಪುನರ್ ಮಂಡಿಸಿದವರಲ್ಲಿ ಪ್ರಮುಖರು. ಕಂಚಿಯ ವೈಕುಂಟಪೆರುಮಾಳ್ ದೇವಾಲಯದಲ್ಲಿ ಲಭ್ಯವಾಗಿರುವ ಈ ಶಿಲ್ಪ ಕೃತಿಯಲ್ಲಿ ರಾಜಕುಮಾರನೊಬ್ಬನಿಗೆ ಆಗುಂತಕನೊಬ್ಬನು ಕಿರೀಟ ಪ್ರಧಾನ ಮಾಡುವ ದೃಶ್ಯವಿದೆ. ಈ ಕಿರೀಟ ಪಾರ್ಥಿಯನ್ನರು ಹಾಗೂ ಶಕರಲ್ಲಿ  ಕಂಡು ಬರುವ ಕಿರೀಟವನ್ನು ಹೋಲುತ್ತದೆ. ಈ ಶಿಲ್ಪಕೃತಿಯೊಂದನ್ನೆ ಆಧಾರವಾಗಿಟ್ಟುಕೊಂಡು ಸುಬ್ಬಯಾರ್ ಅಂತಹ ವಿದ್ವಾಂಸರು ಪಲ್ಲವರು ವಿದೇಶಿಯರು ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಆದರೆ ಲೇವಿಸ್ ರೈಸ್ ಅವರ ವಿದೇಶಿ ಮೂಲದ ಸಿದ್ಧಾಂತಕ್ಕೆ ಯಾವುದೇ ರೀತಿಯ ಗಮನಾರ್ಹವಾದ ಸೇರ್ಪಡೆಯನ್ನು ಈ ಶಿಲ್ಪ ಕೃತಿ ನೀಡಿಲ್ಲ ಹಾಗೂ ಸುಬ್ಬಯಾರ್ ಮತ್ತು ಅವರ ಬೆಂಬಲಿಗರು ಈಗಾಗಲೇ ಮೇಲೆ ಎತ್ತಿರುವ ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನವನ್ನು ಮಾಡಿಲ್ಲ. ಆದುದರಿಂದ ಈ ವಾದವನ್ನು ಒಪ್ಪಲು ಸಾಧ್ಯವಿಲ್ಲ.

ಪಲ್ಲವರ ಮೂಲಕ್ಕೆ ಸಂಬಂಧಿಸಿದಂತೆ ಇರುವ ಮೂರನೇ ವಾದ ನಾಗವಂಶದ ಉಗಮ ಸಿದ್ಧಾಂತ. ಈ ಸಿದ್ಧಾಂತವನ್ನು ಪ್ರತಿಪಾದಿಸಿದರು ಎಂ.ಶ್ರೀನಿವಾಸ ಅಯ್ಯಂಗಾರ್. ಇವರ ನಾಗ ಉಗಮದ ಸಿದ್ಧಾಂತದ ಪ್ರಕಾರ ಪಲ್ಲವರು ನಾಗಾ ಹಾಗೂ ಚೋಳರ ವೈವಾಹಿಕ ಸಂಬಂಧದಿಂದ ಹುಟ್ಟಿದ ಸಂಕರ ಜನಾಂಗದವರು.  ತಮಿಳುನಾಡಿನ ಪ್ರಸಿದ್ಧ ಕೃತಿ 'ಮಣಿ ಮೇಖಲೈ' ಈ ರೀತಿಯ ನಾಗ ಮತ್ತು ಚೋಳರ ಮಧ್ಯದ ವೈವಾಹಿಕ ಸಂಬಂಧವನ್ನು ಉಲ್ಲೇಖಿಸುತ್ತದೆ. ಈ ಸಾಹಿತ್ಯಾಧಾರವನ್ನು ಆಧರಿಸಿ ಶ್ರೀನಿವಾಸ ಅಯ್ಯಂಗಾರ್ ಅವರು ಈ ನಾಗ ಉಗಮದ ಸಿದ್ಧಾಂತವನ್ನು ಮುಂದಿಟ್ಟಿದ್ದಾರೆ ಕದಂಬ ದೊರೆಯಾದ ಕಾಕುತ್ಸವರ್ಮನು ತನ್ನ ತಾಳಗುಂಡ ಶಿಲಾಶಾಸನದಲ್ಲಿ ಈ ರೀತಿಯ ಮಿಶ್ರ ವೈವಾಹಿಕ ಸಂಬಂಧವನ್ನು ಉಲ್ಲೇಖಿಸಿರುತ್ತಾನೆ. ಈ ವೈವಾಹಿಕ ಸಂಬಂಧದಿಂದ ಜನಿಸಿದ ರಾಜ ಕುಮಾರನೊಬ್ಬನು ಪಲ್ಲವ ವಂಶದ ಮೂಲ ಪುರುಷ ಎಂಬುದಾಗಿ ಊಹಿಸಲಾಗಿದೆ. ಪ್ರಸಿದ್ಧ ಇಂಗ್ಲಿಷ್ ಇತಿಹಾಸಕಾರ ವಿ.ಎ.ಸ್ಮಿತ್ ಅವರು ಸಹ ಈ ಸಿದ್ಧಾಂತವನ್ನು ಒಪ್ಪಿರುತ್ತಾರೆ. ಆದರೆ ಈ ಸಿದ್ಧಾಂತ ಒಂದು ಊಹೆಯಾಗಿಯೇ ಉಳಿದಿದೆಯೇ ಹೊರತು, ಸರ್ವಸಮ್ಮತ ಅಭಿಪ್ರಾಯವಾಗಿ ರೂಪಿತಗೊಂಡಿಲ್ಲ.

ಮತ್ತೊಂದು ವಾದದ ಪ್ರಕಾರ ಮಧ್ಯ ಭಾರತವನ್ನು ಆಳಿದ ವಾಕಾಟಕ ವಂಶಕ್ಕೆ ಸೇರಿದ ಒಂದು ಉಪ ಪಂಗಡದವರು ಪಲ್ಲವ ವಂಶದ ಮೂಲ ಪುರುಷರು. ಪ್ರಸಿದ್ಧ ಇತಿಹಾಸಕಾರರಾದ ಕೆ.ಪಿ.ಜೈಸ್ವಾಲ್ ಅವರು ಈ ವಾದವನ್ನು ಪ್ರತಿಪಾದಿಸಿದವರಲ್ಲಿ ಪ್ರಮುಖರು. ಆದರೆ ಈ ವಾದವನ್ನು ಸಮರ್ಥಿಸಲು ಬೇಕಾದ ಆಧಾರಗಳನ್ನು ಒದಗಿಸುವಲ್ಲಿ ಈ ವಾದವನ್ನು ಮಂಡಿಸಿದವರು ವಿಫಲರಾಗಿದ್ದಾರೆ. ಮತ್ತೊಂದು ವಾದದ ಪ್ರಕಾರ ಅಶೋಕನ ಶಿಲಾಶಾಸನದಲ್ಲಿ ಉಲ್ಲೇಖಿಸಲಾಗಿರುವ ಪುಲಿಂದರು ಬೇರೆಯಾರು ಅಲ್ಲ, ಅವರೇ ಪಲ್ಲವರು. ದಕ್ಷಿಣ ಭಾರತದ ಪ್ರಮುಖ ಇತಿಹಾಸಕಾರರಲ್ಲಿ ಒಬ್ಬರಾದ ಆರ್. ಸತ್ಯನಾಥ ಅಯ್ಯರ್ ಅವರು ಈ ವಾದವನ್ನು ಪ್ರತಿಪಾದಿಸಿದವರಲ್ಲಿ ಮುಖ್ಯರಾದವರು. ಆದರೆ ಹೆಸರಿನ ಸಾಮ್ಯತೆಯನ್ನು ಹೊರತುಪಡಿಸಿ 'ಪುಲಿಂದ' ಹಾಗೂ 'ಪಲ್ಲವ' ರನ್ನು ಒಂದೇ ಎಂದು ಹೇಳಲು ಇದುವರೆವಿಗೂ ಯಾವುದೇ ಆಧಾರ ಲಭ್ಯವಾಗಿಲ್ಲ.

ಕೆಲವು ವಿದ್ವಾಂಸರು ಪಲ್ಲವರು 'ಮಣ್ಣಿನ ಮಕ್ಕಳು' ವಾದವನ್ನು ಸಮರ್ಥಿಸುತ್ತಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪಲ್ಲವರು ತಮಿಳುವಾಡಿನ ಮೂಲ ನಿವಾಸಿಗಳು. ರಾಘವ ಅಯ್ಯಂಗಾರ್, ಕೃಷ್ಣಸ್ವಾಮಯ್ಯಂಗಾರ್ ಹಾಗೂ ಇತರರು ಈ ವಾದವನ್ನು ಎತ್ತಿ ಹಿಡಿದಿದ್ದಾರೆ. ತಮಿಳು ಮಹಾಕಾವ್ಯ 'ಮಣಿ ಮೇಖಲೈ' ನಲ್ಲಿ ನಿರೂಪಿತವಾಗಿರುವ ಒಂದು ಘಟನೆಯನ್ನು ಆಧರಿಸಿ ಈ ಅಭಿಪ್ರಾಯವನ್ನು ಮುಂದಿಡಲಾಗಿದೆ. ಇಲ್ಲತ್ತಿರೈಯನ್ ಎಂಬ ಚೋಳವಂಶಜ ಈ ಘಟನೆಯಲ್ಲಿ ಉಲ್ಲೇಖಿಸಲಾಗಿದ್ದು ಈತನು ಪ್ರಾಯಶಃ ಪಲ್ಲವ ವಂಶಜರ ಮೂಲ ಪುರುಷನಾಗಿರಬಹುದೆಂದು ಊಹಿಸಲಾಗಿದೆ.

ಬಹುಜನ ವಿದ್ವಾಂಸರಿಂದ ಮನ್ನಿಸಲ್ಪಟ್ಟಿರುವ ಸಿದ್ಧಾಂತದ ಪ್ರಕಾರ ಪಲ್ಲವರು ಆಂಧ್ರ ಪ್ರದೇಶಕ್ಕೆ ಸೇರಿದವರು. ಕೆ.ಎ. ನೀಲಕಂಠಶಾಸ್ತ್ರಿಯವರು ಈ ವಾದವನ್ನು ಪ್ರಮುಖವಾಗಿ ಸಮರ್ಥಸಿದ್ದಾರೆ. ಪಲ್ಲವರ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿರುವ ಆಧುನಿಕಕಾಲದ ವಿದ್ವಾಂಸರಾದ ಆರ್. ಗೋಪಾಲನ್ ಮತ್ತು ಸಿ.ಮೀನಾಕ್ಷಿ ಅವರು ಸಹ ಆಂಧ್ರ ಮೂಲದ ಸಿದ್ಧಾಂತವನ್ನು ಒಪ್ಪಿಕೊಂಡಿದ್ದಾರೆ. ಈ ವಾದವನ್ನು ಸಮರ್ಥಿಸುವ ಪ್ರಮುಖವಾದ ಅಂಶವೆಂದರೆ, ಪಲ್ಲವರ ಪ್ರಾರಂಭಿಕ ಶಾಸನಗಳು ದೊರಕಿರುವುದು ಪೂರ್ವ ಆಂಧ್ರ ಪ್ರದೇಶದಲ್ಲಿ. ಈ ಅಂಶದ ಹಿನ್ನಲೆಯಲ್ಲಿ ಪಲ್ಲವರು ಶಾತವಾಹನರ ಸಾಮಂತರಾಗಿರಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಹಾಗೂ ಪಲ್ಲವರ ಅತ್ಯಂತ ಪ್ರಾಚೀನ ಶಾಸನಗಳು ಸಂಸ್ಕೃತ ಅಥವ ಪ್ರಾಕೃತ ಭಾಷೆಯಲ್ಲಿವೆ. ಈ ಅಂಶವನ್ನು ಗಮನಿಸಿದರೇ ಪಲ್ಲವರು ತಮಿಳು ಪ್ರದೇಶದ ಮೂಲ ನಿವಾಸಿಗಳಾಗಿರುವ ಸಾಧ್ಯತೆಗಳು ಬಹಳ ಕಡಿಮೆ. ಅವರ ಮೂಲ ಸ್ಥಾನ ತಮಿಳು ಪ್ರದೇಶವಾಗಿದ್ದರೆ ಅವರ ಪ್ರಾರಂಭಿಕ ಶಾಸನಗಳು ಅವಶ್ಯಕವಾಗಿ ತಮಿಳು ಭಾಷೆಯಲ್ಲಿರಬೇಕಿತ್ತು. ಆದುದರಿಂದ ಪಲ್ಲವರು ಪ್ರಾಯಶಃ ಆಂಧ್ರ ಮೂಲದವರಿರಬೇಕೆಂಬ ವಾದದಲ್ಲಿ ಸತ್ಯಾಂಶ ಕಂಡು ಬರುತ್ತದೆ. ಪಲ್ಲವರ ಆಡಳಿತ ವ್ಯವಸ್ಥೆಯು ಶಾತವಾಹನ ದೊರೆಗಳ ಆಡಳಿತಾತ್ಮಕ ಪರಂಪರೆಯನ್ನು ಮುಂದುವರೆಸಿತು. ಶಾತವಾಹನರ ರೀತಿಯಲ್ಲೆ ಪಲ್ಲವರು ತಾಮ್ರ ಶಾಸನಗಳನ್ನು ಜಾರಿಗೊಳಿಸಿದರು. ಶಾತವಾಹನ ರೀತಿಯಲ್ಲಿ ಈ ತಾಮ್ರ ಶಾಸನಗಳಲ್ಲಿ ಪಲ್ಲವ ದೊರೆಗಳ ವ್ಯಕ್ತಿಗತ ಸಾಧನೆಗಳನ್ನು ವರ್ಣಿಸಲಾಗಿದೆ. ಈ ಅಂಶಗಳು ನಿರ್ಧಾರಕ ಅಂಶಗಳೆಂದು ಮಾನ್ಯ ಮಾಡಲು ಸಾಧ್ಯವಿಲ್ಲದಿದ್ದರೂ, ಇತರ ವಾದಗಳಿಗಿಂತ ಹೆಚ್ಚು ಸಮಂಜಸವೆನ್ನಿಸುತ್ತದೆ.

## 12.3 ಆರಂಭಕಾಲದ ದೊರೆಗಳು

ಪಲ್ಲವರ ರಾಜಕೀಯ ಇತಿಹಾಸವನ್ನು ಇನ್ನಿತರ ರಾಜವಂಶಗಳ ಇತಿಹಾಸದಂತೆ ಮೂರು ಹಂತಗಳಲ್ಲಿ ಅಧ್ಯಯನ ಮಾಡಬಹುದು. ಮೊದಲ ಹಂತ ಪಲ್ಲವ ಬೆಳವಣಿಗೆಯ ಕಾಲವಾಗಿತ್ತು. ಇದು ಪ್ರಾರಂಭಿಕ ಪಲ್ಲವ ದೊರೆಗಳ ಕಾಲವಾಗಿತ್ತು. ಎರಡನೇ ಹಂತ ಪಲ್ಲವ ವಂಶದ ಮಹಿಮಾನ್ವಿತ ದೊರೆಗಳ ಕಾಲವಾಗಿತ್ತು. ಈ ಹಂತದಲ್ಲಿ ಪಲ್ಲವ ದೊರೆಗಳು ದಕ್ಷಿಣ ಭಾರತದ ರಾಜಕಾರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದುದಲ್ಲದೇ, ದಕ್ಷಿಣ ಭಾರತದ ಸಂಸ್ಕೃತಿಗೆ ವಿಶಿಷ್ಟವಾದ ಕೊಡುಗೆಗಳನ್ನು ನೀಡಿದರು. ಅಂತಿಮ ಹಂತದಲ್ಲಿ ಪಲ್ಲವರು ಅವನತಿ ಹೊಂದಿದರು. ಈ ಹಂತ ಅತೀ ಶೀಘ್ರ ಹಾಗೂ ಹ್ರಸ್ವವಾದ ಹಂತವಾಗಿದ್ದು ಪಲ್ಲವರು ದಕ್ಷಿಣ ಭಾರತದ ರಾಜಕೀಯ ರಂಗದಿಂದ ಕಣ್ಮರೆಯಾದರು.

**ಪಲ್ಲವರ ರಾಜಕೀಯ ಇತಿಹಾಸದ ಅಧ್ಯಯನಕ್ಕೆ ಲಭ್ಯವಿರುವ ಆಧಾರಗಳು:**

ಲಭ್ಯವಿರುವ ಆಧಾರಗಳಲ್ಲಿ ಅತ್ಯಂತ ಪ್ರಮುಖವಾದುದು ಪ್ರಾಕ್ತನ ಶಾಸ್ತ್ರಾಧಾರಗಳು. ಪಲ್ಲವ ದೊರೆಗಳು ನೀಡಿರುವ ಅನೇಕ ಸಂಸ್ಕೃತ ಭಾಷೆಯಲ್ಲಿರುವ ಶಾಸನಗಳು, ಪ್ರಾರಂಭಿಕ ದೊರೆಗಳ ಇತಿಹಾಸದ ಅಧ್ಯಯನಕ್ಕೆ ಸಹಕಾರಿಯಾಗಿವೆ. ಲಭ್ಯವಿರುವ ಎಲ್ಲಾ ಶಾಸನಗಳು ನೈಜವಾದುದಲ್ಲ. ಕೆಲವು ಶಾಸನಗಳು ಕೃತಿಮವಾಗಿರುವುದರಿಂದ, ಈ ಶಾಸನಗಳಲ್ಲಿ ಹೇಳಿರುವುದೆಲ್ಲವನ್ನು ನಂಬುವಂತಿಲ್ಲ. ಇನ್ನಿತರ ಆಧಾರಗಳನ್ನು ಪೂರಕವಾಗಿಟ್ಟುಕೊಂಡು ಶಾಸನಗಳ ಅಧ್ಯಯನ ಮಾಡಬೇಕಾಗುತ್ತದೆ. ಲಭ್ಯವಿರುವ ಶಾಸನಗಳ ಪೈಕಿ ಹನ್ನೊಂದು ಶಾಸನಗಳು ನೈಜ ಶಾಸನಗಳೆಂದು ಗುರ್ತಿಸಲಾಗಿದೆ. ಅವುಗಳೆಂದರೇ:

1) ಸ್ಕಂದ ವರ್ಮನ ಒಂಗೋಡ್ ಒಂದನೇ ಶಾಸನ
2) ವಿಷ್ಣುಗೋಪನ ಉರುವಪಲ್ಲಿ ತಾಮ್ರ ಶಾಸನ
3) ವಿಷ್ಣುಗೋಪನ ಸಿಂಗರಾಯಕೊಂಡದ ತಾಮ್ರಶಾಸನ
4) ಸಿಂಹವರ್ಮನ ಒಂಗೋಡ್ ಎರಡನೇ ಶಾಸನ
5) ಸಿಂಹವರ್ಮನ ಪಿಕಿರ ತಾಮ್ರಶಾಸನ
6) ಸಿಂಹವರ್ಮನ ಮಂಗದೂರು ತಾಮ್ರ ಶಾಸನ
7) ಸಿಂಹವರ್ಮನ ವಿಲವತ್ತಿ ತಾಮ್ರ ಶಾಸನ
8) ಚುರಾ ಶಾಸನ
9) ಒಂದನೇ ನಂದಿವರ್ಮನ ಉದಯಂದಿರಂ ತಾಮ್ರ ಶಾಸನ
10) ಚಂದಲೂರು ಶಾಸನ; ಹಾಗೂ
11) ಪಲ್ಲನ್ ಗೋಯಿಲ್ ತಾಮ್ರಶಾಸನ

ಈ ಎಲ್ಲಾ ಶಾಸನಗಳು ಪಲ್ಲವ ದೊರೆಗಳನ್ನು ಹೆಸರಿಸುತ್ತವೆ. ಆದರೆ ಹೆಚ್ಚಿನ ಮಾಹಿತಿಯು ಈ ಶಾಸನಗಳಲ್ಲಿ ಇಲ್ಲದೇ ಇರುವುದರಿಂದ, ಪಲ್ಲವ ಇತಿಹಾಸ ರಚನೆಗೆ ಈ ಶಾಸನಗಳ ಸಹಾಯ ಪರಿಮಿತವಾದುದು. ಈ ಪಲ್ಲವ ಶಾಸನಗಳನ್ನು ಹೊರತು ಪಡಿಸಿದಂತೆ ತಮಿಳು ಪ್ರದೇಶದ ಹೊರಗೆ ಪಲ್ಲವರಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ನಮಗೆ ಲಭ್ಯವಿದೆ. ಅವುಗಳಲ್ಲಿ ಪ್ರಮುಖವಾದುದೆಂದರೆ ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನ, ಕಾಕುತ್ಸವರ್ಮನ ತಾಳಗುಂದ

ಶಾಸನ ಮತ್ತು ಪಶ್ಚಿಮ ಗಂಗರಸರ ಪೆನುಗೊಂಡ ಶಾಸನ, ಈ ಶಾಸನಗಳನ್ನು ಆಧರಿಸಿ ಪ್ರಾರಂಭಿಕ ಪಲ್ಲವ ದೊರೆಗಳ ವಂಶಾವಳಿಯನ್ನು ರಚಿಸಬಹುದಾಗಿದೆ. ಈ ಪ್ರಾಕ್ತನಶಾಸ್ತ್ರಧಾರಗಳಲ್ಲದೇ 'ಲೋಕ ವಿಭಾಗ' ಎನ್ನುವ ದಿಗಂಬರ ಜೈನ ಪರಂಪರೆಗೆ ಸೇರಿದ ಕೃತಿಯೊಂದು ಸಹ ಇತಿಹಾಸಕಾರರಿಗೆ ಲಭ್ಯವಿದೆ. ಈ ಕೃತಿ ಕ್ರಿ.ಶ. ಐದನೆ ಶತಮಾನದ ಮಧ್ಯಭಾಗಕ್ಕೆ ಸೇರಿದುದಾಗಿದ್ದು, ಪಲ್ಲವ ವಂಶಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಯನ್ನು ನೀಡುತ್ತದೆ.

ಮೊದಲನೇ ಹಂತದಲ್ಲಿ ಪಲ್ಲವರು ಕ್ರಿ.ಶ. ನಾಲ್ಕನೇ ಶತಮಾನದ ಪ್ರಾರಂಭದಿಂದ ಕ್ರಿ.ಶ. ಆರನೇ ಶತಮಾನದ ಮಧ್ಯ ಭಾಗದವರೆಗೂ ತಮಿಳುನಾಡಿನ ಒಂದು ಭಾಗವನ್ನು ಆಳಿದರು. ನಮಗೆ ಲಭ್ಯವಿರುವ ಪ್ರಾಕ್ತನ ಶಾಸ್ತ್ರಧಾರಗಳ ಪ್ರಕಾರ ಎರಡುವರೆ ಶತಮಾನದ ಅವಧಿಯಲ್ಲಿ ಹದಿನಾರು ಪಲ್ಲವ ದೊರೆಗಳು ಪಲ್ಲವ ರಾಜ್ಯವನ್ನಾಳಿದ್ದಾರೆ. ಪ್ರಾರಂಭಿಕ ಹಂತದ ದೊರೆಗಳಲ್ಲಿ ಪ್ರಮುಖರಾದವರೆಂದರೆ ಮೊದಲನೇ ನರಸಿಂಹವರ್ಮನ್, ಶಿವಸ್ಕಂದವರ್ಮನ್, ವೀರಕುರ್ಚ್, ವಿಷ್ಣುಗುಪ್ತ, ಕುಮಾರ ವಿಷ್ಣುವೀರವರ್ಮ ಹಾಗೂ ಎರಡನೇ ಸ್ಕಂದವರ್ಮ. ಸಿಂಹವರ್ಮನ್ ಎಂಬ ಪಲ್ಲವ ದೊರೆ ಕ್ರಿ.ಶ. ಸುಮಾರು 300ರಲ್ಲಿ ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಅಲಹಬಾದ್ ಸ್ತಂಭಶಾಸನ ಸಮುದ್ರಗುಪ್ತನಿಂದ ಸೋಲಿಸಲ್ಪಟ್ಟ ವಿಷ್ಣುಗೋಪನ್ನು ಉಲ್ಲೇಖಿಸುತ್ತದೆ. ಸಮುದ್ರ ಗುಪ್ತನ ದಕ್ಷಿಣ ಪಥದ ಸೈನಿಕ ದಂಡೆಯಾತ್ರೆಯ ಕಾಲವನ್ನು ಕ್ರಿ.ಶ. ಸುಮಾರು 350 ಎಂದು ನಿಗದಿಪಡಿಸಲಾಗಿದೆ. ಈ ಅಂಶದ ಹಿನ್ನೆಲೆಯಲ್ಲಿ ಕ್ರಿ.ಶ. ಸುಮಾರು 350ರಲ್ಲಿ ವಿಷ್ಣುಗೋಪನ್ನು ಕಂಚಿಯಲ್ಲಿ ರಾಜ್ಯವನ್ನಾಳುತ್ತಿದ್ದನೆಂದು ಭಾವಿಸಬಹುದು. ತದನಂತರ ಪಲ್ಲವರು ನೆರೆಹೊರೆಯ ಪ್ರಬಲ ರಾಜರಿಂದ ಸೋಲಿಸಲ್ಪಟ್ಟು ಕಂಚಿಯು ಅವರ ಕೈ ಬಿಟ್ಟು ಹೋಯಿತು. ಈ ಪ್ರಬಲ ದೊರೆ ಅಥವ ವಂಶಯಾವುದೆಂದು ಖಚಿತವಾಗಿ ಹೇಳಲು ಯಾವುದೇ ಆಧಾರಗಳು ಲಭ್ಯವಿಲ್ಲ. ಕೆಲವು ಇತಿಹಾಸಕಾರರು ಚೋಳರು ಅಥವ ಕಳಭ್ರರು ಪಲ್ಲವರನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡಿರಬಹುದೆಂದು ವಾದಿಸುತ್ತಾರೆ. ಕುಮಾರ ವಿಷ್ಣು ಪಲ್ಲವರ ಪ್ರಾರಂಭಿಕ ದೊರೆಗಳಲ್ಲಿ ಪ್ರಖ್ಯಾತನಾದವನು. ಈತ ಶತ್ರುಗಳನ್ನು ಸೋಲಿಸಿ ಮತ್ತೊಮ್ಮೆ ಕಂಚಿಯನ್ನು ವಶಪಡಿಸಿಕೊಂಡನು.

## 12.4 ಪ್ರತಿಷ್ಠಿತ ಪಲ್ಲವ ದೊರೆಗಳು

*ಆಧಾರಗಳು:*

ಪ್ರತಿಷ್ಠಿತ ಪಲ್ಲವದೊರೆಗಳ ಸಾಧನೆಗಳನ್ನು ಅಧ್ಯಯನ ಮಾಡಲು ನಮಗೆ ಅನೇಕ ಶಿಲಾಶಾಸನಗಳು ಹಾಗೂ ಸಮಕಾಲೀನ ಸಾಹಿತ್ಯಗಳು ಲಭ್ಯವಿದೆ. ಶಿಲಾ ಶಾಸನಗಳು ಸಾಮಾನ್ಯವಾಗಿ ಗುಹಾಲಯ ಹಾಗೂ ದೇವಾಲಯಗಳಲ್ಲಿ ಕಂಡು ಬರುತ್ತವೆ. ಈ ಶಿಲಾಶಾಸನಗಳು ಸಂಕ್ಷಿಪ್ತವಾಗಿದ್ದರೂ, ಆಳುತ್ತಿದ್ದ ದೊರೆ ಹಾಗೂ ಶಿಲಾಶಾಸನವನ್ನು ಕೊರೆಸಿದ ವರ್ಷವನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಸಮಕಾಲೀನ ಸಾಮಾಜಿಕ ಆಚರಣೆಗಳು ಹಾಗೂ ಸಾಮಾಜಿಕ ಸಂಸ್ಥೆಗಳ ಬಗೆಗೂ ಸಹ ಬೆಳಕನ್ನು ಈ ಶಿಲಾ ಶಾಸನಗಳು ಚೆಲ್ಲುತ್ತವೆ. ಗಂಗಾ ಹಾಗೂ ಪಾಂಡ್ಯ ದೊರೆಗಳು ಕೊರೆಸಿರುವ ಅನೇಕ ಶಿಲಾಶಾಸನಗಳಲ್ಲೂ ಈ ಪಲ್ಲವ ದೊರೆಗಳ ಬಗೆಗೆ ಕೆಲವೊಂದು ಮಾಹಿತಿ ಲಭ್ಯವಾಗುತ್ತದೆ. ಈ ಕಾಲಕ್ಕೆ ಸಂಬಂಧಿಸಿದಂತೆ ಲಭ್ಯವಾಗಿರುವ ಸಾಹಿತ್ಯ ಕೃತಿಗಳು ತಮಿಳು ಭಾಷೆಯಲ್ಲಿವೆ. ಈ ತಮಿಳು ಪ್ರದೇಶದ ಕೃತಿಗಳು ಬಹು ಪಾಲು ಧಾರ್ಮಿಕ ಕೃತಿಗಳಾಗಿವೆ. ಈ ಧಾರ್ಮಿಕ ಕೃತಿಗಳಲ್ಲಿ ಕಂಡು ಬರುವ ಐತಿಹಾಸಿಕ ಅಂಶಗಳು ಪರಿಮಿತವಾಗಿದೆ. ಈ ಕಾಲದ ರಾಜಕೀಯ ವ್ಯವಸ್ಥೆಯ

ಬಗ್ಗೆ ಬೆಳಕು ಬೀರಬಹುದಾದ ಕೃತಿಗಳಲ್ಲಿ ಪ್ರಮುಖವಾದುದೆಂದರೆ ಮಹೇಂದ್ರವರ್ಮನ 'ಮತ್ತ ವಿಲಾಸಪ್ರಹಸನ' ದಂಡಿಯ 'ಅವಂತಿಸುಂದರಿ ಕಥಾ' ಹಾಗೂ ಅನಾಮಧೇಯನಿಂದ ರಚಿಸಲ್ಪಟ್ಟಿರುವ 'ನಂದಿ ಕ್ಯಾಲಮ್ ಬಾಕಮ್', ಈ ಕಾಲದಲ್ಲಿ ದಕ್ಷಿಣ ಭಾರತಕ್ಕೆ ಭೇಟಿ ನೀಡಿದ್ದ ಪ್ರಸಿದ್ಧ ಚೀನಿಯಾತ್ರಿಕ ಹ್ಯೂಯೆನ್ ತ್ಸಾಂಗ್ ತನ್ನ ವರದಿಯಲ್ಲಿ ತಮಿಳುನಾಡು ಸಮಾಜ, ಧರ್ಮ ಇತ್ಯಾದಿಗಳನ್ನು ಕುರಿತಂತೆ ಕೆಲವು ವಿವರಗಳನ್ನು ನೀಡಿದ್ದಾನೆ. ಈ ಎಲ್ಲಾ ಆಧಾರಗಳನ್ನು ಅಧ್ಯಯನ ಮಾಡಿ ಪ್ರತಿಷ್ಠಿತ ಪಲ್ಲವ ದೊರೆಗಳ ಬಗೆಗಿನ ಇತಿಹಾಸವನ್ನು ರಚಿಸಬಹುದು.

ಪಲ್ಲವ ದೊರೆಗಳ ಪೈಕಿ ಪ್ರಥಮ ಪ್ರಮುಖವಾದ ದೊರೆಯೆಂದರೆ ಸಿಂಹವರ್ಮನ್ ಈ ಪ್ರತಿಷ್ಠಿತ ಪಲ್ಲವ ದೊರೆ ಸುಮಾರು ಕ್ರಿ.ಶ. 550 ರಿಂದ ಕ್ರಿ.ಶ. 600 ಅವಧಿಯಲ್ಲಿ ಕಂಚಿಯಿಂದ ಪಲ್ಲವ ರಾಜ್ಯವನ್ನಾಳಿದನು. ಈತನ ಕಾಲದಲ್ಲಿ ಪಲ್ಲವ ರಾಜ್ಯವು ವಿಸ್ತಾರವಾದ ರಾಜ್ಯವಾಗಿರಲಿಲ್ಲ. ಈತ ಶೈವ ಸಂಪ್ರದಾಯವನ್ನು ಅನುಸರಿಸಿದ ದೊರೆಯಾಗಿದ್ದು ಅಯಿಡಿಗಲ್ ಕಡವರಕನ್ ಎಂಬ ಶೈವ ಸಂತನೊಬ್ಬನ ಅನುಯಾಯಿಯಾಗಿದ್ದು, ಆ ಸಂತನಿಗೆ ರಾಜಾಶ್ರಯವನ್ನು ನೀಡಿದ್ದನು. ಈ ದೊರೆ ಯುದ್ಧ ಪ್ರಿಯನಾಗಿರಲಿಲ್ಲವೆಂತಲೂ ಮತ್ತು ಪ್ರಾಯಶಃ ಇದೇ ಕಾರಣದಿಂದ ಪಲ್ಲವ ಸಿಂಹಾಸತವನ್ನು ತ್ಯಜಿಸಿ ತನ್ನ ಪುತ್ರನನ್ನು ಪಲ್ಲವ ದೊರೆಯಾಗಲು ಅವಕಾಶ ಕಲ್ಪಿಸಿದನೆಂದು ಸಮಕಾಲೀನ ಆಧಾರಗಳು ತಿಳಿಸುತ್ತವೆ. ಈ ಪುತ್ರನು ಯುವರಾಜನಾಗಿದ್ದುಕೊಂಡು ಪಲ್ಲವ ರಾಜ್ಯದ ಏಳಿಗೆಯಲ್ಲಿ ಪ್ರಮುಖ ಪಾತ್ರವನ್ನುವಹಿಸಿದ್ದನೆಂದು ತಿಳಿದು ಬರುತ್ತದೆ.

ಸಿಂಹವರ್ಮನಂತರ ಪಲ್ಲವರಾಜ್ಯವನ್ನಾಳಿದ ಪ್ರತಿಷ್ಠಿತ ದೊರೆಯೆಂದರೆ ಸಿಂಹವಿಷ್ಣು. ಈತ ಪಲ್ಲವ ಇತಿಹಾಸದಲ್ಲಿ ಅವನಿಸಿಂಹ ಹಾಗೂ ಚತುರ್ ಮಲ್ಲ ಎಂಬ ಹೆಸರಿನಿಂದಲೂ ಸಹ ಪ್ರಸಿದ್ಧನಾಗಿದ್ದಾನೆ. 'ಮತ್ತವಿಲಾಸ ಪ್ರಹಸನ' ಕೃತಿಯು ಸಹ ಈತನ ಹೆಸರನ್ನು ಉಲ್ಲೇಖಿಸುತ್ತದೆ. ಸಿಂಹ ವಿಷ್ಣುವಿನ ಆಳ್ವಿಕೆ ಪ್ರಾರಂಭದೊಂದಿಗೆ ಪಲ್ಲವ ಶಿಲ್ಪಕಲೆಯ ಪರಂಪರೆಯ ಪ್ರಾರಂಭವನ್ನು ಸಹ ನಾವು ಕಾಣುತ್ತೇವೆ. ಸಿಯ್ಯಮಂಗಲದ ಗುಹಾದೇವಾಲಯವನ್ನು ಈ ದೊರೆ ಕೊರೆಸಿದನು. ಈತನ ಆಳ್ವಿಕೆಯ ಕಾಲದಲ್ಲಿ ಗಂಗ ರಾಜ್ಯದಲ್ಲಿ ಉದ್ಭವವಾದ ಅಂತರ್ ಕಲಹವನ್ನು ಸಂಧಾನದ ಮೂಲಕ ಈತ ಬಗೆಹರಿಸಿದನೆಂದೂ ಸಹ ತಿಳಿದುಬರುತ್ತದೆ. ಅನೇಕ ವಿದ್ವಾಂಸರಿಗೆ ಹಾಗೂ ಕವಿಗಳಿಗೆ ಈತ ರಾಜಾಶ್ರಯವನ್ನು ನೀಡಿದ್ದನು. ಸುಪ್ರಸಿದ್ಧ ಸಂಸ್ಕೃತ ಕವಿ ಭಾರವಿ ಈತನ ಆಸ್ಥಾನವಾಸಿಯಾಗಿದ್ದನು ಎಂದು ತಿಳಿದು ಬರುತ್ತದೆ. ಈತ ಯುದ್ಧ ಪ್ರಿಯನಾಗಿದ್ದು, ಯುದ್ಧಗಳ ಮೂಲಕ ಶತ್ರುಗಳನ್ನು ಜಯಿಸಿ ತನ್ನ ರಾಜ್ಯವನ್ನು ವಿಸ್ತರಿಸಿದನು. ಪ್ರಬಲರಾಗಿದ್ದ ಕಳಭ್ರರನ್ನು ಸೋಲಿಸಿ ಕಾವೇರಿಯ ತೀರದವರೆವಿಗೂ ತನ್ನ ರಾಜ್ಯವನ್ನು ವಿಸ್ತರಿಸಿದನು. ಕಳಭ್ರರಲ್ಲದೆ, ಸಿಂಹ ವಿಷ್ಣು ಚೋಳ, ಪಾಂಡ್ಯ ಹಾಗೂ ಮಲವರಯರನ್ನು ಸಹ ಯುದ್ಧದಲ್ಲಿ ಸೋಲಿಸಿದನೆಂದು ತಿಳಿದು ಬರುತ್ತದೆ. ಸಿಂಹವಿಷ್ಣು ವೈಷ್ಣವ ಪಂಥದ ಅನುಯಾಯಿಯಾಗಿದ್ದನು.

## 12.4.1 ಒಂದನೇ ಮಹೇಂದ್ರವರ್ಮನ್

ಒಂದನೇ ಮಹೇಂದ್ರವರ್ಮನ್ ಪಲ್ಲವ ರಾಜ್ಯವನ್ನು ಕ್ರಿ.ಶ. 600 ರಿಂದ ಕ್ರಿ.ಶ. 630 ರವರೆಗೆ ಆಳಿದನು. ಈತ ಪ್ರತಿಷ್ಠಿತ ದೊರೆ ಸಿಂಹವಿಷ್ಣುವಿನ ಪುತ್ರನಾಗಿದ್ದನು. ಅನೇಕ ಇತಿಹಾಸಕಾರರು ಈತನನ್ನು ಪಲ್ಲವ ದೊರೆಗಳಲ್ಲೆಲ್ಲ ಅತ್ಯಂತ ಪ್ರಮುಖನಾದವನೆಂದು ಅಭಿಪ್ರಾಯ ಪಟ್ಟಿದ್ದಾರೆ. ಈತ ಅನೇಕ ಗುಣಗಳನ್ನು ಹಾಗೂ ವಿವಿಧ ಪ್ರವೃತ್ತಿಯನ್ನು ಹೊಂದಿದ್ದನೆಂದು ಆತನ ಬಿರುದುಗಳಿಂದ ತಿಳಿದು ಬರುತ್ತದೆ. ಮಹೇಂದ್ರವರ್ಮನ್‌ನನ್ನು ಚತುರ್ ಮಲ್ಲ, ಗುಣಭಾರ, ಮತ್ತವಿಲಾಸ,

ಸಂಕೀರ್ಣ ಜತಿ, ವಿಚಿತ್ರಚಿತ್ತಾ, ಅವಂತಿ ಬಾಜನ, ಇತ್ಯಾದಿ ಬಿರುದುಗಳಿಂದ ಕರೆಯಲಾಗಿದೆ. 'ಕಲಹ ಪ್ರಿಯ' ಎಂಬ ಅನರ್ಥನಾಮದಿಂದಲೂ ಸಹ ಈತ ಕರೆಯಲ್ಪಟ್ಟಿದ್ದಾನೆ. ಈತ ಎಂದೂ ಕಲಹ ಪ್ರಿಯನೂ ಹಾಗೂ ಯುದ್ಧ ಪ್ರಿಯನೂ ಆಗಿರಲಿಲ್ಲ. ಈತನು ಖ್ಯಾತಿಗಳಿಸಿದ್ದು ರಾಜ್ಯ ವಿಸ್ತರಣೆಯ ಮೂಲಕವಲ್ಲ. ಈತನು ಲಲಿತ ಕಲೆ, ಶಿಲ್ಪ ಕಲೆ ಹಾಗೂ ಸಾಹಿತ್ಯಕ್ಕೆ ನೀಡಿದ ಪ್ರೋತ್ಸಾಹಗಳಿಂದಾಗಿ ಪಲ್ಲವ ಇತಿಹಾಸದಲ್ಲಿ ಮಿನುಗುತಾರೆಯಾಗಿದ್ದಾನೆ.

ಒಂದನೇ ಮಹೇಂದ್ರವರ್ಮನು ಸಿಂಹಾಸನವನ್ನೇರಿದ ಕಾಲಕ್ಕೆ ಪಲ್ಲವರಾಜ್ಯವು ವಿಸ್ತಾರವಾಗಿತ್ತು. ಈತನ ಪಲ್ಲವ ರಾಜ್ಯಪೂರ್ವದ ಆಂಧ್ರದ ಭಾಗಗಳನ್ನು, ಕೋರಮಂಡಲತೀರ ಪ್ರದೇಶ ಹಾಗೂ ಕೃಷ್ಣ ಮತ್ತು ಕಾವೇರಿ ನಡುವಣ ಭೂಭಾಗವನ್ನು ಒಳಗೊಂಡಿತ್ತು. ಈತ ಸಮರ ಪ್ರಿಯನಾಗಿರಲಿಲ್ಲ. ಆದುದರಿಂದ ಪಲ್ಲವ ರಾಜ್ಯದ ವಿಸ್ತರಣೆಗೆ ಬಹುವಾಗಿ ಶ್ರಮಿಸಲಿಲ್ಲ. ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಬಾದಾಮಿ ಚಾಳುಕ್ಯರು ಪಲ್ಲವರನ್ನು ಸೋಲಿಸಿ ಪಲ್ಲವ ರಾಜ್ಯದ ಅನೇಕ ಭಾಗಗಳನ್ನು ವಶಪಡಿಸಿಕೊಂಡರು. ಮಹೇಂದ್ರವರ್ಮನ್ ಕಾಲದಲ್ಲಿ ಪಲ್ಲವ ರಾಜ್ಯ ಉತ್ತರದಲ್ಲಿ ತಿರುಪತಿ ಬೆಟ್ಟಗಳ ಶ್ರೇಣಿ ಮತ್ತು ದಕ್ಷಿಣದಲ್ಲಿ ತಿರುಚನಪಳ್ಳಿಯ ಮಧ್ಯದಲ್ಲಿರುವ ಭೂಭಾಗಕ್ಕೆ ಮಾತ್ರ ಸೀಮಿತವಾಗಿತ್ತು. ಇಮ್ಮಡಿ ಪುಲಿಕೇಶಿ ಅನೇಕ ಬಾರಿ ಪಲ್ಲವ ರಾಜ್ಯದ ಉತ್ತರ ಭಾಗದಲ್ಲಿ ಆಕ್ರಮಣವನ್ನು ನಡೆಸಿದುದಲ್ಲದೇ ಕೆಲವೊಮ್ಮೆ ಪಲ್ಲವ ರಾಜಧಾನಿ ಕಂಚಿಯವರೆಗೂ ದಂಡೆತ್ತಿ ಹೋಗಿದ್ದನು. ಒಂದನೇ ಮಹೇಂದ್ರವರ್ಮನು ಚಾಲುಕ್ಯ ಇಮ್ಮಡಿ ಪುಲಿಕೇಶಿಯ ಆಕ್ರಮಣವನ್ನು ತಡೆಯುವ ಶಕ್ತಿಯನ್ನು ಹೊಂದಿರಲಿಲ್ಲ. ಇಮ್ಮಡಿ ಪುಲಿಕೇಶಿಯ ಐಹೊಳೆ ಶಿಲಾ ಶಾಸನ ಪಲ್ಲವರನ್ನು ಯುದ್ಧದಲ್ಲಿ ಸೋಲಿಸಿದ ಬಗೆಗೆ ಅನೇಕ ವಿವರಗಳನ್ನು ನೀಡುತ್ತದೆ.

ಮಹೇಂದ್ರವರ್ಮ ಪಲ್ಲವ ಸಿಂಹಾಸನಾರೋಹಣ ಮಾಡಿದ ಸಮಯದಲ್ಲಿ ಜೈನ ಧರ್ಮಿಯನಾಗಿದ್ದನು. ಜೈನ ಧರ್ಮದ ಅನುಯಾಯಿಯಾಗಿ ಇತರ ಧರ್ಮಿಯರನ್ನು ಹಿಂಸಿಸಿದನು. ಇತರ ಧರ್ಮಿಯರಿಗೆ ಸೇರಿದ ದೇವಸ್ಥಾನ ಹಾಗೂ ಮಂದಿರಗಳನ್ನು ನಾಶಪಡಿಸಿದನು. ಈತ ಪಲ್ಲವದೊರೆಯಾದ ಕೆಲವು ವರ್ಷಗಳ ನಂತರ ಪ್ರಸಿದ್ಧ ಶೈವ ಸಂತರಾದ ತಿರುನವಕ್ಕರಸು ಅವರ ಪ್ರಭಾವಕ್ಕೆ ಒಳಗಾಗಿ ಶೈವ ಧರ್ಮಕ್ಕೆ ಮತಾಂತರ ಹೊಂದಿದನು. ತಿರುನವಕ್ಕರಸು ಸಹ ಜೈನ ಧರ್ಮಿಯನಾಗಿದ್ದು ನಂತರ ಶೈವ ಧರ್ಮವಾಲಂಬಿಯಾಗಿ ಶೈವ ಸಂತನೆನಿಸಿಕೊಂಡನು. ಶೈವ ಧರ್ಮವನ್ನು ಅನುಸರಿಸಲು ಪ್ರಾರಂಭಿಸಿದ ನಂತರ ಅನೇಕ ಶೈವ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದುದಲ್ಲದೇ ನೂತನ ದೇವಾಲಯಗಳನ್ನು ಸಹ ನಿರ್ಮಿಸಿದನು. ಈತ ಕೆಲವು ಜೈನ ಬಸದಿಗಳನ್ನು ಹಾಳುಗೆಡವಿ ಆಸ್ಥಳದಲ್ಲಿ ಶೈವ ದೇವಾಲಯಗಳನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಉತ್ತರ ಆರ್ಕಾಟ್ ಜಿಲ್ಲೆಯ ಅರಕೋಣಂನಲ್ಲಿ ವಿಷ್ಣುವಿನ ಗುಹಾಲಯವನ್ನು ಸಹ ಕೊರೆಯಿಸಿದನು.

ಅನೇಕ ಗುಹಾಲಯಗಳ ನಿರ್ಮಾಣಕ್ಕೆ ಕಾರಣನಾದುದಲ್ಲದೇ ಮಹೇಂದ್ರವರ್ಮನ್ ಚಿತ್ರಕಲೆಗೂ ಸಹ ಅಪಾರವಾದ ಪ್ರೋತ್ಸಾಹವನ್ನು ನೀಡಿದನು. ಚಿತ್ರಕಲೆಗೆ ಸಂಬಂಧಿಸಿದಂತೆ 'ದಕ್ಷಿಣ ಚಿತ್ರ' ಎಂಬ ಕೃತಿಯನ್ನು ಈತನ ಕಾಲದಲ್ಲಿ ರಚಿಸಲಾಯಿತು. ಕೃತಿಯ ಕರ್ತೃ ಯಾರೆಂದು ಇದುವರೆವಿಗೂ ಖಚಿತವಾಗಿ ತಿಳಿದು ಬಂದಿಲ್ಲ. ಪುದುಕೋಟೆಯ ಬಳಿಯಿರುವ ಸಿತ್ತನ್ನವಾಸಲ್ ಗುಹಾಂತರ ದೇವಾಲಯಗಳ ಗೋಡೆಗಳ ಮೇಲಿರುವ ವರ್ಣಚಿತ್ರಗಳು ಮಹೇಂದ್ರವರ್ಮನ ಕಾಲದಲ್ಲಿ ಚಿತ್ರಿಸಲ್ಪಟ್ಟವು ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಈತ ಸಂಗೀತ

ಪ್ರೇಮಿಯಾಗಿದ್ದು ಅನೇಕ ಸಂಗೀತಕಾರರಿಗೆ ತನ್ನ ಆಸ್ಥಾನದಲ್ಲಿ ಆಶ್ರಯವನ್ನು ನೀಡಿದ್ದನು. ಈತ ಸ್ವತಃ ವಿದ್ವಾಂಸ ಹಾಗೂ ನಾಟಕಕಾರನಾಗಿದ್ದು ಎರಡು ಪ್ರಸಿದ್ಧ ನಾಟಕಗಳನ್ನು ರಚಿಸಿದನು. ಅವಗಳೆಂದರೆ 'ಮತ್ತವಿಲಾಸ ಪ್ರಹಸನ' ಮತ್ತು 'ಭಾಗವತಜ್ಜುಕೇಯಮ್' ಈ ಎರಡು ಕೃತಿಗಳು ಸಂಸ್ಕೃತ ಭಾಷೆಯಲ್ಲಿವೆ.

ಮಹೇಂದ್ರವರ್ಮನ ಆಳ್ವಿಕೆಯ ಕಾಲದಲ್ಲಿ ಭಕ್ತಿ ಚಳುವಳಿಯು ಒಂದು ನಿರ್ದಿಷ್ಟ ರೂಪವನ್ನು ತಾಳಿತು. ಶೈವ ಮತ್ತು ವೈಷ್ಣವ ಭಕ್ತಿ ಚಳುವಳಿಗಳು ಈತನ ಆಳ್ವಿಕೆಯ ಕಾಲದಲ್ಲಿ ಪ್ರಮುಖವಾಗಿ ಬೇರೂರಿದವು. ಈತ ತನ್ನ ಹೆಸರಿನಲ್ಲಿ ಮಹೇಂದ್ರ ಮಂಗಲಂ ಎಂಬ ನೂತನ ಪಟ್ಟಣ ಒಂದರ ನಿರ್ಮಾಣವನ್ನು ಪೂರ್ಣಗೊಳಿಸಿದನು. ಈತನ ಕಾಲದಲ್ಲಿ ಅನೇಕ ಕೆರೆಕಟ್ಟೆಗಳು ಹಾಗೂ ಇತರ ಲೋಕೋಪಯೋಗಿ ಕಟ್ಟಡಗಳು ನಿರ್ಮಾಣಗೊಂಡವು.

ಒಟ್ಟಿನಲ್ಲಿ ಈತನ ಆಳ್ವಿಕೆಯಲ್ಲಿ ಅನೇಕ ನೂತನ ಪರಂಪರೆಗಳು ಪ್ರಾರಂಭಿಸಲ್ಪಟ್ಟವು. ಈ ಪರಂಪರೆಗಳು ಮುಂದಿನ ಶತಮಾನಗಳಲ್ಲಿ ದಕ್ಷಿಣ ಭಾರತದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದವು.

## 12.4.2 ಒಂದನೇ ನರಸಿಂಹವರ್ಮನ್

ಒಂದನೇ ನರಸಿಂಹವರ್ಮನ ಪಲ್ಲವರ ಪ್ರತಿಷ್ಠಿತ ದೊರೆಗಳಲ್ಲಿ ಒಬ್ಬ. ಈತ ತನ್ನ ತಂದೆ ಒಂದನೇ ಮಹೇಂದ್ರವರ್ಮನ ಪರಂಪರೆಗಳನ್ನು ಮುಂದುವರೆಸಿದನು. ಈತನ ಆಳ್ವಿಕೆಯ ಕಾಲ ಕ್ರಿ.ಶ. 630 ರಿಂದ ಕ್ರಿ.ಶ. 668 ರ ಅವಧಿ. ಚಾಳುಕ್ಯ ಪಲ್ಲವರ ಕಲಹ ಈತನ ಕಾಲದಲ್ಲೂ ಮುಂದುವರಿಯಿತು. ಈತ ತನ್ನ ತಂದೆಯಂತಿರಲಿಲ್ಲ. ಈ ಯುದ್ಧ ಪ್ರಿಯನಾಗಿದ್ದು, ಅಪ್ರತಿಮ ವೀರನೆನಿಸಿಕೊಂಡವನು. ಅನೇಕ ದಂಡಯಾತ್ರೆಗಳ ಮೂಲಕ ಪಲ್ಲವರಾಜ್ಯದಗಡಿಗಳನ್ನು ಈತ ವಿಸ್ತರಿಸಿದನು. 'ಮಾಮಲ್ಲ' ಎಂಬ ಹೆಸರಿನಿಂದ ಈತ ಜನಪ್ರಿಯನಾಗಿದ್ದನು. ಕೆಲವು ಚರಿತ್ರಕಾರರ ಪ್ರಕಾರ ಮಾಮಲ್ಲಪುರಂ ನಗರವು ಇತನ ಹೆಸರಿನಿಂದ ನಿರ್ಮಿಸಲ್ಪಟ್ಟಿತು.

ಒಂದನೇ ನರಸಿಂಹವರ್ಮನ ಆಳ್ವಿಕೆ ಎರಡು ದಂಡಯಾತ್ರೆಗಳಿಗೆ ಪ್ರಸಿದ್ಧಿಯಾಗಿದೆ. ಒಂದನೇ ದಂಡಯಾತ್ರೆಯಲ್ಲಿ ಈತ ಚಾಳುಕ್ಯ ರಾಜಧಾನಿ ಬಾದಾಮಿ ಅಥವ ವಾತಾಪಿಯನ್ನು ಆಕ್ರಮಿಸಿ, ಎರಡನೇ ದಂಡಯಾತ್ರೆಯಲ್ಲಿ ಪಲ್ಲವ ನೌಕದಳದ ಸಹಾಯದೊಂದಿಗೆ ಶ್ರೀಲಂಕಾದ ದೊರೆಯನ್ನು ಮುತ್ತಿ ಸೋಲಿಸಿದನು. ಯುವರಾಜನ ಪಟ್ಟವನ್ನು ಹೊಂದಿದ್ದ ಕಾಲದಲ್ಲೆ ಚಾಳುಕ್ಯರ ಅಕ್ರಮಣವನ್ನು ತಡೆಗಟ್ಟುವುದರಲ್ಲಿ ಈತ ಯಶ್ವಸಿಯಾಗಿದ್ದನು. ಚಾಳುಕ್ಯರ ವಿರುದ್ಧ ಈತ ಗಳಿಸಿದ ವಿಜಯಗಳನ್ನು ಈತನ ಮೊಮ್ಮಗ ಪರಮೇಶ್ವರವರ್ಮನ್ ನೀಡಿದ ಕುರಮ್ ತಾಮ್ರ ಶಾಸನಗಳಲ್ಲಿ ಚಿತ್ರಿತಗೊಂಡಿವೆ. ಚಾಳುಕ್ಯರ ವಿರುದ್ಧ ಮಣಿಮಂಗಲಮ್ ಕದನದಲ್ಲಿ ಜಯಗಳಿಸಿದ ನಂತರ ಪಲ್ಲವ ಸೈನ್ಯ ಚಾಳುಕ್ಯರ ರಾಜಧಾನಿಯತ್ತ ಧಾವಿಸಿತು. ಈ ದಂಡಯಾತ್ರೆಯ ಸಮಯದಲ್ಲಿ ಸೈನ್ಯಾಧಿಕಾರಿ ಅಥವ ದಂಡನಾಯಕನಾಗಿದ್ದವನು ಪರಂಜ್ಯೋತಿ ಎಂಬುವನು. ಈತ ಶೈವ ಪಂಥದ ಅನುಯಾಯಿಯಾಗಿದ್ದನು. ಕ್ರಿ.ಶ. 642-43 ರ ಅವಧಿಯಲ್ಲಿ ನಡೆದ ಈ ಚಾಳುಕ್ಯ ಪಲ್ಲವ ಯುದ್ಧದಲ್ಲಿ ಒಂದನೇ ನರಸಿಂಹವರ್ಮನು ಸ್ವತಃ ಭಾಗವಹಿಸಿ ಪಲ್ಲವ ಸೈನ್ಯವನ್ನು ಮುನ್ನಡೆಸಿದನು. ಈ ಯುದ್ಧದಲ್ಲಿ ಪ್ರಾಯಶಃ ಚಾಳುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿ ಹತನಾದನು. ವಿಜಯಿ ಪಲ್ಲವ ಸೈನ್ಯ ಚಾಳುಕ್ಯ ರಾಜಧಾನಿಯನ್ನು ಲೂಟಿಮಾಡಿತು. 'ಪೆರಿಯ ಪುರಾಣಮ್' ಕೃತಿಯು

ಪಲ್ಲವ ಸೈನಿಕರು ಬಾದಾಮಿ ನಗರವನ್ನು ಲೂಟಿ ಮಾಡಿ ಹಾಳುಗೆಡಿಸಿದುದನ್ನು ಚಿತ್ರಿಸುತ್ತದೆ. ಪಲ್ಲವರ ನಡತೆ ಈ ವಿಚಾರದಲ್ಲಿ ಚಾಳುಕ್ಯ ನಡತೆಗೆ ವಿರುದ್ಧವಾಗಿತ್ತು. ಕ್ರಿ.ಶ. 635ರಲ್ಲಿ ಚಾಳುಕ್ಯ ಸೈನಿಕರು ಕಂಚಿನಗರವನ್ನು ತಮ್ಮ ವಶಕ್ಕೆ ತೆಗೆದು ಕೊಂಡಿದ್ದ ಸಂದರ್ಭದಲ್ಲಿ ಚಾಳುಕ್ಯ ಚಕ್ರವರ್ತಿ ಎರಡನೇ ವಿಕ್ರಮಾದಿತ್ಯನು ಸ್ಥಳಿಯ ದೇವಾಲಯಗಳಿಗೆ ವಿವಿಧ ರೀತಿಯ ದಾನಗಳನ್ನು ನೀಡಿದ್ದನು. ಪಲ್ಲವರು ಈ ರೀತಿಯ ವಿಶಾಲಮನೋಭಾವನೆಯನ್ನು ಹೊಂದಿರಲಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

ಒಂದನೇ ನರಸಿಂಹವರ್ಮನ್ ಕೈಗೊಂಡ ಎರಡನೇ ಪ್ರಮುಖವಾದ ದಂಡಯಾತ್ರೆಯೆಂದರೆ ಶ್ರೀಲಂಕಾದ ವಿರುದ್ಧ ನಡೆಸಿದ ನೌಕಾಧಾಳಿ. ಈ ನೌಕಾಧಾಳಿಗೆ ಕಾರಣವಾದ ಘಟನೆಯನ್ನು ಶ್ರೀಲಂಕಾದ ಬೌದ್ಧ ಧರ್ಮದ ಪರಂಪರೆಯನ್ನು ವಿವರಿಸುವ ಕೃತಿ 'ಮಹಾವಂಶ' ದಲ್ಲಿ ಉಲ್ಲೇಖವಾಗಿದೆ. ಶ್ರೀಲಂಕಾದ ಸ್ಥಳಿಯ ದೊರೆಯಾದ ಎರಡನೇ ಕಶ್ಯಪನ ಪುತ್ರ ಮನವರ್ಮನ್. ಮನವರ್ಮನ್ ನನ್ನು ಶ್ರೀಲಂಕಾದಿಂದ ದೇಶಭ್ರಷ್ಟನನ್ನಾಗಿ ಮಾಡಿ ಹೊರದೂಡಲಾಯಿತು. ಆತ ಪಲ್ಲವರ ಆಶ್ರಯವನ್ನು ಕೋರಿ ಕಂಚಿಗೆ ಆಗಮಿಸಿದನು. ನರಸಿಂಹವರ್ಮನ್ ಮತ್ತು ಮನವರ್ಮನ್ ಶೀಘ್ರದಲ್ಲೇ ಗೆಳೆಯರಾದರು. ತದನಂತರ ಮನವರ್ಮನ್ ನರಸಿಂಹವರ್ಮನ್ ಕೈಗೊಂಡ ದಂಡ ಯಾತ್ರೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದನು. ಆದರಲ್ಲೂ ವಿಶೇಷವಾಗಿ ಚಾಳುಕ್ಯರ ವಿರುದ್ಧದ ದಂಡಯಾತ್ರೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರಿಂದ ಅವರ ಸ್ನೇಹ ಗಾಢವಾಯಿತು. ತನ್ನ ಕೃತಜ್ಞತೆಯನ್ನು ತೋರಿಸಲು ಇಚ್ಛಿಸಿದ ನರಸಿಂಹವರ್ಮನ್ ಮನವರ್ಮನನ್ನು ಶ್ರೀಲಂಕಾದ ಸಿಂಹಾಸನದ ಮೇಲೆ ಸ್ಥಾಪಿಸಲು ಬಯಸಿದನು. ಈ ಅಭಿಲಾಷೆಯ ಹಿನ್ನೆಲೆಯಲ್ಲಿ ನರಸಿಂಹವರ್ಮನ್ ಶ್ರೀಲಂಕಾದ ವಿರುದ್ಧ ಎರಡು ನೌಕಧಾಳಿಯನ್ನು ಆಯೋಜಿಸಿ, ಸ್ಥಳಿಯ ದೊರೆಯನ್ನು ಸೋಲಿಸಿ, ಮನವರ್ಮನನ್ನು ಶ್ರೀಲಂಕಾದ ಅಧಿಪತಿಯನ್ನಾಗಿ ಮಾಡಿದನು. ರಸಕೋಡಿ ಶಿಲಾಶಾಸನ ಈ ನೌಕಾದಂಡಯಾತ್ರೆಯ ಬಗೆಗಿನ ವಿವರಗಳನ್ನು ನೀಡುತ್ತದೆ ಹಾಗೂ ಈ ದಂಡಯಾತ್ರೆಯನ್ನು ರಾಮಾಯಣದ ನಾಯಕ ಶ್ರೀರಾಮನು ಶ್ರೀಲಂಕಾದ ವಿರುದ್ಧ ಕೈಗೊಂಡ ದಂಡಯಾತ್ರೆಗೆ ಹೋಲಿಸುತ್ತದೆ.

ನರಸಿಂಹವರ್ಮನ್ ಆಳ್ವಿಕೆಯಕಾಲದ ಒಂದು ಪ್ರಮುಖ ಘಟನೆಯೆಂದರೆ ಪಲ್ಲವರಾಜ್ಯಕ್ಕೆ ಚೀನಿಯಾತ್ರಿಕ ಹ್ಯೂಯನ್ ತ್ಸಾಂಗ್‌ನ ಭೇಟಿ. ಈ ಯಾತ್ರಿಕ ಪಲ್ಲವ ರಾಜಧಾನಿಯನ್ನು ಕ್ರಿ.ಶ. 642 ರ ಪೂರ್ವದಲ್ಲೇ ಬಿಟ್ಟು ಹೋಗಿರಬೇಕೆಂದು ಭಾವಿಸಲಾಗಿದೆ. ಕಾರಣ ಕ್ರಿ.ಶ. 642ರಲ್ಲಿ ಪಲ್ಲವ ಸೈನ್ಯ ಚಾಳುಕ್ಯರನ್ನು ಸೋಲಿಸಿದ ಹಾಗೂ ಇಮ್ಮಡಿ ಪುಲಿಕೇಶಿಯನ್ನು ರಣರಂಗದಲ್ಲಿ ಕೊಂದು ಚಾಳುಕ್ಯ ರಾಜಧಾನಿ ಬಾದಾಮಿಯನ್ನು ಅಕ್ರಮಿಸಿದ ಪ್ರಮುಖ ಬೆಳವಣಿಗೆಯನ್ನು ಹ್ಯೊಯೆನ್ ತ್ಸಾಂಗ್ ತನ್ನ ಕೃತಿಯಲ್ಲಿ ಎಲ್ಲೂ ಉಲ್ಲೇಖಿಸಿಲ್ಲ. ತನ್ನ ಕೃತಿಯಲ್ಲಿ ಹ್ಯೂಯನ್ ತ್ಸಾಂಗ್ ಇಮ್ಮಡಿ ಪುಲಿಕೇಶಿಯನ್ನು ದಕ್ಷಿಣ ಭಾರತದ ಅಧಿಪತಿಯೆಂದು ಬಣ್ಣಿಸಿದ್ದಾನೆ. ಪಲ್ಲವರ ರಾಜ್ಯವನ್ನು ದ್ರಾವಿಡನಾಡು ಎಂಬುದಾಗಿ ಈತ ತಿಳಿಸಿದ್ದಾನೆ. ಆದರೆ ಸ್ಪಷ್ಟವಾಗಿ ತಿಳಿಯದ ಕಾರಣಕ್ಕಾಗಿ ಈತ ಪಲ್ಲವ ದೊರೆಯ ಹೆಸರನ್ನು ತನ್ನ ಕೃತಿಯಲ್ಲಿ ಉಲ್ಲೇಖಿಸಿಲ್ಲ, ಆದರೆ ದ್ರಾವಿಡನಾಡಿಗೆ ಸಂಬಂಧಿಸಿದಂತೆ ಅನೇಕ ಮಹತ್ವದ ವಿಚಾರಗಳನ್ನು ಈತ ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.

ತನ್ನ ತಂದೆಯ ಹೆಜ್ಜೆಯನ್ನು ಅನುಸರಿಸಿದ ನರಸಿಂಹವರ್ಮನ್ ವ್ಯಾಪಕವಾಗಿ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಂಡನು. ಮಾಮಲ್ಲಪುರಮ್‌ನಲ್ಲಿ ಅನೇಕ ಕಟ್ಟಡಗಳ ನಿರ್ಮಾಣಕ್ಕೆ ಈತ ಕಾರಣಕರ್ತನಾದನು. ಗುಹಾಂತರ ದೇವಾಲಯಗಳ ಅಲಂಕರಣದಲ್ಲಿ ಹೆಚ್ಚಿನ ಪ್ರಬುದ್ಧತೆಗೆ

ಪ್ರೋತ್ಸಾಹ ನೀಡಿದನು. ಗುಹಾಲಯಗಳಲ್ಲಿರುವ ಈತನ ಕಾಲದ ಶಿಲಾ ಸ್ತಂಭಗಳು ಸೌಂದರ್ಯ ಹಾಗೂ ಪ್ರಮಾಣದಲ್ಲಿ ಹಿಂದಿಗಿಂತಲೂ ಉತ್ತಮವಾಗಿರುವುದನ್ನು ಗಮನಿಸಬಹುದು. ಮಹಾಬಲಿಪುರಂನಲ್ಲಿರುವ ಧರ್ಮರಾಜ ರಥ ಈತನ ಕಾಲದಲ್ಲಿ ಕಡೆಯಲ್ಪಟ್ಟಿತು. ಹ್ಯೂಯೆನ್ ತ್ಸಾಂಗ್ ಪಲ್ಲವ ದೊರೆಗಳ ಪರಮತ ಸಹಿಷ್ಣತೆಯನ್ನು ಗಮನಿಸಿದ್ದಾನೆ. ನರಸಿಂಹವರ್ಮನ್ ರಾಜ್ಯದಲ್ಲಿ ಬೌದ್ಧರ ಹಾಗೂ ಜೈನರ ಸಂಖ್ಯೆ ಅಪಾರವಾಗಿತ್ತು ಎಂಬ ಅಂಶವನ್ನು ಹ್ಯೂಯೆನ್ ತ್ಸಾಂಗ್ ಒತ್ತಿ ಹೇಳಿದ್ದಾನೆ. ಶೈವಧರ್ಮ ರಾಜಧರ್ಮವಾಗಿತ್ತು. ರಾಜಧಾನಿ ಕಂಚಿಯಲ್ಲಿ ಅನೇಕ ಸಂಘಾರಾಮಗಳಿದ್ದು ಅವುಗಳಲ್ಲಿ ನೂರಾರು ಬಿಕ್ಷುಗಳು ವಾಸಿಸುತ್ತಿದ್ದರೆಂದು ತನ್ನ ಕೃತಿಯಲ್ಲಿ ಚೀನಿಯಾತ್ರಿಕ ತಿಳಿಸಿದ್ದಾನೆ.

ಒಂದನೇ ನರಸಿಂಹವರ್ಮನ್ ಯೋಜಿಸಿದ ಅನೇಕ ದಂಡಯಾತ್ರೆಗಳಿಂದಾಗಿ ಪಲ್ಲವರಾಜ್ಯದ ಆರ್ಥಿಕ ಪರಿಸ್ಥಿತಿ ಸ್ವಲ್ಪಮಟ್ಟಿನ ಸಂಕಷ್ಟಕ್ಕೊಳಗಾಯಿತು. ಇದಲ್ಲದೆ ಕ್ರಿ.ಶ. 650 ರ ಸುಮಾರಿಗೆ ಭೀಕರ ಕ್ಷಾಮವು ಪಲ್ಲವರ ರಾಜ್ಯದಲ್ಲಿ ಕಾಣಿಸಿಕೊಂಡಿತು. ಈ ಕ್ಷಾಮದಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಜನ ಹಾಗೂ ಜಾನುವಾರುಗಳು ಹತರಾದರೆಂದು ತಿಳಿದುಬರುತ್ತದೆ. ಅನೇಕ ಸಂಘ ಸಂಸ್ಥೆಗಳು ಹಾಗೂ ಶ್ರೀಮಂತ ವ್ಯಕ್ತಿಗಳು ಕ್ಷಾಮ ಕಾಲದಲ್ಲಿ ನೊಂದವರಿಗೆ ಆಹಾರ ಧಾನ್ಯಗಳನ್ನು ಪೂರೈಸಿ ಸಹಾಯ ಮಾಡಿದ ಬಗೆಗೆ ಉಲ್ಲೇಖಗಳಿವೆ. ನರಸಿಂಹವರ್ಮನ್ ಆಳ್ವಿಕೆಯ ಕಾಲದಲ್ಲಿ ಇನ್ನೂ ಅನೇಕ ಸಣ್ಣ ಪುಟ್ಟ ಕ್ಷಾಮಗಳು ಕಾಣಿಸಿಕೊಂಡಿದ್ದರಿಂದ ಸ್ವಾಭಾವಿಕವಾಗಿ ಜನರ ಆರ್ಥಿಕ ಮಟ್ಟಕುಸಿಯಿತು. ಕೃಷಿಕರು ಈ ಪರಿಸ್ಥಿತಿಯಿಂದಾಗಿ ಸಂತುಷ್ಟರಾಗಿರಲಿಲ್ಲವೆಂದು ನಮಗೆ ತಿಳಿದು ಬರುತ್ತದೆ. ಈ ಸಮಸ್ಯೆಯಿದ್ದರೂ ಸಹ ನರಸಿಂಹವರ್ಮನ್ ಆಳ್ವಿಕೆ ಒಂದು ಉತ್ತಮ ಕಾಲವಾಗಿತ್ತೆಂದು ಕೆ.ಎ. ನೀಲಕಂಠಶಾಸ್ತ್ರಿಯವರು ತಮ್ಮ ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

ಒಂದನೇ ನರಸಿಂಹವರ್ಮನ್ ನಂತರ ಆತನ ಪುತ್ರ ಎರಡನೇ ಮಹೇಂದ್ರವರ್ಮನ್ ಪಲ್ಲವ ರಾಜ್ಯದ ಅಧಿಪತಿಯಾದನು. ಈತನ ಆಳ್ವಿಕೆಯ ಅವಧಿ ದೀರ್ಘವಾಗಿರಲಿಲ್ಲ. ಈತನ ತಂದೆಯ ಆಳ್ವಿಕೆಯ ಕೊನೆಗಾಲದಲ್ಲಿ ಬಾದಾಮಿ ಚಾಳುಕ್ಯರು ವಿಕ್ರಮಾದಿತ್ಯನ ನಾಯಕತ್ವದಲ್ಲಿ ಮತ್ತೊಮ್ಮೆ ಪ್ರಬಲರಾಗಿ ಹಿಂದಿನ ವರ್ಚಸ್ಸನ್ನು ಪುನಃಗಳಿಸಲು ಪ್ರಯತ್ನಿಸುತ್ತಿದ್ದರು. ಈ ಸಂದರ್ಭದಲ್ಲಿ ಎರಡನೇ ಮಹೇಂದ್ರವರ್ಮನ್‌ನ ಆಳ್ವಿಕೆಯಕಾಲ ಅನೇಕ ಸಮಸ್ಯೆಗಳಿಂದ ಕೂಡಿರಬಹುದು. ಆದರೆ ಈತನ ಆಳ್ವಿಕೆಯ ಬಗ್ಗೆ ನಮಗೆ ಹೆಚ್ಚಿನ ವಿವರಗಳು ದೊರೆತ್ತಿಲ್ಲ. ಕುರಮ್ ತಾಮ್ರ ಪ್ರಶಸ್ತಿಯಲ್ಲಿ ಈ ರಾಜನ ಹೆಸರನ್ನು ಉಲ್ಲೇಖಿಸಿಲಾಗಿದೆ. ಚತುರ್ವರ್ಣ ವ್ಯವಸ್ಥೆಯನ್ನು ಕಾನೂನಿನ ಮೂಲಕ ಪ್ರಬಲವಾಗಿ ಈತ ಪ್ರತಿಪಾದಿಸಿದನು ಎಂಬುದಾಗಿ ಈ ಪ್ರಶಸ್ತಿ ತಿಳಿಸುತ್ತದೆ. ಚಾಳುಕ್ಯರ ವಿರುದ್ಧಹೋರಾಡುತ್ತ ಪ್ರಾಯಶಃ ಈತ ಮರಣ ಹೊಂದಿರಬಹುದೆಂದು ಅನೇಕ ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಈತನ ಪುತ್ರ ಒಂದನೇ ಪರಮೇಶ್ವರವರ್ಮನ್ ಪಲ್ಲವ ರಾಜ್ಯದ ಉತ್ತಾರಾಧಿಕಾರಿಯಾಗಿ ಪಲ್ಲವ ಪರಂಪರೆಯನ್ನು ಮುಂದುವರೆಸಿದನು. ಈತನ ಆಳ್ವಿಕೆಯಲ್ಲಿ ಮತ್ತೊಮ್ಮೆ ಪಲ್ಲವ-ಚಾಳುಕ್ಯ ಹೋರಾಟ ತೀವ್ರವಾಗುವುದನ್ನು ಕಾಣಬಹುದು. ದಕ್ಷಿಣ ಭಾರತ ರಾಜಕಾರಣದಲ್ಲಿ ಪ್ರಬಲರಾಗಲು ಈ ಎರಡು ರಾಜಮನೆತನಗಳು ಕಾದಾಡಿದನ್ನು ಹಾಗೂ ಆ ಮೂಲಕ ಅವನತಿ ಹೊಂದಿದ್ದನ್ನು ಈ ಸಂದರ್ಭದಲ್ಲಿ ನಾವು ಗಮನಿಸಬೇಕು. ಚಾಳುಕ್ಯ ವಿಕ್ರಮಾದಿತ್ಯನ ಶಿಲಾ ಶಾಸನವೊಂದು ಈ ರೀತಿಯ ಕಾದಾಟವನ್ನು ವರ್ಣಿಸುತ್ತದೆ. ತನ್ನ ಪುತ್ರ ವಿಜಯಾದಿತ್ಯನೊಡಗೂಡಿ ವಿಕ್ರಮಾದಿತ್ಯನು ಪಲ್ಲವರನ್ನು ಸೋಲಿಸಿ ಕಂಚಿಯನ್ನು ಮುತ್ತಿದ

ಸಂದರ್ಭವನ್ನು ಈ ಶೀಲಾಶಾಸನ ವರ್ಣಿಸುತ್ತದೆ. ಪಲ್ಲವ ದೊರೆ ಪರಮೇಶ್ವರವರ್ಮನ್ ಕಪ್ಪಕಾಣಿಕೆಯನ್ನು ನೀಡಿ ಶಾಂತಿ ಒಪ್ಪಂದವನು ಮಾಡಿಕೊಂಡಿರಬಹುದೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ವಿರುದ್ಧವಾಗಿ ಪಲ್ಲವ ಶಿಲಾಶಾಸನಗಳು ಚಾಳುಕ್ಯ ಸೈನ್ಯವನ್ನು ಸೋಲಿಸಿ ಹೊರಗಟ್ಟಿದ್ದಾಗಿ ಹೇಳುತ್ತವೆ. ಚಾಳುಕ್ಯರ ಪ್ರಾಬಲ್ಯತೆಯಿಂದಾಗಿ ಕೆಲಕಾಲ ಪಲ್ಲವ ರಾಜ್ಯ ಕಳೆಗುಂದಿತ್ತು. ಪರಮೇಶ್ವರವರ್ಮನ್ ದಿಗ್ವಿಜಯಿಯಲ್ಲದಿದ್ದರೂ, ಪಲ್ಲವ ಇತಿಹಾಸದಲ್ಲಿ ತನ್ನ ಇನ್ನಿತರ ಕೊಡುಗೆಗಳಿಂದಾಗಿ ಪ್ರಸಿದ್ಧನಾಗಿದ್ದಾನೆ. ಈತ ಶೈವ ಅನುಯಾಯಿಯಾಗಿದ್ದು, ಧರ್ಮ ಮತ್ತು ಶಿಲ್ಪಕಲೆಗೆ ಅಪಾರವಾದ ಪ್ರೋತ್ಸಾಹವನ್ನು ನೀಡಿದನು. ಈತ ಅನೇಕ ಶೈವ ದೇವಾಲಯಗಳನ್ನು ನಿರ್ಮಿಸಿದನು. ಮಹಾಬಲಿ ಪುರಂನಲ್ಲಿರುವ ಗಣೇಶರಥ ಈತನ ನಿರ್ಮಾಣಗಳಲ್ಲಿ ಪ್ರಸಿದ್ಧವಾದ ಶಿಲ್ಪಕಲಾಕೃತಿಯಾಗಿದೆ. 'ಚಿತ್ರಮಯ', 'ಗುಣಭಾಜನ', 'ಶ್ರೀಭರ', 'ವಿದ್ಯಾವಿನೀತ ಪಲ್ಲವ ' ಇತ್ಯಾದಿ ಬಿರುದುಗಳನ್ನು ಈತ ಹೊಂದಿದ್ದನು. ಕ್ರಿ.ಶ. 681ರಲ್ಲಿ ಈತ ಮರಣ ಹೊಂದಿದ್ದ ನಂತರ ಈತನ ಪುತ್ರ ಎರಡನೇ ನರಸಿಂಹವರ್ಮನ್ ಪಲ್ಲವ ರಾಜ್ಯದ ಉತ್ತಾರಾಧಿಕಾರಿಯಾದನು. ಪಲ್ಲವ ಇತಿಹಾಸದಲ್ಲಿ ಈತನು ರಾಜಸಿಂಹ ಎಂಬ ಹೆಸರಿನಿಂದ ಪರಿಚಿತನಾಗಿದ್ದಾನೆ.

## 12.4.3 ಎರಡನೇ ಸಿಂಹವರ್ಮನ್

ರಾಜಸಿಂಹ ಎಂಬ ಬಿರುದಿನಿಂದ ಪ್ರಸಿದ್ಧನಾದ ಎರಡನೇ ನರಸಿಂಹವರ್ಮನ್ ಪಲ್ಲವ ದೊರೆಗಳಲ್ಲಿ ಪ್ರಮುಖನಾದವನು. ಈತ ಚಾಳುಕ್ಯರ ದೊರೆಗಳಾದ ವಿನಯಾದಿತ್ಯ ಮತ್ತು ಆತನ ಉತ್ತರಾಧಿಕಾರಿ ವಿಜಯಾದಿತ್ಯನ ಸಮಕಾಲೀನನಾಗಿದ್ದನು. ಈತನ ಆಳ್ವಿಕೆಯಲ್ಲಿ ಪಲ್ಲವ ರಾಜ್ಯ ರಾಜಕೀಯ ಸ್ಥಿರತೆ ಹಾಗೂ ಎಲ್ಲ ರೀತಿಯಲ್ಲೂ ಶ್ರೀಮಂತಿಕೆಯಿಂದ ಕೂಡಿತ್ತು. ಈತನ ಆಳ್ವಿಕೆಯಲ್ಲಿ ತಮಿಳುನಾಡು ಪಲ್ಲವ ಚಾಳುಕ್ಯ ಘರ್ಷಣೆಯಿಂದ ಮುಕ್ತವಾಗಿತ್ತು. ಈತ ಯುದ್ಧ ಪ್ರಿಯನಲ್ಲದಿದ್ದರೂ ಕ್ಷಾತ್ರ ತೇಜಸ್ಸನ್ನು ವ್ಯಕ್ತಪಡಿಸುವ ಬಿರುದುಗಳನ್ನು ಹೊಂದಿದ್ದನು. ಇದು ಪ್ರಾಯಶಃ ಪಾರಂಪರಿಕವಾಗಿತ್ತು. ಈತನ ಆಳ್ವಿಕೆಯ ಕಾಲದಲ್ಲಿ ಪಲ್ಲವ ರಾಜ್ಯ ಅನೇತ ಕ್ಷಾಮಗಳನ್ನು ಎದುರಿಸಬೇಕಾಯಿತು. ಕ್ರಿ.ಶ. 691ರಲ್ಲಿ ಬಂದೆರಗಿದ ಕ್ಷಾಮ ಒಂದರಲ್ಲಿ ಉತ್ತರಭಾರತದ ದೊರೆಯೊಬ್ಬ, ಆತನ ಹೆಸರು ವಜ್ರಬೋಧಿ ಎಂದಿಗೆ, ಜನ ಸಾಮಾನ್ಯರಿಗೆ ಬಹಪರಿಹಾರ ಒದಗಿಸಿದನೆಂದು ಪಲ್ಲವ ಶಾಸನವೊಂದು ತಿಳಿಸುತ್ತದೆ. ಈ ಶಿಲಾಶಾಸನ ಕಂಚಿಯ ಕೈಲಾಸನಾಥ ದೇವಾಲಯದಲ್ಲಿ ಕಾಣಬಹುದು. ಎರಡನೇ ನರಸಿಂಹವರ್ಮನ ಆಳ್ವಿಕೆಯಲ್ಲಿ ಪ್ರಾಯಶಃ ಒಂದು ಬಾರಿ ಮಾತ್ರ ಪಲ್ಲವರು ಹಾಗೂ ಚಾಳುಕ್ಯರು ರಣರಂಗದಲ್ಲಿ ಭೇಟಿಯಾಗಿದ್ದರು. ಎರಡನೇ ನರಸಿಂಹವರ್ಮನು ಯುದ್ಧ ಪ್ರಿಯನಲ್ಲದಿದ್ದರೂ, ಸುತ್ತಮುತ್ತಲಿನ ಸಣ್ಣ ಪುಟ್ಟ ರಾಜ್ಯಗಳನ್ನು ವಶಪಡಿಸಿಕೊಂಡು ಪಲ್ಲವ ರಾಜ್ಯದ ವಿಸ್ತೀರ್ಣವನ್ನು ಹೆಚ್ಚಿಸಿದನು. ಈತನಿಂದ ಸೋತವರಲ್ಲಿ ಕಳಭ್ರರು ಪ್ರಮುಖರಾಗಿದ್ದರು. ಈತ ಕೆಲವು ದ್ವೀಪಗಳನ್ನು ಬಂಗಾಳಕೊಲ್ಲಿಯಲ್ಲಿ ವಶಪಡಿಸಿಕೊಂಡನು. ಇದನ್ನು ಹೊರತುಪಡಿಸಿ, ಈ ದೊರೆ ಸೈನಿಕ ಸಾಧನೆಯನ್ನೇನು ಮಾಡಿಲ್ಲ.

ರಾಜಕೀಯ ಸ್ಥಿರತೆ ಹಾಗೂ ಶಾಂತಿಕಾಲದಲ್ಲಿ ಪಲ್ಲವ ದೊರೆಗಳು ಸಾಗರೋತ್ತರ ವ್ಯಾಪಾರಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದರು. ಆಗ್ನೇಯ ಏಷ್ಯದ ದೇಶಗಳೊಂದಿಗೆ ಉತ್ತಮ ವ್ಯಾಪಾರ ಸಂಪರ್ಕವನ್ನು ಪಲ್ಲವ ರಾಜ್ಯದ ವ್ಯಾಪಾರಿಗಳು ಹೊಂದಿದ್ದರು. ವಿಶೇಷವಾಗಿ ಎರಡನೇ

ನರಸಿಂಹವರ್ಮನ ಕಾಲದಲ್ಲಿ ಸಾಗರೋತ್ತರ ವ್ಯಾಪಾರದಲ್ಲಿ ಗಮನಾರ್ಹವಾದ ಹೆಚ್ಚಳ ಉಂಟಾಯಿತು. ಈ ಕಾಲದಲ್ಲಿ ಚೀನಿಯರು ಹಾಗೂ ಅರಬ್ಬರ ಮಧ್ಯೆ ಸಾಗರೋತ್ತರ ವ್ಯಾಪಾರದಲ್ಲಿ ತೀವ್ರವಾದ ಪೈಪೋಟಿಯುಂಟಾಯಿತು. ಎರಡನೇ ನರಸಿಂಹವರ್ಮನು ಈ ಪೈಪೋಟಿಯಲ್ಲಿ ಚೀನಿ ವರ್ತಕರನ್ನು ಬೆಂಬಲಿಸಿದನೆಂದು ತಿಳಿದು ಬರುತ್ತದೆ. ಈ ಕಾರಣದಿಂದಾಗಿ ಪ್ರಾಯಶಃ ಈತನ ಆಸ್ಥಾನಕ್ಕೆ ಚೀನಾದ ದೊರೆ ಪ್ರತಿನಿಧಿಯೊಬ್ಬನನ್ನು ಕಳುಹಿಸಿದ್ದನೆಂದು ಹಾಗೂ ಪ್ರತಿಯಾಗಿ ಪಲ್ಲವರ ಪ್ರತಿನಿಧಿಯೊಬ್ಬ ಚೀನಾದ ದೊರೆಯ ಆಸ್ಥಾನಕ್ಕೆ ಭೇಟಿ ನೀಡಿರಬಹುದೆಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.

ಎರಡನೇ ನರಸಿಂಹವರ್ಮನ್ನು ಶೈವ ಸಂಪ್ರದಾಯವನ್ನು ಅನುಸರಿಸಿ, ಅನೇಕ ಶೈವ ದೇವಾಲಯಗಳ ನಿರ್ಮಾಣಕ್ಕೆ ಕಾರಣನಾದನು. ಈತನ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ ಪ್ರಸಿದ್ಧವಾದವುಗಳೆಂದರೇ ಕಂಚಿಯ ಕೈಲಾಸನಾಥ ಅಥವ ರಾಜಸಿಂಹ ದೇವಾಲಯ, ಐರಾವತೇಶ್ವರ ದೇವಾಲಯ, ಹಾಗೂ ಪನಮಲೈಯ ತಲಗಿರೀಶ್ವರ ದೇವಾಲಯ. ಮಹಾಬಲಿಪುರಂನ ಸಮುದ್ರ ತೀರದ ದೇವಾಲಯವು ಈತನ ಕಾಲದಲ್ಲೆ ನಿರ್ಮಾಣವಾಗಿರಬಹುದೆಂದು ಕೆಲವು ಇತಿಹಾಸಕಾರರು ಭಾವಿಸುತ್ತಾರೆ.

ವಿದ್ವಾಂಸರಿಗೆ ಈ ದೊರೆ ರಾಜಾಶ್ರಯವನ್ನು ನೀಡಿ ಗೌರವಿಸಿದನು. 'ಕಾವ್ಯದರ್ಶ' ದ ಕರ್ತೃ ಈತನ ಆಸ್ಥಾನವನ್ನು ಅಲಂಕರಿಸಿದ್ದನು. ವೇದಗಳ ಅಧ್ಯಯನಕ್ಕೆ ಪ್ರೋತ್ಸಾಹವನ್ನು ನೀಡಿದನು. 'ಶ್ರೀ ಶಂಕರಭಕ್ತ', ವೃಷಭಲಾಂಛನ 'ಶ್ರೀ ವಾದ್ಯವಿದ್ಯಾಧರ' 'ಶ್ರೀ ಆಗಮಪ್ರಿಯಾ' 'ಶ್ರೀಶಿವಚೂಡಮಣಿ' ಇತ್ಯಾದಿ ಬಿರುದುಗಳನ್ನು ಈ ದೊರೆಯು ಹೊಂದಿದನು.

ಎರಡನೇ ನರಸಿಂಹವರ್ಮನಿಗೆ ಇಬ್ಬರು ಪುತ್ರರಿದ್ದರು. ಹಿರಿಯ ಪುತ್ರ ಹಾಗೂ ಯುವರಾಜ ಮೂರನೇ ಮಹೇಂದ್ರವರ್ಮನ್ ತನ್ನ ತಂದೆಯ ಜೀವಿತ ಕಾಲದಲ್ಲೇ ಮರಣ ಹೊಂದಿದನು. ಆದುದರಿಂದ ಎರಡನೇ ನರಸಿಂಹವರ್ಮನ ಉತ್ತರಾಧಿಕಾರಿಯಾಗಿ ಎರಡನೇ ಪರಮೇಶ್ವರವರ್ಮನ್ ಪಲ್ಲವ ಸಿಂಹಾಸನವನ್ನೇರಿದನು. ಈತನ ಆಳ್ವಿಕೆಯ ಕಾಲ ಕ್ರಿ.ಶ. 728ರಿಂದ 731ರವರೆಗೆ. ಈ ಮೂರು ವರ್ಷಗಳ ಅವಧಿಯಲ್ಲಿ ಪಲ್ಲವರು ಸತತವಾಗಿ ಚಾಲುಕ್ಯರ ಆಕ್ರಮಣವನ್ನು ಎದುರಿಸಬೇಕಾಯಿತು. ಗಂಗರದೊರೆ ಶ್ರೀ ಪುರುಷನೂ ಸಹ ಈ ಕಾಲದಲ್ಲಿ ಪಲ್ಲವರನ್ನು ವಿರೋಧಿ ಚಾಳುಕ್ಯರ ಜೊತೆ ಕೈಗೂಡಿಸಿ, ಪಲ್ಲವರ ವಿರುದ್ಧ ಆಕ್ರಮಣವನ್ನೆಸಗಿದನು. ಕದನ ಒಂದರಲ್ಲಿ ಎರಡನೇ ಪರಮೇಶ್ವರವರ್ಮನ್ ಪ್ರಾಯಶಃ ಶ್ರೀಪುರುಷನ ಆಯುಧಕ್ಕೆ ಬಲಿಯಾಗಿರಬಹುದೆಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ವೃತ್ತೇಶ್ವರದಲ್ಲಿರುವ ತಿರುವಾಡಿಗೈ ದೇವಾಲಯ ಹಾಗೂ ಮಾಮಲ್ಲಪುರದ ಆದಿವರಹಾ ದೇವಾಲಯ ಈತನ ಕೊಡುಗೆಗಳೆಂದು ಭಾವಿಸಲಾಗಿದೆ.

## 12.4.4 ಎರಡನೇ ನಂದಿವರ್ಮನ್

ಪಲ್ಲವ ಇತಿಹಾಸದಲ್ಲಿ ಅತ್ಯಂತ ಧೀರ್ಘಕಾಲ ಆಳ್ವಿಕೆ ನಡೆಸಿದ ದೊರೆಯೆಂದರೆ ಎರಡನೇ ನಂದಿವರ್ಮನ್ ಪಲ್ಲವ ಮಲ್ಲ. ಕ್ರಿ.ಶ. 731-32 ರಲ್ಲಿ ಸಿಂಹಾಸನವನ್ನೇರಿದ ಈತ 65ವರ್ಷಗಳಷ್ಟು ದೀರ್ಘಕಾಲ ಪಲ್ಲವ ರಾಜ್ಯವನ್ನಾಳಿದನು. ಸಿಂಹಾಸನವನ್ನೇರಿದಾಗ ಈತನ ವಯಸ್ಸು ಕೇವಲ ಹನ್ನೆರಡು ವರ್ಷಗಳು ಮಾತ್ರ. ಈತ ಅಧಿಕಾರ ಗ್ರಹಣ ಮಾಡುವ ಸಮಯದಲ್ಲಿ ಮತ್ತು ಮಾಡಿದ ನಂತರ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಪರಮೇಶ್ವರವರ್ಮನ್ ಮರಣ

ಹೊಂದಿದಾಗ ತನ್ನ ಪುತ್ರ ಚಿತ್ರಮಯ ಎಂಬೊಬ್ಬ ಸಣ್ಣ ಬಾಲಕನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದ್ದನು. ಈ ಸಣ್ಣ ಬಾಲಕನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದ್ದುದನ್ನು ವಿರೋಧಿಸಿದ ಬಣ ಆಂತರಿಕ ಕಲಹಕ್ಕೆ ಕಾರಣವಾಯಿತು. ಎರಡನೇ ನಂದಿವರ್ಮನ್ ಸಿಂಹ ವಿಷ್ಣು ವಂಶಕ್ಕೆ ಸೇರಿದ್ದರೂ, ಭಿನ್ನ ಶಾಖೆಯಿಂದ ಬಂದವನಾಗಿದ್ದನು. ಅಂದರೆ ಸಿಂಹ ವಿಷ್ಣುವಿನ ಚಿಕ್ಕ ಸಹೋದರನ ಶಾಖೆಗೆ ಸೇರಿದ್ದವನಾಗಿದ್ದನು. ಈ ಆಂತರಿಕ ಕಲಹದಲ್ಲಿ ಕೆಲವು ಗುಂಪುಗಳು ಚಿತ್ರಮಯನನ್ನು ಬೆಂಬಲಿಸಿದರೆ, ಕೆಲವರು ನಂದಿವರ್ಮನ ಉತ್ತರಾಧಿಕಾರತ್ವವನ್ನು ಬೆಂಬಲಿಸಿದರು. ಅಂತಿಮವಾಗಿ ನಂದಿವರ್ಮನ್ ಬೆಂಬಲಿಗರು ಜಯಶಾಲಿಗಳಾಗಿ, ನಂದಿವರ್ಮನ್ ಪಲ್ಲವ ಮಲ್ಲ ಪಲ್ಲವ ದೊರೆಯಾದನು. ಸಾರ್ವಜನಿಕರು ಸಹ ತನ್ನ ಹಕ್ಕಿಗೆ ವ್ಯಾಪಕವಾದ ಬೆಂಬಲವನ್ನು ನೀಡಿದರು ಎಂದು ಶಿಲಾಶಾಸನ ಒಂದರಲ್ಲಿ ಈತ ಹೇಳಿಕೊಂಡಿದ್ದಾನೆ.

ತನ್ನ ದೀರ್ಘ ಕಾಲದ ಆಳ್ವಿಕೆಯಲ್ಲಿ ಸಮಕಾಲೀನ ಶಕ್ತಿಗಳೊಂದಿಗೆ ಈತ ಭಿನ್ನವಾದ ಸಂಬಂಧಗಳನ್ನು ಹೊಂದಿದ್ದನು. ಕೆಲವೊಮ್ಮೆ ಶಾಂತಿಯಿಂದಿದ್ದರೆ, ಮಗದೊಮ್ಮೆ ಯುದ್ಧ ನಿರತನಾಗಿರುತ್ತಿದ್ದನು. ಉತ್ತರದಲ್ಲಿ ಪಾರಂಪರಿಕವಾಗಿ ಚಾಳುಕ್ಯರೊಂದಿಗೆ ಶತ್ರುತ್ವವನ್ನು ಮುಂದುವರೆಸಿದನು. ಎರಡನೇ ನರಸಿಂಹವರ್ಮನ್ ಆಳ್ವಿಕೆಯಲ್ಲಿ ಶತ್ರುತ್ವ ಮುಂದುವರೆದರೂ ಯುದ್ಧಗಳೇನು ಈ ಎರಡು ವೈರಿಗಳ ಮಧ್ಯ ಸಂಭವಿಸಲಿಲ್ಲ. ಆದರೆ ಪಲ್ಲವ ಮಲ್ಲನ ಆಳ್ವಿಕೆಯಲ್ಲಿ ಚಾಳುಕ್ಯ ದೊರೆ ಎರಡನೇ ವಿಕ್ರಮಾದಿತ್ಯ ಪಲ್ಲವ ರಾಜ್ಯವನ್ನು ಮುತ್ತಿ ಕಂಚಿಯವರೆವಿಗೂ ದಂಡೆತ್ತಿ ಬಂದನು. ದಕ್ಷಿಣದಲ್ಲಿ ಪಲ್ಲವ ಸಾರ್ವಭೌಮತ್ವವನ್ನು ಪ್ರಶ್ನಿಸಿದವರೆಂದರೆ ಮಧುರೆಯ ಪಾಂಡ್ಯರು. ಅಂತರಿಕ ಕಲಹದ ಸಮಯದಲ್ಲಿ ಪಾಂಡ್ಯರು ಚಿತ್ರಮಯನನ್ನು ಬೆಂಬಲಿಸಿದ್ದರು. ಆದುದರಿಂದ ನಂದಿವರ್ಮನ್ ಆಳ್ವಿಕೆಯಲ್ಲಿ ಈ ಎರಡು ರಾಜ್ಯಗಳ ನಡುವಿಣ ಸಂಬಂಧ ಶತ್ರುತ್ವದಿಂದ ಕೂಡಿತ್ತು. ಪಾಂಡ್ಯ ದೊರೆಯಾದ ಅರಿಕೇಸರಿ ಪರಂಕುಶ ಮಾರವರ್ಮನ್ ಹಾಗೂ ಆತನ ಪುತ್ರ ಕೊಪಡಿಯನ್ ರಣಧೀರ ಪಲ್ಲವರೊಡನೆ ಅನೇಕ ಕದನಗಳನ್ನು ನಡಿಸಿದರು. ಪ್ರಾರಂಭದಲ್ಲಿ ಪಲ್ಲವರು ಅನೇಕ ಕದನಗಳಲ್ಲಿ ಸೋಲನ್ನು ಎದುರಿಸಬೇಕಾಯಿತು. ಸ್ವಲ್ಪ ಸಮಯದ ನಂತರ ಉದಯ ಚಂದ್ರನೆನ್ನುವನ್ನು ಪಲ್ಲವ ಸೈನ್ಯದ ದಂಡಾಧಿಕಾರಿಯಾದನು. ಈತನ ಕಾಲದಲ್ಲಿ ಅನೇಕ ಬಾರಿ ಪಾಂಡ್ಯ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಲಾಯಿತು. ಇದಲ್ಲದೆ ಎರಡನೇ ನಂದಿವರ್ಮನ್ ಚಿತ್ರಮಯನನ್ನು ಕೊಲ್ಲಿಸಿದರಿಂದ, ಅಂತಿಮವಾಗಿ ಉತ್ತರಾಧಿಕಾರತ್ವಕ್ಕೆ ಇದ್ದ ಸವಾಲು ಕೊನೆಗೊಂಡಿತು.

ಕ್ರಿ.ಶ. 755 ರಲ್ಲಿ ಪಶ್ಚಿಮ ದಖ್ಖನ್ನಿನಲ್ಲಿ ಚಾಳುಕ್ಯರ ಆಡಳಿತ ಕೊನೆಗೊಂಡು, ರಾಷ್ಟ್ರಕೂಟರು ಪ್ರವರ್ಧಮಾನಕ್ಕೆ ಬಂದರು. ಮುಂದಿನ ಶತಮಾನಗಳಲ್ಲಿ ದಕ್ಷಿಣ ಭಾರತದ ಇತಿಹಾಸದಲ್ಲಿ ರಾಷ್ಟ್ರಕೂಟರು ಪ್ರಮುಖವಾದ ಪಾತ್ರವನ್ನು ನಿರ್ವಹಿಸಿ ರಾಷ್ಟ್ರಕೂಟ ವಂಶದ ಸ್ಥಾಪಕನಾದ ದಂತಿದುರ್ಗದ ಕಾಲದಲಿ ಕೆಲಕಾಲ ಕಂಚಿಯನ್ನು ಆಕ್ರಮಿಸಿದರು. ನಂದಿವರ್ಮನು ರಾಜತಾಂತ್ರಿಕ ಮಾತುಕತೆಗಳ ಮೂಲಕ ರಾಷ್ಟ್ರಕೂಟರ ನಿಯಂತ್ರಣದಿಂದ ಕಂಚಿಯನ್ನು ಬಿಡಿಸಿದುದಲ್ಲದೆ ಉತ್ತಮ ಸಂಬಂಧಗಳನ್ನು ಏರ್ಪಡಿಸಲು ಶ್ರಮಿಸಿದನು. ವೈವಾಹಿಕ ಸಂಬಂಧವನ್ನು ಸ್ಥಾಪಿಸುವುದರೊಂದಿಗೆ ಎರಡು ರಾಜವಂಶಗಳ ಮಧ್ಯೆ ಸಂಬಂಧಗಳು ಇನ್ನೂ ಉತ್ತಮಗೊಂಡವು. ರಾಷ್ಟ್ರಕೂಟ ದೊರೆ ತನ್ನ ಪುತ್ರಿಯನ್ನು ಎರಡನೇ ನಂದಿ ವರ್ಮನಿಗೆ ನೀಡಿದನು. ದುರದೃಷ್ಟವಶಾತ್ ಈ ಉತ್ತಮ ಸಂಬಂಧಗಳು ಬಹುಕಾಲ ಉಳಿಯಲಿಲ್ಲ. ಮುಂದೆ ಮೂರನೇ ಗೋವಿಂದ ಪ್ರಬಲ ಸೈನ್ಯದೊಂದಿಗೆ ಪಲ್ಲವರಾಜ್ಯವನ್ನು ಮುತ್ತಿದನು. ಇದೇ ಸಮಯಕ್ಕೆ ದಕ್ಷಿಣದಿಂದ ಪಾಂಡ್ಯರ ದೊರೆ

ಪರಾಂತಕ ನೆಡುಂಜಳಿಯನ್ ಪಲ್ಲವರ ವಿರುದ್ಧ ಧಾಳಿ ಪ್ರಾರಂಭಿಸಿದನು. ಸ್ಥಳಿಯ ರಾಜರ ಒಕ್ಕೂಟದ ಮೂಲಕ ಪಾಂಡ್ಯರ ಧಾಳಿಯನ್ನು ತಡೆಯಲೆತ್ನಿಸಿ ಪಲ್ಲವ ದೊರೆ ವಿಫುಲಗೊಂಡನು. ಆದರೆ ಎರಡನೇ ನಂದಿವರ್ಮನ್ ಗಂಗರದೊರೆ ಶ್ರೀ ಪುರುಷನನ್ನು ಸೋಲಿಸಿ ಅವನಿಂದ ಕೆಲವು ಪ್ರದೇಶಗಳನ್ನು ಗೆದ್ದುಕೊಂಡನು.

ತಲಕಾಡಿನ ಗಂಗರನ್ನು ಸೋಲಿಸಿದರೂ, ಇತರ ಪ್ರಬಲ ವೈರಿಗಳಿಂದ ರಾಜ್ಯದ ಸಮಗ್ರತೆಯನ್ನು ಕಾಪಾಡಲು ನಂದಿವರ್ಮನ್ ಸತತವಾಗಿ ಶ್ರಮಿಸಬೇಕಾಯಿತು. ಆತನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಗಂಗ ದೊರೆ ಕಳೆದು ಕೊಂಡಿದ್ದ ಪ್ರದೇಶಗಳನ್ನು ಪುನಃ ಗೆದ್ದು ಕೊಂಡನು. ಈ ರೀತಿ ತನ್ನ ದೀರ್ಘ ಆಳ್ವಿಕೆಯಲ್ಲಿ ಎರಡನೇ ನಂದಿವರ್ಮನ್ ಚಾಳುಕ್ಯ, ರಾಷ್ಟ್ರಕೂಟ, ಪಾಂಡ್ಯ ಹಾಗೂ ಗಂಗರಿಂದ ಸೊಲನ್ನು ಅನುಭವಿಸಬೇಕಾಯಿತು.

ರಾಜ್ಯದ ಸಮಗ್ರತೆಯನ್ನು ಕಾಪಾಡಲು ಸತತವಾಗಿ ಪ್ರಯತ್ನಿಸಿ ಹೆಚ್ಚಿನ ಕಾಲವನ್ನು ರಣರಂಗದಲ್ಲಿ ಕಳೆದರೂ, ನಂದಿವರ್ಮನ್ ಧರ್ಮ, ಕಲೆ ಮತ್ತು ಶಿಲ್ಪ ಕಲೆಗೆ ರಾಜಾಶ್ರಯವನ್ನು ನೀಡಿ ಪ್ರೋತ್ಸಾಹಿಸಿದನು. ಅವನು ವೈಷ್ಣವ ಧರ್ಮಾನುಯಾಯಿಯಾಗಿದ್ದು ಕಂಚಿಯಲ್ಲಿ ವೈಕುಂಠ ಪೆರುಮಾಳ್ ದೇವಾಲಯವನ್ನು ನಿರ್ಮಿಸಿದನು. ತಿರುವಾಡಿಗೈ ಮತ್ತು ಮುಕ್ತೇಶ್ವರ ದೇವಾಲಯಗಳನ್ನು ಕಂಚಿಯಲ್ಲಿ ನಿರ್ಮಿಸಿದನು. ತಿರುಮಂಗೈ ಆಳ್ವಾರ ಎಂಬ ಪ್ರಸಿದ್ಧ ಸಂತನು ಈತನ ಸಮಕಾಲೀನನಾಗಿದ್ದನು. ಈತ ವೇದಗಳ ಅಧ್ಯಯನಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ನೀಡಿದುದಲ್ಲದೆ, ಇತರ ಧರ್ಮಗಳ ಅಧ್ಯಯನಕ್ಕೂ ಅವಕಾಶವನ್ನು ಕಲ್ಪಿಸಿದನು.

## 12.5 ಕೊನೆಯ ಕಾಲದ ದೊರೆಗಳು

ಕ್ರಿ.ಶ. 775ರಲ್ಲಿ ಎರಡನೇ ನಂದಿವರ್ಮನ್ ಪಲ್ಲವ ಮಲ್ಲ ಮರಣ ಹೊಂದಿದನು. ಆತನ ಪುತ್ರನಾದ ದಂತಿವರ್ಮನ್ ಅದೇ ವರ್ಷ ಪಲ್ಲವ ರಾಜ್ಯದ ಉತ್ತರಾಧಿಕಾರಿಯಾದನು. ಉತ್ತರದಿಂದ ರಾಷ್ಟ್ರಕೂಟರಿಂದಲೂ ಮತ್ತು ದಕ್ಷಿಣದಿಂದ ಪಾಂಡ್ಯರಿಂದಲೂ ಸೈನಿಕ ಅಕ್ರಮಣವನ್ನು ಈತ ಎದುರಿಸಬೇಕಾಯಿತು. ರಾಷ್ಟ್ರಕೂಟದೊರೆ ಮೂರನೇ ಗೋವಿಂದ ದಂತಿವರ್ಮನ್‌ನನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು. ಅಪಾರವಾದ ಕಪ್ಪಕಾಣಿಕೆಯನ್ನು ನೀಡಿ ದಂತಿವರ್ಮನ್ ಶಾಂತಿ ಹಾಗೂ ತನ್ನ ರಾಜಧಾನಿಯನ್ನು ಮರಳಿ ಪಡೆಯಬೇಕಾಯಿತು. ಕ್ರಿ.ಶ. 826ರ ವರೆಗೆ ಅರ್ಧ ಶತಮಾನಕ್ಕೂ ಹೆಚ್ಚುಕಾಲ ಈತ ರಾಜ್ಯಭಾರ ಮಾಡಿದರೂ, ಹೇಳಿಕೊಳ್ಳುವಂತಹ ರಾಜಕೀಯ ಸಾಧನೆಗಳೇನು ಮಾಡಲಾಗಲಿಲ್ಲ. ಆತನ ರಾಜ್ಯ ವ್ಯಾಪ್ತಿಯು ಸೀಮಿತವಾಗಿರುವ ಹಾಗೇ ತೋರುತ್ತದೆ. ಅಗ್ಗಲ ನಿಮತಿ ಎಂಬ ಕದಂಬ ರಾಜಕುಮಾರಿಯನ್ನು ಈತ ವಿವಾಹವಾಗಿದ್ದನು. ಚೈನ್ನೈನ ಟ್ರಿಪ್ಲಿಕೇನ್ ನಲ್ಲಿರುವ ಪಾರ್ಥಸಾರಥಿ ದೇವಾಲಯ ಈತನ ನಿರ್ಮಾಣವಿರಬಹುದೆಂದು ಕೆಲವು ಇತಿಹಾಸಕಾರರು ಭಾವಿಸುತ್ತಾರೆ. ಈ ದೇವಾಲಯದಲ್ಲಿರುವ ಶಿಲಾಶಾಸನವೊಂದು ದಂತಿವರ್ಮನ್ ನೀಡಿರುವ ಭೂದಾನವನನ್ನು ಉಲ್ಲೇಖಿಸುತ್ತದೆ. ಬಾಣರದೊರೆ ಪಲ್ಲವರ ಸಾಮಂತನಾಗಿದ್ದ ವಿಚಾರವನ್ನು ಗುಡಿಮಲ್ಲಮ್ ಶಿಲಾ ಶಾಸನ ತಿಳಿಸುತ್ತದೆ.

ದಂತಿವರ್ಮನ್ ಮರಣಾನಂತರ ಆತನ ಪುತ್ರ ಮೂರನೇ ನಂದಿವರ್ಮನ್ ಪಲ್ಲವ ಸಿಂಹಾಸನವನ್ನೇರಿದನು. ಈತನ ಕಾಲದಲ್ಲೂ ಪಾಂಡ್ಯರ ಧಾಳಿ ಮುಂದುವರೆಯಿತು. ಈತನ ಅಧಿಕಾರ ವ್ಯಾಪ್ತಿ ಕಂಚಿಗೆ ಮಾತ್ರ ಸೀಮಿತವಾಗಿರುವಂತೆ ತೋರುತ್ತದೆ. ಒಮ್ಮೆ ಮಾತ್ರ ತೆಲ್ಲರು ಎಂಬ ಸ್ಥಳದಲ್ಲಿ

ನಡೆದ ಕದನದಲ್ಲಿ ಈತ ಪಾಂಡ್ಯರನ್ನು ಸೋಲಿಸಿದನೆಂದು ಶಿಲಾಶಾಸನವೊಂದು ತಿಳಿಸುತ್ತದೆ. ಈ ಕದನದಲ್ಲಿ ಪಲ್ಲವ ಸಹಾಯಕ್ಕೆ ಗಂಗರೂ ಹಾಗೂ ಚೋಳರ ಕೆಲವು ಸಾಮಂತರೂ ಧಾವಿಸಿದ್ದರೆಂದು ತಿಳಿದು ಬರುತ್ತದೆ. ಈ ಕದನದಲ್ಲಿ ಗೆದ್ದ ನಂದಿವರ್ಮನ್ 'ತೆಲ್ಲರು ಇರಿಂದ ನಂದಿ' ಎಂಬ ಬಿರುದನ್ನು ಧರಿಸಿದನು. ಮುಂದೆ ಕುಂಭಕೋಣಮ್ ಕದನದಲ್ಲಿ ಪಾಂಡ್ಯರು ಪಲ್ಲವರನ್ನು ಸೋಲಿಸಿ ತಮ್ಮ ಪ್ರಾದೇಶಿಕ ಮೇಲ್ಮೆಯನ್ನು ಪುನರ್ ಸ್ಥಾಪಿಸಿದರು. ಪಾಂಡ್ಯ ಮತ್ತು ಪಲ್ಲವರ ನಡುವಣ ಈ ದೀರ್ಘ ಘರ್ಷಣೆಯಲ್ಲಿ ಪಾಂಡ್ಯರು ಪಲ್ಲವರನ್ನು ಪೂರ್ಣವಾಗಿ ನಿಗ್ರಹಿಸಲು ಸಾಧ್ಯವಾಗಲಿಲ್ಲ. ಮೂರನೇ ನಂದಿವರ್ಮನ್ ಪ್ರಬಲವಾದ ನೌಕಾದಳವನ್ನು ಹೊಂದಿದ್ದು ದೂರ ಪ್ರಾಚ್ಯದ ರಾಷ್ಟ್ರಗಳೊಂದಿಗೆ ಸೈನಿಕ ಹಾಗೂ ವ್ಯಾಪಾರಿ ಸಂಬಂಧಗಳನ್ನು ಸ್ಥಾಪಿಸಿದ್ದನು. ಸಯಾಮ್ (ಥಾಯ್‌ಲೆಂಡ್) ನಲ್ಲಿರುವ ಶಿಲಾಶಾಸನವೊಂದು ಅಲ್ಲಿ ಈ ದೊರೆ ವಿಷ್ಣು ದೇವಾಲಯವನ್ನು ನಿರ್ಮಿಸಿರುವ ಬಗೆಗೆ ಉಲ್ಲೇಖಿಸುತ್ತದೆ. ಈತ ಧರ್ಮ, ಸಾಹಿತ್ಯ, ಕಲೆ ಹಾಗೂ ಶಿಲ್ಪ ಕಲೆಗೆ ಪರಾಂಪರಿಕವಾದ ಪ್ರೋತ್ಸಾಹವನ್ನು ನೀಡಿದನು. ಈತ ವೈಷ್ಣವ ಧರ್ಮವನನ್ನು ಅನುಸರಿಸಿದನು. ಈತನ ಸಮಕಾಲೀನ ವಿದ್ವಾಂಸನೊಬ್ಬನು "ನಂದಿಕಾಲಮ್ ಬಾಕ್ಕಮ್" ಎಂಬ ಕೃತಿಯನ್ನು ರಚಿಸಿದನು. ಪೇರುನ್ ದೇವನಾರ್ 'ಭಾರತವೆಂಬ' ಎಂಬ ಕೃತಿಯನ್ನು ಈತನ ಆಳ್ವಿಕೆಯಲ್ಲಿ ರಚಿಸಿದನು. ನಂದಿಕಾಲಮ್ ಬಾಕ್ಕಮ್, ಮೂರನೇ ನಂದಿವರ್ಮನ್ ಅನುಮಾನಾಸ್ಪದವಾದ ರೀತಿಯಲ್ಲಿ ಶತ್ರು ಒಬ್ಬನಿಂದ ಅವಸಾನ ಹೊಂದಿದ್ದನ್ನು ತಿಳಿಸುತ್ತದೆ.

ನಂದಿವರ್ಮನ್ ಮೂರು ಪುತ್ರರನ್ನು ಹೊಂದಿದ್ದು, ನೃಪತುಂಗ ಎಂಬುವನ್ನು ಉತ್ತರಾಧಿಕಾರಿಯಾದನು. ಈತ ರಾಷ್ಟ್ರಕೂಟ ರಾಜಕುಮಾರಿಯ ಪುತ್ರನಾಗಿದ್ದನು. ಅರಿಸಿಲ್ ಕದನದಲ್ಲಿ ಈತ ಪಾಂಡ್ಯರನ್ನು ಸೋಲಿಸಿದನು. ಬಾಲೂರು ತಾಮ್ರ ಪ್ರಶಸ್ತಿ ಈ ದೊರೆಯ ಸಾಧನೆಗಳನ್ನು ವಿವರಿಸುತ್ತದೆ. ಈತನ ಆಳ್ವಿಕೆಯಲ್ಲಿ ಪಲ್ಲವ ರಾಜ್ಯವು ನೆಲ್ಲೂರು ಮತ್ತು ಪುದುಕೋಟ್ಟೆ ನಡುವಣ ಪ್ರದೇಶಕ್ಕೆ ವಿಸ್ತರಿಸಿತು.

ಮಲತಮ್ಮನಾದ ಅಪರಾಜಿತನಿಂದ ಬಂದ ಸವಾಲನ್ನು ನೃಪತುಂಗನು ಎದುರಿಸಬೇಕಾಯಿತು. ಪಾಂಡ್ಯರು ನೃಪತುಂಗನನ್ನು ಬೆಂಬಲಿಸಿದರೆ, ತಲಕಾಡಿನಗಂಗರು ಅಪರಾಜಿತನನ್ನು ಬೆಂಬಲಿಸಿದರು. ತಿರುಪ್ಪುರಂಬಿಯಮ್ ಕದನದಲ್ಲಿ ನೃಪತುಂಗನು ಸೋಲಿಸಲ್ಪಟ್ಟನು. ಪ್ರಾಯಶಃ ಈ ಕದನದಲ್ಲಿ ಅವನು ಹತನಾಗಿರಬೇಕೆಂದು ತೋರುತ್ತದೆ. ಇದೇ ಸಮಯಕ್ಕೆ ಚೋಳರು ಪಲ್ಲವ ರಾಜ್ಯವನ್ನು ಮುತ್ತಿ, ರಾಜಧಾನಿಯನ್ನು ಅಕ್ರಮಿಸಿದರು. ಈ ಸಮಯಕ್ಕಾಗಲೇ ಪಾಂಡ್ಯರು ಮತ್ತು ಗಂಗರು ತಮ್ಮ ಪ್ರಾಬಲ್ಯವನ್ನು ಕಳೆದು ಕೊಂಡಿದ್ದರು. ಇಂತಹ ಸನ್ನೀವೇಶದಲ್ಲಿ ಸ್ವಾಭಾವಿಕವಾಗಿ ತಂಜಾವೂರಿನ ಚೋಳರು ತಮಿಳುನಾಡಿನ ರಾಜಕಾರಣದಲ್ಲಿ ಪ್ರಮುಖರೆನ್ನಿಸಿಕೊಂಡರು.

## 12.6 ಅವನತಿ

ನೃಪತುಂಗನ ಸೋಲು ಚೋಳರು ಪಲ್ಲವ ರಾಜ್ಯವನ್ನು ಮುತ್ತುವಂತೆ ಮಾಡಿತು. ವಿಜಯಾಲಯ ಚೋಳ ಅಪರಾಜಿತನನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು. ಈ ಘಟನೆಯ ನಂತರ ಪಲ್ಲವರ ಇತಿಹಾಸವನ್ನು ಅಧ್ಯಯನ ಮಾಡಲು ಸೂಕ್ತವಾದ ಆಧಾರಗಳು ದೊರೆಯುವುದಿಲ್ಲ. ಪಲ್ಲವರು ವಿಜಯನಗರ ಸಾಮ್ರಾಜ್ಯದ ಉದಯದವರೆವಿಗೂ ಸಣ್ಣ ಸಂಸ್ಥಾನ

ಒಂದನ್ನು ಆಳಿರಬಹುದೆಂದು ಇತಿಹಾಸಕಾರರು ಭಾವಿಸುತ್ತಾರೆ. ಈ ಅವಧಿಯಲ್ಲಿ ಪಲ್ಲವರನ್ನು ಸಮಕಾಲೀನವಾಗಿ ಕಡವ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು, ವಿಜಯನಗರದ ಪ್ರವರ್ಧಮಾನದೊಂದಿಗೆ ಪಲ್ಲವರು ಸಂಪೂರ್ಣವಾಗಿ ದಕ್ಷಿಣ ಭಾರತದ ರಾಜಕೀಯ ರಂಗದಿಂದ ಕಣ್ಮರೆಯಾದರು.

## 12.7 ಸಾರಾಂಶವನ್ನು ಗ್ರಹಿಸೋಣ

ದಕ್ಷಿಣ ಭಾರತವನ್ನು ಆಳಿದ ಅನೇಕ ಪ್ರಾಚೀನ ರಾಜಮನೆತನಗಳಲ್ಲಿ ಪಲ್ಲವರು ಪ್ರಮುಖರಾದವ್ರರು. ದಕ್ಷಿಣ ಭಾರತದ ಸಂಸ್ಕೃತಿಗೆ ಪಲ್ಲವರು ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಪಲ್ಲವರ ಮೂಲ ಇದುವರೆವಿಗೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಅವರ ಮೂಲಕ್ಕೆ ಸಂಬಂಧಿಸಿದ ಹಾಗೆ ವಿವಿಧ ರೀತಿಯ ಆರು ಸಿದ್ಧಾಂತಗಳು ಪ್ರಚಲಿತವಾಗಿವೆ. ಪ್ರಾರಂಭಿಕ ಪಲ್ಲವ ದೊರೆಗಳು ಸಮಕಾಲೀನ ಇತರ ದೊರೆಗಳನ್ನು ಸೋಲಿಸಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದರು. ಪಲ್ಲವರಲ್ಲಿ ಪ್ರಮುಖರಾದ ಮೊದಲನೇ ಮಹೇಂದ್ರವರ್ಮನ್, ಮೊದಲನೇ ನರಸಿಂಹವರ್ಮನ್, ಎರಡನೇ ನರಸಿಂಹವರ್ಮನ್ ಮತ್ತು ಎರಡನೇ ನಂದಿವರ್ಮನ್ ದಕ್ಷಿಣ ಭಾರತದ ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸಿದುದಲ್ಲದೆ, ತಮಿಳು ಸಾಹಿತ್ಯ, ಕಲೆ ಹಾಗೂ ಶಿಲ್ಪಕಲೆಗೆ ವೈಶಿಷ್ಟಪೂರ್ಣ ಕೊಡುಗೆಗಳನ್ನು ನೀಡಿದ್ದಾರೆ. ಸಾಗರೋತ್ತರ ವ್ಯಾಪಾರವು ಇವರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದಿತ್ತು.

ದಕ್ಷಿಣ ಭಾರತದ ರಾಜಕಾರಣದಲ್ಲಿ ಪ್ರಮುಖ ಸ್ಥಾನವನ್ನುಗಳಿಸಲು ಪಲ್ಲವರು, ಚಾಳುಕ್ಯ, ಪಾಂಡ್ಯ ಹಾಗೂ ಚೋಳರೊಡನೆ ಘರ್ಷಣೆಗಿಳಿಯಬೇಕಾಯಿತು. ಅಂತಿಮವಾಗಿ ಅಂತಃಕಲಹ ಹಾಗೂ ಇತರ ಪ್ರಬಲ ಶಕ್ತಿಗಳ ಆಕಾಂಕ್ಷೆಗಳಿಂದಾಗಿ ಪಲ್ಲವರು ಅವನತಿಯನ್ನು ಹೊಂದಿದರು.

## 12.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

1. ಪಲ್ಲವರ ಮೂಲಕ್ಕೆ ಸಂಬಂಧಿಸಿದಂತೆ ಯಾವ ಸಿದ್ಧಾಂತವನ್ನು ನೀವು ಒಪ್ಪುವಿರಿ? ಕಾರಣಗಳನ್ನು ನೀಡಿ.
2. ಪಲ್ಲವ -ಚಾಳುಕ್ಯರ ಸಂಬಂಧಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
3. ಪಲ್ಲವರ ಇತಿಹಾಸದಲ್ಲಿ ಮೊದಲನೇ ನರಸಿಂಹವರ್ಮನ ಸ್ಥಾನವನ್ನು ನಿರ್ಧರಿಸಿ.
4. ಪಲ್ಲವರಲ್ಲಿ ಯಾರನ್ನು ಅತ್ಯಂತ ಶ್ರೇಷ್ಠ ಎಂದು ಪರಿಗಣಿಸುವಿರಿ? ಯಾವ ಕಾರಣಕ್ಕೆ ಎಂಬುದನ್ನು ವಿವರಿಸಿ.
5. ಪಲ್ಲವರ ಅವನತಿಗೆ ಕಾರಣವಾದ ಸನ್ನಿವೇಶ ಹಾಗೂ ಅಂಶಗಳನ್ನು ಪರೀಕ್ಷಿಸಿ.

## 12.9 ಕ್ಲಿಷ್ಟ ಪದಗಳು

| | | |
|---|---|---|
| ಮೂಲ ನಿವಾಸಿಗಳು: | | ಇತಿಹಾಸಿಕ ಕಾಲದಿಂದ ಒಂದೇ ಪ್ರದೇಶದಲ್ಲಿ ನೆಲಸಿರುವವರು |
| ಪ್ರಾಕೃತ | : | ಸಂಸ್ಕೃತಕ್ಕೆ ಸಮಾನಾಂತರವಾಗಿ ಅಸ್ತಿತ್ವದಲ್ಲಿದ್ದ ಆಡು ಭಾಷೆ |
| ಸಯಾಮ್ | : | ಇಂದಿನ ಥಾಯ್‌ಲೆಂಡ್ |
| ಶಿಲಾಸ್ತಂಭ | : | ಕಲ್ಲಿನ ಕಂಭ |

## 12.10 ಪಲ್ಲವ ವಂಶಾವಳಿ

ಕೆಳಗೆ ನೀಡಿರುವ ಪಲ್ಲವರ ವಂಶಾವಳಿಯು ಕ್ರಿ.ಶ. ಆರನೇ ಶತಮಾನದಿಂದ ಕ್ರಿ.ಶ. ಹತ್ತನೆ ಶತಮಾನದವರೆವಿಗೂ ಆಳಿದ ದೊರೆಗಳಿಗೆ ಸಂಬಂಧಿಸಿದುದು.

*ಪಲ್ಲವ ವಂಶ*

ಸಿಂಹವರ್ಮ (ಸು.ಕ್ರಿ.ಶ. 550)

ಸಿಂಹ ವಿಷ್ಣು (ಸು.ಕ್ರಿ.ಶ.600)

ಒಂದನೇ ಮಹೇಂದ್ರವರ್ಮನ್ (ಕ್ರಿ.ಶ.600-630)

ಒಂದನೇ ನರಸಿಂಹವರ್ಮನ್ (ಕ್ರಿ.ಶ. 630-688)

ಎರಡನೇಮಹೇಂದ್ರವರ್ಮನ್ (ಕ್ರಿ.ಶ. 668-670)

ಪರಮೇಶ್ವರವರ್ಮನ್ (ಕ್ರಿ.ಶ. 670-700)

ಎರಡನೇ ನರಸಿಂಹ ವರ್ಮನ್ (ಕ್ರಿ.ಶ. 700-728)

ಮೂರನೇ ಮಹೇಂದ್ರ ವರ್ಮನ್ (ಯುವರಾಜ ಕ್ರಿ.ಶ. 720-728)

ಪರಮೇಶ್ವರವರ್ಮನ್ (ಕ್ರಿ.ಶ.728-731)

ಚಿತ್ರಮಯ (ಆಳಲಿಲ್ಲ)

ಎರಡನೇ ನಂದಿವರ್ಮನ್ (ಕ್ರಿ.ಶ.731-796)

ದಂತಿವರ್ಮನ್ (ಕ್ರಿ.ಶ.796-847)

ಮೂರನೇ ನಂದಿವರ್ಮನ್ (ಕ್ರಿ.ಶ. 847-869)

ನೃಪತುಂಗ (ಕ್ರಿ.ಶ. 869-899)

ಅಪರಾಜಿತ (?)

ಕಂಪವರ್ಮನ್ (ಕ್ರಿ.ಶ.900 ?)

## 12.11 ಅಭ್ಯಸನೀಯ ಗ್ರಂಥಗಳು

1. ಜಿ.ಆರ್. ರಂಗಸ್ವಾಮಯ್ಯ, ದಕ್ಷಿಣ ಭಾರತದ ಇತಿಹಾಸ
2. ಜಿ.ಆರ್. ರಂಗಸ್ವಾಮಯ್ಯ, ಪ್ರಾಚೀನ ಭಾರತ
3. K.A. Nilakanta Sastri, *History of South India*
4. N. Subreamanian, *History of Tamilnadu*
5. R. Gopalan, *The Pallavas of Kanehi*

ಡಾ. ಜಿ. ರಾಮರತನ್

## ಘಟಕ -13: ಸಮಾಜ, ಧರ್ಮ ಮತ್ತು ಸಾಹಿತ್ಯಕ್ಕೆ ಪಲ್ಲವರ ಕೊಡುಗೆಗಳು

13.0 ಉದ್ದೇಶಗಳು

13.1 ಪೀಠಿಕೆ

13.2 ಸಮಾಜ

- 13.2.1 ರಚನೆ
- 13.2.2 ಬ್ರಾಹ್ಮಣರ ಪ್ರಾಬಲ್ಯ
- 13.2.3 ಸ್ತ್ರೀಯರ ಸ್ಥಾನಮಾನ
- 13.2.4 ಆಹಾರ ಅಭ್ಯಾಸಗಳು
- 13.2.5 ಆಭರಣ ಮತ್ತು ಉಡುಗೆ
- 13.2.6 ನಂಬಿಕೆ ಮತ್ತು ಧಾರ್ಮಿಕ ವಿಧಿಗಳು

13.3 ಧರ್ಮ

- 13.3.1 ಹಿಂದೂ ಧರ್ಮ
- 13.3.2 ಇತರ ಧರ್ಮಗಳು

13.4 ಸಾಹಿತ್ಯ

- 13.4.1 ಶಿಕ್ಷಣ

13.5 ಸಾರಾಂಶ ಗ್ರಹಿಸೋಣ

13.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

13.7 ಕ್ಲಿಷ್ಟ ಪದಗಳು

13.8 ಅಭ್ಯಸನೀಯ ಗ್ರಂಥಗಳು

ಈ ಘಟಕ ನಿಮಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಮೇಲಿನಂತೆ ವಿನ್ಯಾಸಗೊಳಿಸಲಾಗಿದೆ.

## 13.0 ಉದ್ದೇಶಗಳು

ಆ ಘಟಕವನ್ನು ಅಧ್ಯಯನ ಮಾಡಿದ ನಂತರ ಈ ಕೆಳಕಂಡ ಅಂಶಗಳು ನಿಮಗೆ ಮನದಟ್ಟಾಗಿರಬೇಕು:

1. ಪಲ್ಲವ ಸಮಾಜದ ರಚನೆ, ಸಾಮಾಜಿಕ ವ್ಯವಸ್ಥೆ ಹಾಗೂ ಪಲ್ಲವ ಸಮಾಜದ ಪ್ರಮುಖ ಲಕ್ಷಣಗಳು
2. ಸಮಾಜದಲ್ಲಿ ಬ್ರಾಹ್ಮಣರ ಪ್ರಭಾವ ಹಾಗೂ ಜಾತಿ ಪದ್ಧತಿ ಅಸ್ತಿತ್ವಕ್ಕೆ ಬಂದ ಬಗೆ
3. ಪಲ್ಲವರ ಸಮಕಾಲೀನ ಸಮಾಜದಲ್ಲಿ ಮಹಿಳೆಯ ಸ್ಥಾನಮಾನಗಳು, ಅದರಲ್ಲೂ ವಿಶೇಷವಾಗಿ ಮಹಿಳೆಯ ಸ್ಥಾನ ಗೌಣವಾದಬಗೆ
4. ಕ್ರಿ.ಶ. ಐದನೇ ಶತಮಾನದಿಂದ ಸುಮಾರು ಕ್ರಿ.ಶ. ಹತ್ತನೆ ಶತಮಾನದವರೆವಿಗೂ ತಮಿಳುನಾಡಿನ ಜನ ಸಾಮಾನ್ಯರ ಆಹಾರ ಸೇವನೆ, ಅವರ ಮನೋರಂಜನೆಯ ವಿಧಗಳು, ಜೀವನ ಶೈಲಿ ಇತ್ಯಾದಿ
5. ಪಲ್ಲವ ರಾಜ್ಯದಲ್ಲಿದ್ದ ಧರ್ಮ, ಧಾರ್ಮಿಕ ಚಳವಳಿಗಳ ಪ್ರಾರಂಭ, ಶೈವ ಹಾಗೂ ವೈಷ್ಣವ ಧರ್ಮಗಳ ಪ್ರಾಬಲ್ಯತೆಯಲ್ಲಿ ಹೆಚ್ಚಳ
6. ಹಿಂದೂ ಧರ್ಮದ ಪುನರುದ್ಧಾರದೊಂದಿಗೆ ಜೈನ ಧರ್ಮ ಹಾಗೂ ಬೌದ್ಧ ಧರ್ಮಗಳು ಕಾಲ ಕ್ರಮೇಣ ರಾಜಾಶ್ರಯವನ್ನು ಕಳೆದುಕೊಂಡು ಅವನತಿ ಹೊಂದಿದ ಬಗೆ
7. ಸಾಹಿತ್ಯ, ಅದರಲ್ಲೂ ವಿಶೇಷವಾಗಿ ತಮಿಳು ಸಾಹಿತ್ಯಕ್ಕೆ ಪಲ್ಲವರ ಕೊಡುಗೆಗಳು, ವಿಫುಲವಾದ ಧಾರ್ಮಿಕ ಕೃತಿಗಳು ಸಂಸ್ಕೃತ ಹಾಗೂ ತಮಿಳು ಭಾಷೆಗಳಲ್ಲಿ ಹೊರಹೊಮ್ಮಿದ್ದು ಹಾಗೂ ಧಾರ್ಮಿಕವಲ್ಲದ ಸಾಹಿತ್ಯರಚನೆ ಗೌಣವಾದುದು.

## 13.1 ಪೀಠಿಕೆ

ಈಗಾಗಲೇ ಘಟಕ 12ರಲ್ಲಿ ನೀವು ಅಧ್ಯಯನ ಮಾಡಿರುವ ಪಲ್ಲವ ದೊರೆಗಳ ಬಗ್ಗೆ ನೀವು ತಿಳಿದಿರುವಂತೆ ಅವರು ತಮಿಳುನಾಡು ರಾಜಕಾರಣದಲ್ಲಿ ಸುಮಾರು ಐದು ಶತಮಾನಗಳಷ್ಟು ಕಾಲ ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ಕಾಲವನ್ನು ಪಲ್ಲವ ಕಾಲವೆಂದೇ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಸಿದ್ಧಿಪಡೆದಿದೆ. ಪಲ್ಲವರ ಕಾಲದಲ್ಲಿ ದಕ್ಷಿಣ ಭಾರತದ, ಅದರಲ್ಲೂ ವಿಶೇಷವಾಗಿ ತಮಿಳುನಾಡಿನ, ಸಮಾಜ ಮೂಲಭೂತವಾದ ಬದಲಾವಣೆಗೆ ಒಳಪಟ್ಟಿತು. ದ್ರಾವಿಡ ಸಮಾಜವು ಹಂತಹಂತವಾಗಿ ವೈದಿಕ ಧರ್ಮದ ಪ್ರಭಾವಕ್ಕೆ ಹೆಚ್ಚು ಹೆಚ್ಚಾಗಿ ಒಳಗಾಯಿತು. ಸಾಮಾಜಿಕ ಕ್ರಿಯೆಗಳಲ್ಲಿ ಬ್ರಾಹ್ಮಣರ ಪಾತ್ರ ಪ್ರಭಾವಶೀಲವಾಯಿತು. ಸ್ತ್ರೀಯರ ಸ್ಥಾನಮಾನದಲ್ಲಿ ಇಳಿತ ಕಂಡು ಬಂದಿತು. ಸ್ತ್ರೀಯರು ಪುರುಷರಿಗಿಂತ ಕೀಳು ಎಂಬ ಭಾವನೆ ದ್ರಾವಿಡ ಸಮಾಜದಲ್ಲಿ ಪ್ರಬಲವಾಯಿತು. ಆದರೆ ಧಾರ್ಮಿಕ ಪರಂಪರೆ ಹಾಗೂ ಸಾಮಾಜಿಕ ನಂಬಿಕೆಗಳು ಮೂಲಭೂತವಾದ ಬದಲಾವಣೆಗೆ ಒಳಪಡಲಿಲ್ಲ.

ಪಲ್ಲವರ ಕಾಲದಲ್ಲಿ ಹಿಂದೂ ಧರ್ಮ ಅಥವ ವೈದಿಕ ಧರ್ಮ ಒಂದು ಪ್ರಬಲ ಚಳವಳಿಯಾಗಿ ರೂಪಿತಗೊಂಡಿತು. ಶೈವ ಧರ್ಮವು ಒಂದು ಜನ ಪ್ರಿಯ ಧರ್ಮವಾಗಿ ಈ ಕಾಲದಲ್ಲಿ ಬೆಳೆಯಿತು. ವೈಷ್ಣವ ಧರ್ಮ ಸಹ ಶೈವ ಧರ್ಮ ಜೊತೆಯಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಇದೇ ಕಾಲಕ್ಕೆ ರಾಜಾಶ್ರಯ ಪಡೆದಿದ್ದ ಜನಪ್ರಿಯ ಧರ್ಮಗಳಾದ ಜೈನ ಮತ್ತು ಬೌದ್ಧ ಧರ್ಮಗಳು

ಅವನತಿಯ ಹಾದಿಯನ್ನು ಹಿಡಿದವು. ಜೈನ ಬಸದಿ ಹಾಗೂ ಇತರ ಧಾರ್ಮಿಕ ಕಟ್ಟಡಗಳ ನಾಶ ಅಥವ ಹಿಂದೂ ಧರ್ಮದ ದೇವಾಲಯಗಳಾಗಿ ಪರಿವರ್ತನೆ ಮಾಡಿದುದನ್ನು ಪಲ್ಲವರ ಕಾಲದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವಾಗಿದೆ. ಪ್ರಾಯಶಃ ಬೌದ್ಧರ ವಿಹಾರ ಹಾಗೂ ಚೈತ್ಯಗಳನ್ನು ಸಹ ಇದೇ ರೀತಿಯಲ್ಲಿ ನಾಶಪಡಿಸಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ವ್ಯಾಪಕ ಸಾಹಿತ್ಯ ಸೃಷ್ಟಿಯು ಸಹ ಈ ಕಾಲದ ಒಂದು ಪ್ರಮುಖ ವೈಶಿಷ್ಟವಾಗಿದೆ. ತಮಿಳು ಸಾಹಿತ್ಯ ಕಾಲಕ್ರಮೇಣ ಸಂಸ್ಕೃತದ ಪ್ರಭಾವಕ್ಕೆ ಒಳಗಾಗುವುದನ್ನು ನಾವು ಕಾಣಬಹುದು. ಈ ಸಾಹಿತ್ಯದ ಮತ್ತೊಂದು ಪ್ರಮುಖವಾದ ವೈಶಿಷ್ಟವೆಂದರೆ ಈ ಕಾಲದ ಸಾಹಿತ್ಯವೆಲ್ಲವೂ ಧಾರ್ಮಿಕ ಪ್ರಕಾರದ ಸಾಹಿತ್ಯವಾಗಿತ್ತು. ಧಾರ್ಮಿಕವಲ್ಲದ ಸಾಹಿತ್ಯ ರಚನೆ ಪ್ರಾಯಶಃ ಸಂಘಮ್ ಯುಗಕ್ಕೆ ಸೀಮಿತವಾಗಿರುವಂತೆ ತೋರುತ್ತದೆ. ಬಹುಪಾಲು ಪಲ್ಲವ ದೊರೆಗಳು ಸಾಹಿತ್ಯ ಸೃಷ್ಟಿಗೆ ಪ್ರೋತ್ಸಾಹವನ್ನು ನೀಡಿದರು. ಅವರ ಆಸ್ಥಾನ ಅನೇಕ ಕವಿಗಳಿಗೆ ಆಶ್ರಯ ಸ್ಥಾನವಾಗಿತ್ತು. ಶಿಕ್ಷಣವು ಸಹ ಈ ಕಾಲದಲ್ಲಿ ಅಭಿವೃದ್ಧಿಗೊಂಡಿತು. ಕಂಚಿ ದಕ್ಷಿಣ ಭಾರತದ ಪ್ರಮುಖ ಶಿಕ್ಷಣ ಕೇಂದ್ರವಾಗಿ ಪಲ್ಲವ ಕಾಲದಲ್ಲಿ ಬೆಳೆಯಿತು.

## 13.2 ಸಮಾಜ

ನಾವು ಈಗಾಗಲೇ ಗಮನಿಸಿರುವಂತೆ ಸಂಘಮ್ ಯುಗ ಕೊನೆಗೊಂಡಂತೆ ತಮಿಳುನಾಡಿನ ಸಮಾಜದಲ್ಲಿ ಸೈದ್ಧಾಂತಿಕ ಬದಲಾವಣೆ ಪ್ರಾರಂಭವಾಯಿತು. ಪಲ್ಲವ ಕಾಲದಲ್ಲಿ ದ್ರಾವಿಡ ಮತ್ತು ಆರ್ಯರ ಸಾಮಾಜಿಕ ವ್ಯವಸ್ಥೆಗಳು ಮಿಳಿತವಾಗುವುದನ್ನು ನಾವು ಗಮನಿಸಬಹುದು. ವರ್ಣಾಶ್ರಮಧರ್ಮ ಮತ್ತು ಚತುರ್ವರ್ಣಗಳು ದಕ್ಷಿಣ ಭಾರತದ ಸಮಾಜದಲ್ಲಿ ಒಪ್ಪಲ್ಪಟ್ಟವು. ಸಂಘಮ್ ಯುಗ ಕೊನೆಗೊಂಡು ಪಲ್ಲವ ಕಾಲ ಪ್ರಾರಂಭವಾದ ಮಧ್ಯದ ಅವಧಿಯಲ್ಲಿ ಆಗಿರಬಹುದಾದ ಬದಲಾಣೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲು ನಮಗೆ ಸರಿಯಾದ ಆಧಾರಗಳು ಲಭ್ಯವಾಗಿಲ್ಲ. ಆದರೆ ಪಲ್ಲವ ಸಮಾಜಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಅಲ್ಪಸ್ವಲ್ಪ ಆಧಾರಗಳನ್ನು ಉಪಯೋಗಿಸಿಕೊಂಡು ಈ ಕಾಲದ ಸಾಮಾಜಿಕ ಇತಿಹಾಸವನ್ನು ರಚಿಸಬಹುದಾಗಿದೆ. ಮುಂದಿನ ಉಪ ವಿಭಾಗದಲ್ಲಿ ಪಲ್ಲವ ಸಮಾಜಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ಕುರಿತಂತೆ ಚರ್ಚಿಸಲಾಗಿದೆ.

### 13.2.1 ರಚನೆ

ಪಲ್ಲವರ ಕಾಲದಲ್ಲೂ ತಮಿಳು ಸಾಮಾಜವು ವಿಭಿನ್ನ ಹಾಗೂ ವಿವಿಧ ಅಂಶಗಳನ್ನು ಒಳಗೊಂಡಿತ್ತು. ದ್ರಾವಿಡ ಮತ್ತು ದ್ರಾವಿಡ ಪೂರ್ವದ ಅಂಶಗಳು ತಮಿಳು ಸಮಾಜದಲ್ಲಿ ಮುಂದುವರೆದವು. ಕಾಲಕ್ರಮೇಣ ದ್ರಾವಿಡಪೂರ್ವದ ನಾಗರೀಕತೆಯ ಅಂಶಗಳು ಗುಡ್ಡಗಾಡು ಹಾಗೂ ಅರಣ್ಯ ಪ್ರದೇಶಗಳಿಗೆ ಸೀಮಿತವಾಗುವುದನ್ನು ಪಲ್ಲವರ ಕಾಲದಲ್ಲಿ ಗಮನಿಸಬಹುದು. ಪಲ್ಲವರ ಕಾಲದಲ್ಲಿ ತಮಿಳು ಸಮಾಜಕ್ಕೆ ಸೇರ್ಪಡೆಯಾದ ಮೂರನೇ ಅಂಶವೆಂದರೆ ಆರ್ಯೀಕರಣಕ್ಕೆ ಒಳಪಟ್ಟ ತಮಿಳು ಸಮಾಜದ ಒಂದು ಭಾಗ. ಈ ಭಾಗ ಆರ್ಯರ ಹಾಗೂ ದ್ರಾವಿಡರ ಎರಡೂ ಅಂಶಗಳನ್ನು ಒಳಗೊಂಡಿತ್ತು. ಇದೇ ಕಾಲಕ್ಕೆ ಸಂಬಂಧಪಟ್ಟ ಹಾಗೆ ನಾವು ಎರಡು ಬೆಳವಣಿಗೆಗಳನ್ನು ಗಮನಿಸಬಹುದು. ಅವುಗಳೆಂದರೆ (ಅ) ತಮಿಳು ಸಮಾಜವು ಬ್ರಾಹ್ಮಣರ ಶ್ರೇಷ್ಠತೆಯನ್ನು ಒಪ್ಪಿಕೊಂಡಿದ್ದು; ಮತ್ತು (ಆ) ವಂಶ ಪಾರಂಪರಿಕ ವೃತ್ತಿಯನ್ನು ಜಾರಿಗೆ ತಂದದ್ದು. ಇಷ್ಟಾದರೂ

ದ್ರಾವಿಡ ಮತ್ತು ಆರ್ಯರ ಮಧ್ಯದ ಬಿರುಕು ಕಣ್ಮರೆಯಾಗದೆ ಮುಂದುವರೆಯಿತು. ಆರ್ಯೀಕರಣಕ್ಕೆ ಒಳಪಟ್ಟ ಸಮಾಜದ ಭಾಗವು ತಾವು ಶ್ರೇಷ್ಠ ಎಂಬ ಭಾವನೆಯನ್ನು ಮುಂದುವರೆಸಿತು. ದ್ರಾವಿಡ ಅಥವ ಆರ್ಯರಲ್ಲದ ಭಾಗವು ಈ ರೀತಿಯ ಆರ್ಯ ಶ್ರೇಷ್ಠತೆಯನ್ನು ವಿರೋಧಿಸಿತು. ಇಷ್ಟೆಲ್ಲಾ ಬದಲಾವಣೆಗಳು ತಮಿಳು ಸಮಾಜದಲ್ಲಿ ಕಂಡು ಬಂದರೂ ಬಹು ಸಂಖ್ಯಾತ ಮತೀಯರು ಸಂಘಮ್ ಯುಗದಲ್ಲಿದ್ದಂತೆ ಮುಂದುವರೆದರು. ಈ ಬಹು ಸಂಖ್ಯಾತ ಮತೀಯರೆಂದರೆ ಕದಂಬರು, ಕಡವರು, ವೇಡರು, ಇದೈಯರು, ಮಿನವರು ಮತ್ತು ಉಳವರರು.

ಪಲ್ಲವರ ಕಾಲದಲ್ಲಿ ಗುಲಾಮಗಿರಿ ಪದ್ಧತಿಯು ಪ್ರಚಲಿತವಾಗಿತ್ತು. ಪ್ರಾಚೀನ ತಮಿಳು ಸಾಹಿತ್ಯ ಕೃತಿಗಳು ಗುಲಾಮಗಿರಿಯ ಅಸ್ತಿತ್ವವನ್ನು ಉಲ್ಲೇಖಿಸಿವೆ. ತಮಿಳು ಸಾಹಿತ್ಯ ಗುಲಾಮನನ್ನು 'ಅಡಿಮೈ' ಎಂಬುದಾಗಿ ಕರೆದಿದೆ. 'ಅಡಿಮೈ' ಎಂದರೆ ಅರ್ಥ "ಇನ್ನೊಬ್ಬ ವ್ಯಕ್ತಿಯ ಪಾದ ದಡಿಯಲ್ಲಿರುವವನು". ಗುಲಾಮರನ್ನು ಸುಡುಮುದ್ರೆಯ ಪ್ರಕ್ರಿಯೆಗೆ ಒಳಪಡಿಸುವುದು ಸಾಮಾನ್ಯ ಸಂಗತಿಯಾಗಿತ್ತು. ಗುಲಾಮರು ಭೂಮಾಲಿಕರಾಗಿದ್ದುದು ಅಪರೂಪವಾಗಿತ್ತು. ಈ ಗುಲಾಮರ ಮಾಲೀಕರು ಸಾಮಾನ್ಯವಾಗಿ ಭೂಮಾಲಿಕ ವರ್ಗಕ್ಕೆ ಸೇರಿದವರಾಗಿದ್ದರು. ಈ ಗುಲಾಮರ ಜೀವನಮಟ್ಟ ನಿಕೃಷ್ಟವಾಗಿತ್ತು ಎಂಬ ಸತ್ಯವನ್ನು ಅಲ್ಲಗಳೆಯುವಂತಿಲ್ಲ.

### 13.2.2 ಬ್ರಾಹ್ಮಣರ ಪ್ರಾಬಲ್ಯ

ಸಂಘಮ್ ಯುಗದ ಪೂರ್ವದಿಂದಲೂ ಬ್ರಾಹ್ಮಣರು ತಮಿಳು ಸಮಾಜದ ಒಂದು ಭಾಗವಾಗಿದ್ದಾರೆ. ಸಂಘಮ್ ಸಾಹಿತ್ಯ ಬ್ರಾಹ್ಮಣರ ಇರುವಿಕೆಯನ್ನು ಉಲ್ಲೇಖಿಸಿವೆ. ಸಂಘಮ್ ಕಾಲದ ಸಾಹಿತ್ಯದಲ್ಲಿ ಸಣ್ಣ ಪ್ರಮಾಣದ ಬ್ರಾಹ್ಮಣ ಸಾಹಿತ್ಯವನ್ನು ಸಹ ನಾವು ಕಾಣಬಹುದು. ಉತ್ತರದಿಂದ ಪ್ರಾರಂಭದಲ್ಲಿ ಬಂದವರು ಬ್ರಾಹ್ಮಣರು. ತದನಂತರ ಅವರನ್ನು ಹಿಂಬಾಲಿಸಿದವರು ಜೈನರು ಮತ್ತು ಭೌದ್ಧ ಧರ್ಮಿಯರು. ಪ್ರಾಯಶಃ ಈ ಪ್ರಕ್ರಿಯೆ ಕ್ರಿ.ಪೂ. ಮೂರನೇ ಶತಮಾನದಲ್ಲಿ ಪ್ರಾರಂಭವಾಗಿರಬಹುದೆಂದು ಊಹಿಸಲಾಗಿದೆ. ಈ ರೀತಿಯ ವಲಸೆ ಅವ್ಯಾಹತವಾಗಿ ಮುಂದಿನ ಶತಮಾನಗಳಲ್ಲಿ ಮುಂದುವರೆಯಿತು. ಭೌದ್ಧ ಹಾಗೂ ಜೈನ ಮತಗಳು ಪ್ರಬಲವಾಗಿದ್ದ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಕ್ಷಿಣಕ್ಕೆ ಬಂದ ವಲಸೆಗಾರರು ಈ ಧರ್ಮಗಳಿಗೆ ಸೇರಿದ್ದವರಾಗಿದ್ದರು. ಗುಪ್ಪರ ಯುಗ ಮತ್ತೊಮ್ಮೆ ಹಿಂದೂ ಧರ್ಮದ ಪ್ರವರ್ಧಮಾನಕ್ಕೆ ಕಾರಣವಾಯಿತು. ಗುಪ್ತರ ಯುಗದಲ್ಲಿ ವೈದಿಕ ಧರ್ಮಕ್ಕೆ ಸೇರಿದವರು ದಕ್ಷಿಣದ ವಲಸೆ ಹೆಚ್ಚಾಯಿತು. ಈ ರೀತಿ ವಲಸೆ ಬಂದ ವೈದಿಕ ಧರ್ಮಿಯರಲ್ಲಿ ಬ್ರಾಹ್ಮಣರ ಸಂಖ್ಯೆ ಕನಿಷ್ಠವಾಗಿದ್ದರೂ ಸ್ಥಳೀಯ ಆಳುವ ವರ್ಗವನ್ನು ತಮ್ಮ ಜೀವನಶೈಲಿ, ಶ್ರೇಷ್ಠ ಬುದ್ಧಿಶಕ್ತಿ ಹಾಗೂ ಅಧ್ಯಾತ್ಮಿಕತೆಯಿಂದ ತಮ್ಮ ಪ್ರಭಾವಕ್ಕೆ ಒಳಪಡಿಸಿದರು. ಪಲ್ಲವರ ಕಾಲ ಹಾಗೂ ಮುಂದಿನ ಶತಮಾನಗಳಲ್ಲಿ ಬ್ರಾಹ್ಮಣ ಮತ್ತು ಆಳುವ ವರ್ಗಗಳ ಮಧ್ಯೆ ಪರಸ್ಪರ ಹೊಂದಾಣಿಕೆಯ ಸಂಬಂಧಗಳು ಗಾಢವಾದವು. ಪಲ್ಲವರು ವಲಸೆ ಬಂದ ಬ್ರಾಹ್ಮಣರನ್ನು ಪ್ರೋತ್ಸಾಹಿಸಿದರು. ಈ ವಲಸೆ ಬಂದ ಬ್ರಾಹ್ಮಣರು ತಮಿಳು ಸಮಾಜದ ಮೇಲೆ ತಮ್ಮ ಪ್ರಭಾವವನ್ನು ಹೇರಲು ಸತತವಾಗಿ ಪ್ರಯತ್ನಿಸಿದರು. ತಮ್ಮ ರಾಜತ್ವದ ಹಕ್ಕು ಸರ್ವಮಾನ್ಯವಾಗಲು ಪಲ್ಲವರಿಗೆ ಧರ್ಮ, ಧಾರ್ಮಿಕ ಆಚರಣೆ ಇತ್ಯಾದಿಗಳ ಅಗತ್ಯವಿತ್ತು. ಸ್ವಾಭಾವಿಕವಾಗಿಯೇ ಈ ಎಲ್ಲಾ ವಿಷಯಗಳಲ್ಲಿ ಪರಿಣಿತರಾಗಿದ್ದ ಬ್ರಾಹ್ಮಣರನ್ನು ಅವರು ಆಶ್ರಯಿಸ ಬೇಕಾಯಿತು. ಈ ರೀತಿ ಪರಸ್ಪರ ಅನುಕೂಲಕ್ಕಾಗಿ ಒಂದಾದ ಪಲ್ಲವರು ಅಂದರೆ ಆಳುವ ವರ್ಗದವರು

ಮತ್ತು ಬ್ರಾಹ್ಮಣರು ತಮಿಳು ಸಮಾಜದ ಇತರ ವರ್ಗಗಳ ದುರ್ಬಲತೆಗೆ ಕಾರಣರಾದರು. ಈ ಒಂದು ಸನ್ನಿವೇಶದಲ್ಲೂ ಸಮಾಜದ ಮೇಲಿನ ಸಾರ್ವಭೌಮತ್ವಕ್ಕೆ ಆಳುವ ವರ್ಗ ಮತ್ತು ಬ್ರಾಹ್ಮಣರ ಮಧ್ಯೆ ತೆರೆಮರೆಯಲ್ಲಿ ಸಂಘರ್ಷದಲ್ಲಿ ಅವ್ಯಾಹತವಾಗಿ ನಡೆದಿತ್ತು. ಅಂತಿಮವಾಗಿ ಸಂಘರ್ಷದಲ್ಲಿ ಬ್ರಾಹ್ಮಣರು ವಿಜಯಿಗಳಾದರು. ಆಳುವ ವರ್ಗವು ಸದಾಕಾಲ ಮೇಲೇರುವ ಮತ್ತು ಅವನತಿ ಹೊಂದುವ ನಿಯಮಕ್ಕೆ ಒಳಪಟ್ಟಿದ್ದರಿಂದ ಬ್ರಾಹ್ಮಣರ ಮೇಲೆ ನಿಯಂತ್ರಣವನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಪಲ್ಲವರು ಅಂತಿಮವಾಗಿ ತಮಿಳುನಾಡಿನ ರಾಜಕಾರಣದಿಂದ ಕಣ್ಮರೆಯಾದರು, ಬ್ರಾಹ್ಮಣರ ಪ್ರಾಬಲ್ಯ ಅಭಾದಿತವಾಗಿ ಮುಂದುವರೆದುದನ್ನು ಒಂದು ಉದಾಹರಣೆಯಾಗಿ ಇಲ್ಲಿ ಗಮನಿಸಬಹುದು. ಪಲ್ಲವರ ಕಾಲದ ರಾಜಕೀಯ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಪ್ರಮುಖ ಸ್ಥಾನಗಳನ್ನು ಪಡೆಯುವುದರಲ್ಲಿ ಯಶಸ್ವಿಯಾದರು. ಮಂತ್ರಿಗಳಾಗಿ, ನ್ಯಾಯಾಧೀಶರಾಗಿ, ಅಧ್ಯಾಪಕರಾಗಿ, ಸಮಾಲೋಚಕರಾಗಿ, ಪುರೋಹಿತರಾಗಿ, ರಾಯಭಾರಿಗಳಾಗಿ ಬ್ರಾಹ್ಮಣರು ಪಲ್ಲವರ ಕಾಲದಲ್ಲಿ ನೇಮಕಗೊಂಡರು. ಕೆಲವೊಮ್ಮೆ ಬ್ರಾಹ್ಮಣರು ದಂಡನಾಯಕರಾಗಿಯೂ ಸಹ ನೇಮಕವಾದರು.

ಬ್ರಾಹ್ಮಣರಿಗೆ ವ್ಯಕ್ತಿಗತವಾಗಿ ಪಲ್ಲವರು ತೆರಿಗೆ ರಹಿತ ಕೃಷಿಭೂಮಿಯನ್ನು ದಾನವಾಗಿ ನೀಡಿ ಗೌರವಿಸಿದರು. ಅದೇರೀತಿ ಬ್ರಾಹ್ಮಣರು ಸ್ಥಾಪಿಸಿದ ವಿದ್ಯಾಕೇಂದ್ರಗಳಿಗೆ, ಅಗ್ರಹಾರಗಳಿಗೆ ಪಲ್ಲವರು ಧಾರಾಳವಾದ ಸಹಾಯವನ್ನು ನೀಡಿದರು. ಲಭ್ಯವಿದ್ದ ಉತ್ತಮ ಕೃಷಿ ಭೂಮಿ ಅಂತಿಮವಾಗಿ ಬ್ರಾಹ್ಮಣರ ಪಾಲಾಯಿತು. ಪಲ್ಲವರು ನಿರ್ಮಾಣ ಮಾಡಿದ ಅತ್ಯಂತ ಬೃಹತ್ ದೇವಾಲಯಗಳು ಬ್ರಾಹ್ಮಣರ ನಿಯಂತ್ರಣಕ್ಕೆ ಒಳಪಟ್ಟಿದ್ದುದನ್ನು ನಾವು ಇಲ್ಲಿ ಗಮನಿಸಬಹುದು. ವ್ಯಕ್ತಿಯಾಗಿ ಬ್ರಾಹ್ಮಣನೊಬ್ಬನ್ನು ಎಲ್ಲಾ ಸನ್ನಿವೇಶಗಳಿಗೂ ಹೊಂದಿಕೊಳ್ಳುವ ಗುಣಗಳನ್ನು ಹೊಂದಿದ್ದರಿಂದ ಅಂತಿಮವಾಗಿ ಉನ್ನತ ಮಟ್ಟವನ್ನು ಮುಟ್ಟಲು ಸಾಧ್ಯವಾಗುತ್ತಿತ್ತು.

## 13.2.3 ಸ್ತ್ರೀಯರ ಸ್ಥಾನಮಾನ

ಮಹಿಳಾ ಕಲ್ಯಾಣದ ಬಗೆ ಪಲ್ಲವರು ಚಿಂತಿಸಿದಂತೆ ತೋರುವುದಿಲ್ಲ. ಮಹಿಳೆಯ ಅಭಿವೃದ್ಧಿಗೆ ಯಾವುದೇ ಕಾರ್ಯಕ್ರಮವನ್ನು ಅವರು ರಾಜ್ಯನೀತಿಯಲ್ಲಿ ಅಳವಡಿಸಿಕೊಳ್ಳಲಿಲ್ಲ. ಮಹಿಳೆ ಹಿಂದಿನ ಶತಮಾನಗಳಲ್ಲಿ ಹೊಂದಿದ್ದ ಸ್ಥಾನಮಾನವನ್ನೇ ಹೊಂದಿದ್ದು ಅದರಲ್ಲೆ ತೃಪ್ತಿಪಡಬೇಕಾಯಿತು. ಮಹಿಳೆ ಪುರುಷರಿಗಿಂತ ಕೀಳು ಎಂಬ ಭಾವನೆಯಲ್ಲಿ ಯಾವುದೇ ಪ್ರಗತಿಪರ ಬದಲಾವಣೆಯಾಗಲಿಲ್ಲ. ಸ್ತ್ರಿಯರ ಬಾಲ್ಯ ಜೀವನದಲ್ಲಿ ತಂದೆ ಹಾಗೂ ವಿವಾಹವಾದ ನಂತರ ಪತಿಯ ಆಸರೆಯಲ್ಲೆ ಜೀವಿಸಬೇಕಿತ್ತು. ಪತಿ ಮರಣ ಹೊಂದಿದ ಪಕ್ಷದಲ್ಲಿ ಮಹಿಳೆ ಆಕೆಯ ಮಗನ ನಿಯಂತ್ರಣದಲ್ಲಿರಬೇಕಿತ್ತು. ಧರ್ಮ, ನಂಬಿಕೆ ಮತ್ತು ಧರ್ಮಶಾಸ್ತ್ರಗಳು ಈ ರೀತಿಯಲ್ಲಿ ಸ್ತ್ರಿಯರ ಸ್ಥಾನಮಾನಗಳಿಗೆ ಕಾನೂನಿನ ನೆಲೆಗಳನ್ನು ಒದಗಿಸಿದವು.

ಪಲ್ಲವ ಕಾಲದ ಪೂರ್ವದಲ್ಲಿ ಹಾಗೂ ಪಲ್ಲವ ಕಾಲದ ನಂತರದ ಶತಮಾನಗಳಲ್ಲಿ ಪ್ರಚಲಿತವಾಗಿದ್ದ ಪರಂಪರೆಯಂತೆ ಪಲ್ಲವರ ಆಳ್ವಿಕೆಯಲ್ಲೂ ಸ್ತ್ರಿಯರಿಗೆ ಆಸ್ತಿಯ ಹಕ್ಕಿರಲಿಲ್ಲ. ಈ ಕಾರಣದಿಂದಾಗಿ ಮಹಿಳೆಯ ಆರ್ಥಿಕ ಸ್ಥಿತಿಗತಿ ಶೋಚನಿಯವಾಗಿತ್ತು. ಇದೇ ಕಾರಣದಿಂದಾಗಿ ಸ್ತ್ರಿ ಪುರುಷನನ್ನು ಅವ್ಯಾಹತವಾಗಿ ಅವಲಂಬಿಸಿರಬೇಕಿತ್ತು. ಪಲ್ಲವ ರಾಜಕುಮಾರಿಯರಿಗೆ ಸಿಂಹಾಸನ ಅಥವ ರಾಜ್ಯದಉತ್ತರಾಧಿಕಾರತ್ವದ ಹಕ್ಕಿರಲಿಲ್ಲ. ಈ ಕಾಲದಲ್ಲಿ ಪ್ರಮುಖ ಹುದ್ದೆಗಳಲ್ಲಿ ಅಂದರೆ

ನ್ಯಾಯಾಧೀಶರಾಗಿ, ಸಚಿವರಾಗಿ ಹಾಗೂ ಪ್ರಾಂತೀಯ ಪ್ರಾಂತ್ಯಾಧಿಕಾರಿಗಳಾಗಿ ಅಲಂಕರಿಸುವಂತಿರಲಿಲ್ಲ. ಇತರ ಮಹಿಳೆಯರು ಈ ವ್ಯವಸ್ಥೆಯನ್ನು ಬೆಂಬಲಿಸಿದರು ಹಾಗಾಗಿ ತಮಿಳು ಸಮಾಜದಲ್ಲಿ ಮಹಿಳೆಯ ಸ್ಥಾನಮಾನ ಶೋಚನಿಯವಾಗಿತ್ತು ಎಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ. ವಿಧವೆಯ ಜೀವನ ಬಹಳ ದುಸ್ತರವಾಗಿತ್ತು ಸನ್ಯಾಸಿನಿಯ ರೀತಿಯ ಜೀವನವನ್ನು ವಿಧವೆ ನಡೆಸಬೇಕಿತ್ತು. ಯಾವುದೇ ಮನೊರಂಜನೆಯಲ್ಲಿ ಹಾಗೂ ಧಾರ್ಮಿಕವಿಧಿಗಳಲ್ಲಿ ಆಕೆ ಪಾಲ್ಗೊಳ್ಳುವಂತಿರಲಿಲ್ಲ. ಸತಿ ವ್ಯಾಪಕವಾದ ಪದ್ಧತಿಯಾಗಿರಲಿಲ್ಲ. ಸತಿ ಆಳುವ ವರ್ಗ ಮತ್ತು ಪುರೋಹಿತ ವರ್ಗಕ್ಕೆ ಮಾತ್ರ ಸೀಮಿತವಾಗಿರುವಂತೆ ತೋರುತ್ತದೆ. ಸತಿ ಆದ ಮಹಿಳೆಗೆ ಸಮಾಜದಲ್ಲಿ ಪವಿತ್ರಸ್ಥಾನವನ್ನು ನೀಡಲಾಗುತ್ತಿತ್ತು.

ಪಲ್ಲವರ ಕಾಲದ ತಮಿಳು ಸಮಾಜದಲ್ಲಿ ವಿವಾಹ ಒಂದು ಒಪ್ಪಂದವಾಗಿರಲಿಲ್ಲ, ವಿವಾಹ ಒಂದು ಪವಿತ್ರ ಬಂಧನವಾಗಿತ್ತು. ವಿವಾಹ ಬಂಧನದಲ್ಲಿ ಪ್ರೀತಿಗಿಂತ ಧಾರ್ಮಿಕ ಆಚರಣೆಗೆ ಹೆಚ್ಚು ಒತ್ತನ್ನು ನೀಡಲಾಗಿತ್ತು. ಮಹಿಳೆಗೆ ವಿವಾಹ ನಿಜವಾದ ಅರ್ಥದಲ್ಲಿ ಒಂದು ರೀತಿಯ ಬಂಧನವೇ ಆಗಿತ್ತು. ಜೀವನ ಪೂರ್ತಿ ಮಹಿಳೆ ಒಬ್ಬ ಪುರುಷನೊಡನೆ ಮಾತ್ರ ಬಾಳುವೆ ನಡೆಸಬಹುದಾಗಿತ್ತು. ಆದರೆ ಪುರುಷನಿಗೆ ಈ ರೀತಿಯ ನಿರ್ಬಂಧವಿರಲಿಲ್ಲ ಆತ ಸ್ವಚ್ಛಂದ ಜೀವನ ನಡೆಸುವ ಅಧಿಕಾರವನ್ನು ಸಮಾಜ ಕಲ್ಪಿಸಿಕೊಟ್ಟಿತ್ತು. ವಿವಾಹಿತ ಮಹಿಳೆ ಎಂಬುದನ್ನು ಸೂಚಿಸುವ ಸಲುವಾಗಿ ಆಕೆ ಸದಾಕಾಲ ತಾಳಿಯನ್ನು ಕತ್ತಿನಲ್ಲಿ ಕಟ್ಟಿರಬೇಕಿತ್ತು. ವಿಧವೆಯ ತಲೆಯನ್ನು ಬೋಳಿಸುವುದು ಸಾಮಾಜಿಕ ಸಂಪ್ರದಾಯವೇ ಆಗಿತ್ತು.

ಪಲ್ಲವ ದೊರೆಗಳು ವಿಶಾಲವಾದ ಅಂತಃಪುರಗಳನ್ನು ಹೊಂದಿದ್ದು ಅನೇಕ ಉಪ ಪತ್ನಿಯರು ಅಲ್ಲಿ ವಾಸಿಸುತ್ತಿದ್ದರು. ವೇಶ್ಯವೃತ್ತಿ ಪಲ್ಲವರ ಕಾಲದಲ್ಲಿ ಸಾಮಾನ್ಯ ವಿಷಯವಾಗಿತ್ತು. ವೇಶ್ಯೆಯರು ನಗರದ ಹೊರಭಾಗದಲ್ಲಿ ವಾಸವಾಗಿದ್ದು ಸ್ವಚ್ಛಂದ ಜೀವನ ನಡೆಸುತ್ತಿದ್ದರು. ವಿಟಪುರುಷರ ಸಂಖ್ಯೆಯು ಸಾಕಷ್ಟಿತ್ತು. ಪಲ್ಲವರ ಕಾಲದ ವೇಶ್ಯೆಯರು ನೃತ್ಯ, ಸಂಗೀತಾ ಹಾಗೂ ಇತರ ಲಲಿತ ಕಲೆಗಳಲ್ಲಿ ಪರಿಣಿತಿಯನ್ನು ಹೊಂದಿದ್ದರು.

## 13.2.4 ಆಹಾರ ಅಭ್ಯಾಸಗಳು

ಶ್ರೀಮಂತರು ಮತ್ತು ಆಳುವ ವರ್ಗದವರ ಆಹಾರವು ವೈವಿಧ್ಯಮಯವಾಗಿತ್ತು. ಆದರೆ ಸಾಮಾನ್ಯಜನರ ಆಹಾರ ಒಂದೆರಡು ಭಕ್ಷ್ಯಗಳಿಗೆ ಮಾತ್ರ ಸೀಮಿತವಾಗಿರುತ್ತಿತ್ತು. ಅಕ್ಕಿ ಅತ್ಯಂತ ವ್ಯಾಪಕವಾಗಿ ಬಳಸಲ್ಪಡುತ್ತಿದ ಆಹಾರ ಧಾನ್ಯವಾಗಿತ್ತು. ಮಾಂಸಹಾರ ಸಾಮಾನ್ಯವಾಗಿತ್ತು. ಸಮಾಜದ ಕೆಲವು ವರ್ಗದವರು ಮಾತ್ರ ಮಾಂಸಹಾರವನ್ನು ತ್ಯಜಿಸಿದ್ದರು. ಗುಡ್ಡಗಾಡು ಮತ್ತು ಅರಣ್ಯವಾಸಿಗಳಿಗೆ ಬೇಟೆಯಾಡುವುದು ಮುಖ್ಯ ಕಸುಬಾಗಿತ್ತು ಮಾಂಸ ಈ ಜನರ ಮುಖ್ಯ ಆಹಾರವಾಗಿತ್ತು. ಬ್ರಾಹ್ಮಣರು, ಜೈನರು ಇತ್ಯಾದಿಗಳು ಪೂರ್ಣ ಶಾಖಾಹಾರಿಗಳಾಗಿದ್ದರು. ಪಲ್ಲವ ಕಾಲದ ಅನೇಕ ಚಿಂತಕರು ಹಾಗೂ ತತ್ವಜ್ಞಾನಿಗಳು ಮಾಂಸಹಾರ ಹಾಗೂ ಮಾದಕ ಪಾನೀಯಗಳ ಸೇವನೆಯನ್ನು ವಿರೋಧಿಸಿದರು. ಆದರೆ ಆಳುವ ವರ್ಗ ಹಾಗೂ ಶ್ರೀಮಂತರಲ್ಲಿ ಮದಿರ ಸೇವನೆ ಸಾಮಾನ್ಯ ಅಭ್ಯಾಸವಾಗಿತ್ತು. ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಎಲ್ಲಾ ವರ್ಗದ ಜನರು ಬಳಸುತ್ತಿದ್ದರು.

## 13.2.5 ಆಭರಣ ಮತ್ತು ಉಡುಗೆ

ಆಳುವ ವರ್ಗ ಮತ್ತು ಶ್ರೀಮಂತರು ಆಭರಣಗಳನ್ನು ಉಪಯೋಗಿಸುತ್ತಿದ್ದರು. ಚಿನ್ನ, ಬೆಳ್ಳಿ ಹಾಗೂ ಇತರ ಅಮೂಲ್ಯ ಹರಳುಗಳಿಂದ ತಯಾರಿಸಿದ ವಿವಿಧ ರೀತಿಯ ಆಭರಣಗಳನ್ನು ಧರಿಸುತ್ತಿದ್ದರು. ಬಳೆಗಳು, ಕಿವಿಯ ಓಲೆ, ಕತ್ತಿನ ಹಾರಗಳು, ಕಂಠಿ ಹಾರಗಳು, ಸೊಂಟದ ಪಟ್ಟಿ, ತೋಳುಬಂಧಿ, ಕೂದಲಿನ ವಿವಿಧ ರೀತಿಯ ಆಭರಣಗಳನ್ನು ಸಾಮಾನ್ಯವಾಗಿ ಧರಿಸುತ್ತಿದ್ದರು ಅಮೂಲ್ಯ ಲೋಹದಲ್ಲಿ ಮಾಡಿದ ತಾಳಿಯನ್ನು ಸಾರ್ವತ್ರಿಕವಾಗಿ ವಿವಾಹವಾದ ಮಹಿಳೆಯರೆಲ್ಲರೂ ಕಡ್ಡಾಯವಾಗಿ ಧರಿಸುತ್ತಿದ್ದರು. ವಿವಿಧ ರೀತಿಯ ಹೂವುಗಳನ್ನು ಸಹ ಮಹಿಳೆಯರು ಶಿರಭಾಗದಲ್ಲಿ ಧರಿಸುತ್ತಿದ್ದರು.

ತಮಿಳುನಾಡಿನ ಹವಾಮಾನ ತಮಿಳು ಸಮಾಜದ ಉಡುಗೆ ತೊಡುಗೆಗಳನ್ನು ನಿರ್ಧರಿಸಿತ್ತು. ವರ್ಷದ ಹೆಚ್ಚು ಭಾಗ ಉಷ್ಣಾಂಶ ಹೆಚ್ಚಿರುವುದರಿಂದ ಪುರುಷರು ಅತ್ಯಂತ ಕಡಿಮೆ ಬಟ್ಟೆಗಳನ್ನು ಧರಿಸುತ್ತಿದ್ದರು. ಕಷ್ಟ ಜೀವಿಗಳು ಕೇವಲ ಕೌಪೀನವನ್ನು ಮಾತ್ರ ಧರಿಸುತ್ತಿದ್ದರು. ಶ್ರೀಮಂತರು ವಿವಿಧ ರೀತಿಯ ಉಡುಗೆ ತೊಡುಗೆಗಳನ್ನು ಧರಿಸುತ್ತಿದ್ದರು, ಸಾಮಾನ್ಯವಾಗಿ ಶ್ರೀಮಂತರು ರೇಷ್ಮೆ ಉಡುಗೆಗಳನ್ನು ಮತ್ತು ಜನ ಸಾಮಾನ್ಯರು ಹತ್ತಿಯ ಬಟ್ಟೆಗಳನ್ನು ಧರಿಸುತ್ತಿದ್ದರು. ದರ್ಜಿಗಳ ವೃತ್ತಿ ವ್ಯಾಪಕವಾಗಿಲ್ಲದಿದ್ದರೂ, ತಮಿಳು ಸಮಾಜದಲ್ಲಿ ಒಂದು ಜಾತಿ ಸೂಚಕ ವೃತ್ತಿಯಾಗಿತ್ತು. ದರ್ಜಿಗಳು ಶ್ರೀಮಂತರಿಗೆ ಮತ್ತು ಆಳುವ ವರ್ಗದವರಿಗೆ ಬಟ್ಟೆಗಳನ್ನು ಹೊಲೆದು ಕೊಡುತ್ತಿದ್ದರು. ಸ್ತ್ರಿಯರು ಕೆಳಭಾಗವನ್ನು ಪೂರ್ತಿಯಾಗಿ ಹಾಗೂ ಮೇಲ್‌ಭಾಗವನ್ನು ಭಾಗಶಃ ಬಟ್ಟೆಯಿಂದ ಮುಚ್ಚುತ್ತಿದ್ದರು.

## 13.2.6 ನಂಬಿಕೆ ಮತ್ತು ಧಾರ್ಮಿಕ ವಿಧಿಗಳು

ಪಲ್ಲವ ಕಾಲದ ತಮಿಳು ಸಮಾಜದಲ್ಲಿದ್ದ ನಂಬಿಕೆ ಮತ್ತು ಧಾರ್ಮಿಕ ವಿಧಿಗಳಲ್ಲಿ ವಿವಿಧತೆಯನ್ನು ಕಾಣಬಹುದು. ಕೆಲವು ನಂಬಿಕೆ ಹಾಗೂ ಧಾರ್ಮಿಕ ವಿಧಿಗಳು ಆರ್ಯರ ಅನುಸರಣೆಯಾಗಿದ್ದರೆ, ಕೆಲವು ದ್ರಾವಿಡ ಅನುಸರಣೆಗಳಾಗಿದ್ದವು. ಕೆಲವು ವಿಧಿ ಹಾಗೂ ನಂಬಿಕೆಗಳು ದ್ರಾವಿಡ ಪೂರ್ವ ಸಂಸ್ಕೃತಿಗೆ ಸೇರಿದ್ದವುಗಳಾಗಿದ್ದವು. ಭೂತ ಪ್ರೇತಗಳಲ್ಲಿ ನಂಬಿಕೆ ವ್ಯಾಪಕವಾಗಿತ್ತು. ಭೂತ ಪ್ರೇತಗಳನ್ನು ಸಂತೃಪ್ತಿಪಡಿಸಲು ಅನೇಕ ವಿಧಿಗಳನ್ನು ಜನರು ಅನುಸರಿಸುತ್ತಿದ್ದರು. ಜನನ ಮತ್ತು ಮರಣಗಳಿಂದ ಸೂತಕ ಉಂಟಾಗುತ್ತದೆ ಮತ್ತು ಸೂತಕ ನಿವಾರಣೆಗೆ ಧಾರ್ಮಿಕ ವಿಧಿಗಳನ್ನು ನೆರವೇರಿಸಬೇಕೆಂಬುದು ಅವರ ನಂಬಿಕೆಯಾಗಿತ್ತು. ಈ ಕಾಲದ ಸಮಾಜದಲ್ಲಿ ಶವಗಳನ್ನು ಸುಡುವುದು ಅಥವ ಹೂಳುವುದು ಅಥವ ಪ್ರಾಣಿ ಪಕ್ಷಿಗಳಿಗೆ ಆಹಾರವಾಗಿ ಬಿಡುವುದು ಸಂಪ್ರದಾಯವಾಗಿತ್ತು. ಸುಡುವುದು ಹಾಗೂ ಹೂಳುವುದು ವ್ಯಾಪಕವಾದ ಶವ ಸಂಸ್ಕಾರ ಪದ್ಧತಿಯಾಗಿತ್ತು. ಶವಗಳನ್ನು ನದಿಗಳಲ್ಲಿ ಎಸೆಯುವುದು ಅಥವ ಪ್ರಾಣಿ ಪಕ್ಷಿಗಳಿಗೆ ಬಿಡುವುದು ಅಪರೂಪವಾದ ಸಂಸ್ಕಾರವಾಗಿತ್ತು. ಜ್ಯೋತಿಶಾಸ್ತ್ರದಲ್ಲಿ ಜನಸಾಮಾನ್ಯರಿಗೆ ನಂಬಿಕೆಯಿದ್ದು ಗ್ರಹಗಳು ಮಾನವನ ಆಗು ಹೋಗುಗಳ ಮೇಲೆ ಪ್ರಭಾವ ಬೀರುತ್ತವೆ ಎಂಬುವ ಅಂಶವನ್ನು ನಂಬಿದ್ದರು. ದಿನವನ್ನು ಒಳ್ಳೆಯಕಾಲ ಹಾಗೂ ಕೆಟ್ಟಕಾಲವೆಂದು ವಿಭಜಿಸಿ, ಕೆಲಸ ಕಾರ್ಯಗಳನ್ನು ಒಳ್ಳೆಯ ಮೂಹೂರ್ತದಲ್ಲಿ ಮಾಡಬೇಕೆಂದು ಭಾವಿಸಿದ್ದರು. ವಿವಾಹ ಇತ್ಯಾದಿ ಕಾರ್ಯಗಳಿಗೆ ಶುಭದಿನ ಹಾಗೂ ಅಶುಭ ದಿನಗಳೆಂದು ಸಹ ವಿಭಜಿಸಿದ್ದರು.

ಪಲ್ಲವ ಕಾಲದ ತಮಿಳರು ಕ್ರೀಡಾ ಪ್ರಿಯರಾಗಿದ್ದರು. ಮನೆಯ ಹೊರಗೆ ಆಡುವ ಕ್ರೀಡೆಗಳನ್ನು ಅವರು ಇಷ್ಟ ಪಡುತ್ತಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ಕೋಳಿಕಾಳಗ ಜನ ಪ್ರಿಯವಾದ ಕ್ರೀಡೆಯಾಗಿತ್ತು. ಜಾತ್ರೆ ಮತ್ತು ಸಂತೆಗಳಲ್ಲಿ ವಿವಿಧ ರೀತಿ ಮನೋರಂಜನೆಗಳನ್ನು ವೃತ್ತಿದಾರರು ಜನಸಾಮಾನ್ಯರಿಗೆ ನೀಡುತ್ತಿದ್ದರು. ಶ್ರೀಮಂತರು ನೃತ್ಯ ಸಂಗೀತಗಳನ್ನು ಮನೋರಂಜನೆಗಳಿಗೆ ಬಳಸುತ್ತಿದ್ದರು.

## 13.3 ಧರ್ಮ

ಪಲ್ಲವರ ಕಾಲದ ತಮಿಳು ಸಮಾಜದಲ್ಲಿ ಜನ ಸಾಮಾನ್ಯರ ಪ್ರವೃತ್ತಿಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ನಾವು ಗಮನಿಸಬಹುದು. ಜನ ಜೀವನದಲ್ಲಿ ಧರ್ಮ ಅತ್ಯಂತ ಪ್ರಮುಖವಾದ ಸ್ಥಾನವನ್ನು ಪಡೆದುದಲ್ಲದೆ, ಅತ್ಯಂತ ಪ್ರಭಾವಿ ಅಂಶವಾಯಿತು. ಈ ಕಾಲದ ಅತ್ಯಂತ ಪ್ರಸಿದ್ಧ ಜ್ಞಾನಿಗಳು, ಚಿಂತಕರು ಹಾಗೂ ದಾರ್ಶನಿಕರು ಅತ್ಯಂತ ಉನ್ನತ ಮಟ್ಟದ ಧಾರ್ಮಿಕ ಕೃತಿಗಳನ್ನು ರಚಿಸಿದರು. ಈ ಕಾಲಕ್ಕೆ ಸೇರಿದ ಹಾಗೇ ಯಾವುದೇ ಪ್ರಮುಖವಾದ ಧಾರ್ಮಿಕೇತರ ಕೃತಿಯ ರಚನೆಯಾಗಲೇ ಇಲ್ಲವೆನ್ನಬಹುದು. ಸಂಗಂ ಯುಗದಲ್ಲಿ ಅತ್ಯಂತ ಸಮೃದ್ಧಿಯಾದ ಧಾರ್ಮಿಕೇತರ ಕೃತಿಗಳ ರಚನೆಯಾದುದನ್ನು ಗಮನದಲ್ಲಿಟ್ಟುಕೊಂಡರೆ ಧಾರ್ಮಿಕವಾಗಿ ಪಲ್ಲರ ಕಾಲದಲ್ಲಾದ ಪ್ರಮುಖ ಬದಲಾವಣೆಯನ್ನು ಗುರುತಿಸಬಹುದು. ಧರ್ಮ ಅಸಹಿಷ್ಣತೆಯು ಸಹ ಈ ಕಾಲದಲ್ಲಿ ಬೆಳೆಯುವುದನ್ನು ಕಾಣಬಹುದು. ಈ ಧಾರ್ಮಿಕ ಸಂಘರ್ಷದ ಕಾಲದಲ್ಲಿ ಶೈವ ಧರ್ಮವು ಪ್ರಮುಖ ಪಾತ್ರವನ್ನುವಹಿಸಿದ್ದನನ್ನು ನಾವು ಗಮನಿಸಬೇಕು.

### 13.3.1 ಹಿಂದೂ ಧರ್ಮ

ಪಲ್ಲವರ ಆಳ್ವಿಕೆಯಲ್ಲಿ ತಮಿಳುನಾಡಿನಲ್ಲಿ ಹಿಂದೂ ಧರ್ಮವು ಪ್ರಬಲಗೊಂಡಿತು. ಪ್ರಾರಂಭಿಕ ಪಲ್ಲವ ದೊರೆಗಳಾದ ಮಹೇಂದ್ರವರ್ಮನ್ ಹಾಗೂ ಇತರರರು ಜೈನ ಧರ್ಮಿಯರಾಗಿದ್ದರು. ತದನಂತರದಲ್ಲಿ ಮಹೇಂದ್ರವರ್ಮನ್ ಶೈವ ಧರ್ಮ ಪ್ರಚಾರಕರ ಪ್ರಭಾವಕ್ಕೆ ಒಳಗಾಗಿ ಶೈವ ಧರ್ಮಕ್ಕೆ ಮತಾಂತರಗೊಂಡನು. ಬೌದ್ಧಧರ್ಮ ಮತ್ತು ಜೈನ ಧರ್ಮ ಅನುಸರಿಸುತ್ತಿದ್ದವರು ಸಹಸ್ರ ಸಂಖ್ಯೆಯಲ್ಲಿ ಶೈವ ಧರ್ಮಕ್ಕೆ ಮತಾಂತರಗೊಂಡರು. ಈ ಸಂದರ್ಭದಲ್ಲಿ ಹತ್ತಾರು ಜೈನ ದೇವಾಲಯಗಳು ಹಾಗೂ ಬೌದ್ಧ ಪ್ರಾರ್ಥನ ಮಂದಿರಗಳನ್ನು ಹಿಂದೂ ದೇವಾಲಯಗಳನ್ನಾಗಿ ಪರಿವರ್ತಿಸಲಾಯಿತು. ಇಂದಿಗೂ ಸಹ ಕೆಲವು ತಮಿಳುನಾಡು ದೇವಾಲಯಗಳಲ್ಲಿ ಬೌದ್ಧ ಧರ್ಮಕ್ಕೆ ಸೇರಿದ ಪರಾಂಪರಿಕ ವಿಧಿಗಳನ್ನು ಅನುಸರಿಸಲಾಗುತ್ತಿದೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕ್ರಿ.ಶ. ಏಳನೇ ಶತಮಾನದಿಂದೀಚೆಗೆ ಹಿಂದೂ ಧರ್ಮವು ತಮಿಳುನಾಡಿನಲ್ಲಿ ಜನಪ್ರಿಯ ಧರ್ಮವಾಗಿ ಬೆಳೆಯಲು ಪ್ರಾರಂಭವಾಯಿತು. ದ್ರಾವಿಡ ಮತ್ತು ಆರ್ಯರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಮ್ಮಿಲನವೇ ಇದಕ್ಕೆ ಕಾರಣವೆಂದು ಹೇಳಬಹುದು. ಆರ್ಯರ ಸಾಮಾಜಿಕ ಮತ್ತು ಧಾರ್ಮಿಕ ಪರಂಪರೆಗಳನ್ನು ದ್ರಾವಿಡ ತಮಿಳು ಸಮಾಜ ಅನುಸರಿಸಲು ಪ್ರಾರಂಭಿಸಿತು. ಈ ಬದಲಾವಣೆಯಿಂದಾಗಿ ರಾಜನ ಆಸ್ಥಾನದಲ್ಲಿ ಬ್ರಾಹ್ಮಣರ ಸಂಖ್ಯೆ ಹಾಗೂ ಪ್ರಭಾವ ಹೆಚ್ಚಾಯಿತು. ರಾಜ್ಯದ ಆಡಳಿತದಲ್ಲೂ ಬ್ರಾಹ್ಮಣರ ಪಾತ್ರ ಪ್ರಬಲವಾಯಿತು. ವರ್ಣ ವ್ಯವಸ್ಥೆ ವ್ಯಾಪಕವಾಗಿ

ಹರಡುವಂತಾಯಿತು. ದಕ್ಷಿಣ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ತಮಿಳುನಾಡಿನಲ್ಲಿ ಧಾರ್ಮಿಕ ಆಚರಣೆಗಳು ಮತ್ತು ಸಂಪ್ರದಾಯಗಳು ಹಿಂದೂ ಧರ್ಮದ ಪ್ರಭಾವಕ್ಕೆ ಒಳಗಾಗುವುದನ್ನು ಗಮನಿಸಬಹುದು. ಪಲ್ಲವ ದೊರೆಗಳು ಶೈವ ಹಾಗೂ ವೈಷ್ಣವ ಧರ್ಮಗಳಿಗೆ ಸಮಾನವಾದ ರಾಜಾಶ್ರಯವನ್ನು ನೀಡಿ ಪ್ರೋತ್ಸಾಹಿಸಿದರು. ಇತರ ಸಮಕಾಲೀನ ಧರ್ಮಗಳಾದ ಕಪಾಲಿಕ, ಕಾಳಮುಖ ಮತ್ತು ಪಶುಪತ ಧರ್ಮಗಳು (ಇವೆಲ್ಲವೂ ಶೈವ ಧರ್ಮದ ಶಾಖೆಗಳಾಗಿದ್ದವು) ಸುಧಾರಣೆಯ ಪ್ರಕ್ರಿಯೆಗೆ ಒಳಪಟ್ಟು, ಜನಪ್ರಿಯ ಧರ್ಮಗಳಾದವು.

ಶೈವ ಧರ್ಮದ ಚಳವಳಿ ಮಹೇಂದ್ರವರ್ಮನ ಕಾಲದಲ್ಲಿ ತಮಿಳುನಾಡಿನಲ್ಲಿ ಉತ್ತುಂಗಕ್ಕೇರಿತು. ಮಹೇಂದ್ರವರ್ಮನ ನಂತರ ಪಲ್ಲವ ದೊರೆಗಳಾದವರು ಶೈವ ಹಾಗೂ ವೈಷ್ಣವ ಧರ್ಮಗಳೆರಡನ್ನು ಸಮಾನ ರೀತಿಯಲ್ಲಿ ಪ್ರೋತ್ಸಾಹಿಸಿದರು. ಒಟ್ಟಿನಲ್ಲಿ ಪಲ್ಲವರ ಕಾಲದಲ್ಲಿ ಹಿಂದೂ ಧರ್ಮವು ತಮಿಳುನಾಡಿಲ್ಲಿ ಮತ್ತೊಮ್ಮೆ ಪ್ರವರ್ಧಮಾನಕ್ಕೆ ಬಂದು, ಇತರ ಧರ್ಮಗಳಾದ ಜೈನ ಮತ್ತು ಬೌದ್ಧ ಧರ್ಮಗಳ ಜನಪ್ರಿಯತೆ ಇಳಿಮುಖವಾಯಿತು. ನಯನ್‌ಮಾರ್ ಎಂದು ಕರೆಯಲಾದ ಶೈವ ಸಂತರು ಮತ್ತು ಆಳ್ವಾರ್ ಎಂದು ಕರೆಯಲಾದ ವೈಷ್ಣವ ಸಂತರು ತಮ್ಮ ತಮ್ಮ ಧಾರ್ಮಿಕ ಪಂಥಗಳ ಪ್ರಚಾರಕ್ಕೆ ಜೀವನವನ್ನೆ ಮುಡುಪಾಗಿಟ್ಟರು. ಪಲ್ಲವರ ಕಾಲದಲ್ಲಿ ಪರಸ್ಪರ ಗೌರವವನ್ನು ಹೊಂದಿದ್ದ ಈ ಸಂತರು ಸಮಾಜದಲ್ಲಿ ಗೌರವಾನ್ವಿತರಾಗಿದ್ದರು. ನಯನ್‌ಮಾರ್ ಮತ್ತು ಆಳ್ವಾರ್ ಸಂತರು ಭಕ್ತಿ ಮಾರ್ಗವನ್ನು ಅನುಸರಿಸಿದರು. ಈ ಸಂತರು ವಿಪುಲವಾದ ಭಕ್ತಿ ಸಾಹಿತ್ಯವನ್ನು ಸಂಪಾದಿಸಿದರು.

## 13.3.2 ಇತರ ಧರ್ಮಗಳು

ಸಂಘುವಮ್ ಯುಗದಲ್ಲಿ ಬೌದ್ಧ ಹಾಗೂ ಜೈನ ಧರ್ಮಗಳು ತಮಿಳುನಾಡಿನಲ್ಲಿ ಪ್ರಬಲವಾಗಿ ಬೇರೂರಿದ್ದೂ, ರಾಜಾಶ್ರಯವನ್ನು ಪಡೆದಿದ್ದವು. ಕ್ರಿ.ಶ. ಐದನೇ ಶತಮಾನದವರೆವಿಗೂ ಈ ಪರಿಸ್ಥಿತಿ ಅವ್ಯಾಹತವಾಗಿ ಮುಂದುವರೆಯಿತು, ಈ ಎರಡು ಧರ್ಮಗಳ ಪ್ರಾಬಲ್ಯತೆಯ ಹಿನ್ನೆಲೆಯಲ್ಲಿ ವೈದಿಕ ಧರ್ಮ ಸ್ವಾಭಾವಿಕವಾಗಿವೇ ಕಳೆಗುಂದಿತ್ತು. ಆದುದರಿಂದ ಶೈವ ಹಾಗೂ ವೈಷ್ಣವ ಪಂಥಗಳನ್ನು ಪ್ರಸರಿಸುವಲ್ಲಿ ಭಕ್ತಸಂತರು ಅತೀವ ಉತ್ಸಾಹವನ್ನು ಮತ್ತು ಕೆಲವೊಮ್ಮೆ ಅಕ್ರಮಣಕಾರಿ ಪ್ರವೃತ್ತಿಯನ್ನು ತೋರಿಸಿದರು. ಸಾಮಾನ್ಯವಾಗಿ ಈ ಸಂತರು ಬೌದ್ಧ ಹಾಗೂ ಜೈನ ಧರ್ಮಗಳನ್ನು ಕುರಿತಂತೆ ಅಸಹಿಷ್ಣತೆಯ ಮನೋಭಾವನೆಯನ್ನುವ್ಯಕ್ತಪಡಿಸಿದರು. ಸಮಕಾಲೀನ ಭಕ್ತಿ ಪಂಥದ ಧಾರ್ಮಿಕ ಸಾಹಿತ್ಯದಲ್ಲಿ ಈ ಎರಡು ಧರ್ಮಗಳ ವಿರುದ್ಧ ಪ್ರಯೋಗಿಸಲ್ಪಟ್ಟಿರುವ ಭಾಷೆಯಿಂದ ಈ ಅಸಹಿಷ್ಣತೆಯ ಪ್ರಖರತೆಯನ್ನು ನಾವು ಅರಿಯಬಹುದು. ಅಲ್ಲಲ್ಲಿ ಬೌದ್ಧ ಹಾಗೂ ಜೈನ ಧಾರ್ಮಿಕರು ದೌರ್ಜನ್ಯಕ್ಕೆ ಒಳಗಾಗುವುದನ್ನು ಸಹ ನಾವು ಗಮನಿಸಬೇಕು.

ಶೈವ ಮತ್ತು ವೈಷ್ಣವ ಪಂಥಕ್ಕೆ ರಾಜಾಶ್ರಯ ದೊರಕಿದ ಹಿನ್ನೆಲೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಬೌದ್ಧ ಹಾಗೂ ಜೈನ ಧರ್ಮದ ಹಿಂಬಾಲಕರು ತಮ್ಮ ಧರ್ಮವನ್ನು ತೊರೆದು ಶೈವ ಅಥವ ವೈಷ್ಣವ ಪಂಥಗಳಿಗೆ ಮತಾಂತರ ಹೊಂದಿದರು. ರಾಜಾಶ್ರಯ ತಪ್ಪಿದ್ದರಿಂದ ಬೌದ್ಧ ಮತ್ತು ಜೈನ ಧರ್ಮಗಳ ಸ್ವಾಭಾವಿಕವಾಗಿ ಜನಪ್ರಿಯತೆಯನ್ನು ಕಳೆದು ಕೊಂಡವು. ಕ್ರಿ.ಶ. ಏಳನೇ ಶತಮಾನದ ಅಂತ್ಯದ ಹೊತ್ತಿಗೆ ತಮಿಳುನಾಡಿನಲ್ಲಿ ಬೌದ್ಧ ಧರ್ಮವು ಸಂಕಟದಲ್ಲಿತ್ತು. ಹ್ಯೂಯನ್ ತ್ಸಾಂಗ್ ಈ ಪರಿಸ್ಥಿತಿಯನ್ನು ಪುಷ್ಠೀಕರಿಸುತ್ತಾ ಅನೇಕ ಬೌದ್ಧ ವಿಹಾರಗಳು ನಿರ್ಜನವಾಗಿದ್ದುದ್ದನ್ನು

ಮತ್ತು ಬೌದ್ಧ ಧರ್ಮದ ಅನುಯಾಯಿಗಳಲ್ಲಿದ್ದ ಹತಾಶ ಮನೋಭಾವನೆಯನ್ನು ಗುರುತಿಸಿದ್ದಾನೆ. ಕಂಚಿಯಲ್ಲಿದ್ದ ಪ್ರಮುಖ ವಿಹಾರದಲ್ಲಿ ಭಿಕ್ಷುಗಳು ವಿರಳವಾದ ಸಂಖ್ಯೆಯಲ್ಲಿದ್ದುದನ್ನು ಹ್ಯೂಯೆನ್ ತ್ಸಾಂಗ್ ದಾಖಲಿಸಿದ್ದಾನೆ. ಇದೇ ಸಂದರ್ಭದಲ್ಲಿ ಜೈನ ಧರ್ಮದ ಅವನತಿಯನ್ನು ಸಹ ಈ ಚೀನಿ ಯಾತ್ರಿಕ ಗಮನಿಸಿದ್ದಾನೆ. ಜನ ರಹಿತವಾದ ಬೌದ್ಧ ಹಾಗೂ ಜೈನ ಧರ್ಮದ ಧಾರ್ಮಿಕ ಕೇಂದ್ರಗಳನ್ನು ವಶಪಡಿಸಿಕೊಂಡ ಶೈವ ಹಾಗೂ ವೈಷ್ಣವ ಸಂತರು ಈ ಧಾರ್ಮಿಕ ಕೇಂದ್ರಗಳನ್ನು ಶೈವ ಹಾಗೂ ವೈಷ್ಣವ ದೇವಾಲಯಗಳನ್ನಾಗಿ ಪರಿವರ್ತಿಸಿದರು.

ಒಟ್ಟಿನಲ್ಲಿ ಧಾರ್ಮಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಪಲ್ಲವರ ಆಳ್ವಿಕೆ, ದಕ್ಷಿಣ ಭಾರತ, ಅದರಲ್ಲೂ ವಿಶೇಷವಾಗಿ ತಮಿಳುನಾಡಿನ ಇತಿಹಾಸದಲ್ಲಿ ಒಂದು ಪರ್ವಕಾಲವೆಂದೇ ಪರಿಗಣಿಸಲಾಗಿದೆ. ಶೈವ ಹಾಗೂ ವೈಷ್ಣವ ಧಾರ್ಮಿಕ ಪಂಥಗಳು ಬಲವಾಗಿ ಬೇರೂರಿದ್ದ ಜೈನ ಮತ್ತು ಬೌದ್ಧ ಧರ್ಮಗಳ ವಿರುದ್ಧ ಯಶಸ್ವಿಯಾಗಿ ಹೋರಾಡಿ ವೈದಿಕ ಧರ್ಮದ ಉನ್ನತಿಗೆ ಕಾರಣರಾದುದು ಈ ಕಾಲದ ವೈಶಿಷ್ಟಗಳಲ್ಲಿ ಒಂದು ಎನ್ನುವುದರಲ್ಲಿ ಸಂಶಯವಿಲ್ಲ.

## 13.4 ಸಾಹಿತ್ಯ

ಪಲ್ಲವರ ಕಾಲ ತಮಿಳು ಸಾಹಿತ್ಯದ ದ್ವಿತೀಯ ಹಂತದ ಬೆಳವಣಿಗೆಯನ್ನು ಪ್ರಾರಂಭಿಸಿತು. ಸಂಗಂ ಯುಗ ಪ್ರಥಮ ಹಂತವೆಂದು ಪರಿಗಣಿಸಲಾಗಿದೆ. ಈ ಪ್ರಥಮ ಹಂತದಲ್ಲಿ ಧಾರ್ಮಿಕ ಹಾಗೂ ಧಾರ್ಮಿಕವಲ್ಲದ ವಿಫುಲ ಸಾಹಿತ್ಯದ ಸೃಷ್ಠಿಯಾಯಿತು. ಸಂಗಂ ಯುಗದ ಅಂತ್ಯದಲ್ಲಿ ತಮಿಳು ಸಾಹಿತ್ಯ ಹಂತ ಹಂತವಾಗಿ ಸಂಸ್ಕೃತದ ಪ್ರಭಾವಕ್ಕೆ ಒಳಗಾಗುವುದನ್ನು ನಾವು ಗಮನಿಸಬಹುದು. ಪಲ್ಲವರ ಕಾಲದಲ್ಲಿ ಸಂಸ್ಕೃತೀಕರಣದ ಪ್ರಕ್ರಿಯೆ ಪೂರ್ಣಗೊಂಡಿತು. ಪಲ್ಲವರ ಕಾಲದ ಸಾಹಿತ್ಯ ಈ ಕಾರಣದಿಂದಾಗಿ ಪೂರ್ಣವಾಗಿ ಧಾರ್ಮಿಕ ಸಾಹಿತ್ಯವಾಯಿತು. ಈ ಕಾಲದ ಸಾಹಿತ್ಯವನ್ನು ಪರಿಶೀಲಿಸಿದರೆ ಈ ಅಂಶ ಗೋಚರವಾಗುತ್ತದೆ.

ಪಲ್ಲವರ ಕಾಲದಲ್ಲಿ ಉನ್ನತ ಶ್ರೇಣಿಯ ತಮಿಳು ಹಾಗೂ ಸಂಸ್ಕೃತದಲ್ಲಿ ಧಾರ್ಮಿಕ ಕೃತಿಗಳನ್ನು ರಚಿಸಲಾಯಿತು. ಪಲ್ಲವ ದೊರೆಗಳು ಕವಿಗಳನ್ನು ಹಾಗೂ ವಿದ್ವಾಂಸರನ್ನು ಪ್ರೋತ್ಸಾಹಿಸಿ ಅವರಿಗೆ ರಾಜಾಶ್ರಯವನ್ನು ಕಲ್ಪಿಸಿದರು. ವೇದಗಳ ಅಧ್ಯಯನಕ್ಕೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿದರು. ಪಲ್ಲವರ ರಾಜಧಾನಿ ಕಂಚಿ ಈ ರೀತಿಯ ಚಟುವಟಿಕೆಗಳಿಗೆ ಕೇಂದ್ರವಾಯಿತು. ಭಾರವಿ ಪಲ್ಲವ ರಾಜಾಸ್ಥಾನದಲ್ಲಿ ಕೆಲ ಕಾಲ ತಂಗಿದ್ದನೆಂದು ತಿಳಿದು ಬರುತ್ತದೆ. ಭಾರವಿ ವಿರಚಿತ **ಕಿರಾತಾರ್ಜುನೀಯ** ಅರ್ಜುನ ಈಶ್ವರನಿಂದ ವರವನ್ನು ಪಡೆದ ಘಟನೆಯನ್ನು ವಿವರಿಸುತ್ತದೆ. ಒಂದನೇ ಮಹೇಂದ್ರವರ್ಮ ಪ್ರಸಿದ್ಧ ಕವಿಯಾಗಿದ್ದು **ಮತ್ತವಿಲಾಸಪ್ರಹಸನ** ಮತ್ತು **ಭಗವದ್ದುಜಕ** ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. **ಮತ್ತವಿಲಾಸಪ್ರಹಸನ** ಒಂದು ವಿಡಂಭನಾತ್ಮಕ ಕೃತಿಯಾಗಿದ್ದು ಸಮಕಾಲೀನ ತಮಿಳು ಸಮಾಜದ ಅರೆಕೊರೆಗಳನ್ನು ಬಯಲುಮಾಡುತ್ತದೆ. ದಂಡಿ ಈ ಕಾಲದ ಮತ್ತೊಬ್ಬ ಪ್ರಮುಖ ಸಂಸ್ಕೃತದ ಕವಿಯಾಗಿದ್ದಾನೆ. ಈತನ **ಅವಂತೀಸುಂದರಿ ಕಥಾ, ದಶಕುಮಾರ ಚರಿತ** ಹಾಗೂ **ಕಾವ್ಯದರ್ಶ** ಪ್ರಮುಖ ಸಂಸ್ಕೃತ ಕೃತಿಗಳಾಗಿವೆ.

ಉನ್ನತಮಟ್ಟದ ತಮಿಳು ಸಾಹಿತ್ಯದ ರಚನೆಯನ್ನು ಸಹ ಈ ಕಾಲದಲ್ಲಿ ನಾವು ಗಮನಿಸಬಹುದು. ಬಹುಪಾಲು ತಮಿಳು ಕೃತಿಗಳು ಈ ಕಾಲದ ಶೈವ ಸಂತರಾದ ನಯನಮಾರ್ ಹಾಗೂ ವೈಷ್ಣವ ಸಂತರಾದ ಆಳ್ವಾರರು ರಚಿಸಿದ ಸಾಹಿತ್ಯವಾಗಿದೆ. ತಿರುಜ್ಞಾನ ಸಂಬಂಧದರ್,

ಸುಂದರಮೂರ್ತಿ, ಮಾಣಿಕ್ಯವಾಚಕರ್, ತಿರುಮಲ್ಲಿಗೈತ್ತೇವರ್, ಪುಟ್ಟಿನೆತ್ತರ್, ಕಾರೈಕಲ್ ಅಮ್ಮೆಯಾರ್ ಮುಂತಾದವರು ಪ್ರಸಿದ್ಧ ಶೈವ ಸಂತರಾಗಿದ್ದು 'ಭಕ್ತಿಮಾರ್ಗದ ಹಲವು ಪ್ರಮುಖ ಕೃತಿಗಳನ್ನು ರಚಿಸಿದರು. ಮಾಮಲರ್ ರಚಿಸಿದ ತರಿಮಂದಿರಂ ಪಲ್ಲವ ಕಾಲದಲ್ಲಿ ರಚಿಸಿರಬಹುದಾದ ಪ್ರಮುಖ ಕೃತಿಯಾಗಿದೆ.

• ವೈಷ್ಣವ ಪಂಥದವರು ಸಹ ಭಕ್ತಿ ಮಾರ್ಗದ ಹಲವು ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ತಿರುಮಂಗೈ ಆಳ್ವಾರ್, ನಮ್ಮಾಳ್ವಾರ್, ಪೇರಿಯಾಳ್ವಾರ್, ಗೋದದೇವಿ ಆಂಡಾಳ್ ಇವರುಗಳು ಈ ಕಾಲದ ಪ್ರಮುಖ ಆಳ್ವಾರ್ ಸಂತರು ಹಾಗೂ ಸಾಹಿತ್ಯ ರಚನಾಕಾರರು. ಈ ಕಾಲದಲ್ಲಿ ರಾಮಾಯಣ ಹಾಗೂ ಮಹಾಭಾರತ ಮಹಾಕಾವ್ಯಗಳು ತಮಿಳುನಾಡಿನಲ್ಲಿ ಜನಪ್ರಿಯ ಕೃತಿಗಳಾದವು. ಪೆರುಂದೇವನಾರ್ ಎಂಬ ಹೆಸರಿನ ಕವಿ ಮಹಾಭಾರತವನ್ನು ಪ್ರಥಮಬಾರಿಗೆ ತಮಿಳಿಗೆ ಭಾಷಾಂತರ ಮಾಡಿದ್ದನು. ಈತ ಮೂರನೇ ನಂದಿವರ್ಮನ ಆಸ್ಥಾನ ಕವಿಯಾಗಿದ್ದನು. ಅನಾಮಧೇಯ ಕವಿಯೊಬ್ಬನು **ನಂದಿಕ್ಕಾಲಬಾಕಾಮ್** ಎಂಬ ಕೃತಿಯನ್ನು ರಚಿಸಿದನು. ಈ ಕೃತಿ ಮೂರನೇ ನಂದಿವರ್ಮನ್ ಸಾಹಸಗಳನ್ನು ವರ್ಣಿಸುತ್ತದೆ.

## 13.4.1 ಶಿಕ್ಷಣ

ಪಲ್ಲವ ದೊರೆಗಳು ಧಾರ್ಮಿಕ ಹಾಗೂ ಧಾರ್ಮಿಕವಲ್ಲದ ಎರಡು ಬಗೆಯ ಶಿಕ್ಷಣಕ್ಕೆ ವಿಶೇಷವಾಗಿ ಪ್ರೋತ್ಸಾಹವನ್ನು ನೀಡಿದರು. ಪ್ರಾಚೀನ ಕಾಲದಲ್ಲಿದ್ದ ವ್ಯವಸ್ಥೆಯಲ್ಲಿಯಾವುದೇ ರೀತಿಯ ಮೂಲಭೂತ ಬದಲಾವಣೆಗಳನ್ನು ಪಲ್ಲವರು ಜಾರಿಗೊಳಿಸಲಿಲ್ಲ. ಶಿಕ್ಷಣ ನೀಡುವ ಕೇಂದ್ರಗಳಿಗ ಘಟಿಕ ಎನ್ನುವ ಹೆಸರಿನಿಂದ ಕರೆಯುತ್ತಿದ್ದು, ಈ ಘಟಿಕಗಳು ಪಲ್ಲವ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದವು. ವೇದಾಧ್ಯಯನ ಹಾಗೂ ಇತರ ಧಾರ್ಮಿಕ ಗ್ರಂಥಗಳ ಅಧ್ಯಯನವನ್ನು ಹಾಗೂ ಸಂಸ್ಕೃತ ಭಾಷೆಯ ಅಧ್ಯಯನವನ್ನು ಈ ಘಟಿಕಗಳಲ್ಲಿ ಪಲ್ಲವರ ಕಾಲದಲ್ಲಿ ಮಾಡಲಾಗುತ್ತಿತ್ತು. ಈ ವಿದ್ಯಾಕೇಂದ್ರಗಳು ಕೇವಲ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಇತರ ಜಾತಿಗೆ ಸೇರಿದ ಶಿಕ್ಷಣಾರ್ಥಿಗಳಿಗೂ ಈ ಘಟಿಕಗಳಲ್ಲಿ ಅಧ್ಯಯನ ಮಾಡಲು ಅವಕಾಶವಿದ್ದಿತು. ಈ ರೀತಿಯ ಘಟಿಕಗಳಲ್ಲಿ ರಾಜಕುಮಾರರಿಗೂ ಶಿಕ್ಷಣವನ್ನು ನೀಡಲಾಗುತ್ತಿತ್ತು. ವಿಶೇಷವಾಗಿ ಸೈನಿಕ ತರಬೇತಿ ಹಾಗೂ ಆಡಳಿತ ತರಬೇತಿಯನ್ನು ರಾಜಕುಮಾರರಿಗೆ ಇಲ್ಲಿ ನೀಡಲಾಗುತ್ತಿತ್ತು. ಕಂಚಿಯಲ್ಲಿದ್ದ ಈ ರೀತಿಯ ಘಟಿಕ ಒಂದರಲ್ಲಿ ಅನೇಕ ರಾಜಕುಮಾರರು ಶಿಕ್ಷಣವನ್ನು ಕಲಿಯುತ್ತಿದ್ದರೆಂದು ಸಮಕಾಲೀನ ಸಾಹಿತ್ಯ ತಿಳಿಸುತ್ತದೆ. ಬಾಹುರ್ ಶಿಲಾಶಾಸನ ಧಾರ್ಮಿಕ ಶಿಕ್ಷಣ ನೀಡುತ್ತಿದ್ದ ವಿದ್ಯಾಕೇಂದ್ರದ ಬಗ್ಗೆ ವಿಸ್ತಾರವಾಗಿ ವಿವರಣೆಯನ್ನು ನೀಡುತ್ತದೆ. ಶಿಕ್ಷಕರು, ವಿದ್ಯಾರ್ಥಿಗಳು, ಪಠ್ಯಕ್ರಮ, ಶಿಕ್ಷಕರ ವೇತನ ಇತ್ಯಾದಿ ವಿವರಗಳನ್ನು ಈ ಶಿಲಾ ಶಾಸನವು ನೀಡುತ್ತದೆ. ಈ ಘಟಿಕಗಳಲ್ಲಾಗಲೀ ಅಥವ ಇತರ ಶಾಲೆಗಳಲ್ಲಾಗಲೀ ವೃತ್ತಿಪರಶಿಕ್ಷಣವನ್ನು ನೀಡುವ ವ್ಯವಸ್ಥೆಯಿರಲಿಲ್ಲ. ವೃತ್ತಿ ಶಿಕ್ಷಣ ಕುಟುಂಬದಲ್ಲೆ ಪಾರಂಪರಿಕವಾಗಿ ಅನುಭವ ಹಾಗೂ ಮೌಖಿಕವಾಗಿ ಮುಂದಿನ ತಲೆಮಾರಿಗೆ ಕಲಿಸಲಾಗುತ್ತಿತ್ತು. ಉತ್ಪಾದನೆಯನ್ನು ವೃತ್ತಿಯಾಗಿ ಕಲಿಸುವ ವ್ಯವಸ್ಥಿತ ಶಿಕ್ಷಣ ಪಲ್ಲವರ ಕಾಲದಲ್ಲಿ ಲಭ್ಯವಿರಲಿಲ್ಲ. ತಮಿಳು ಭಾಷೆ ಮತ್ತು ಸಾಹಿತ್ಯವನ್ನು ಗುರುವಿನ ಸ್ವಗೃಹದಲ್ಲಿ ಶಿಷ್ಯನಾದವನು ಸೇವೆಸಲ್ಲಿಸುವುದರ ಮೂಲಕ ಕಲಿಯಬೇಕಿತ್ತು. ಅನೇಕ ಸಂದರ್ಭಗಳಲ್ಲಿ ದೇವಾಲಯಗಳು ಸಹ ಶಿಕ್ಷಣ ಕೇಂದ್ರಗಳಾಗಿ ಜವಾಬ್ದಾರಿಯನ್ನು

ನಿರ್ವಹಿಸುತ್ತಿದ್ದವು. ಬಾಹುರ್ ಶಿಲಾಶಾಸನದಲ್ಲಿ ವರ್ಣಿಸಲಾಗಿರುವ ಶಾಲೆಯು ಪ್ರಾಯಶಃ ವಸತಿ ಶಾಲೆಯಾಗಿರಬೇಕೆಂಬುದಾಗಿ ಅಭಿಪ್ರಾಯ ಪಡಲಾಗಿದೆ. ಯಾಕೆಂದರೆ ಇಲ್ಲಿ ವಿದ್ಯಾರ್ಥಿನಿಲಯ ಹಾಗೂ ಆರೋಗ್ಯಕೇಂದ್ರಗಳಿರುವ ಬಗೆ ಈ ಶಿಲಾಶಾಸನದಲ್ಲಿ ಉಲ್ಲೇಖವಿದೆ.

ಪಲ್ಲವರ ಕಾಲದಲ್ಲಿ ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣ ವ್ಯವಸ್ಥೆ ಉತ್ತಮವಾಗಿತ್ತು ಎಂಬುವುದರಲ್ಲಿ ಸಂಶಯವಿಲ್ಲ. ಆದರೆ ಈ ವ್ಯವಸ್ಥೆಯಲ್ಲಿ ಶಿಕ್ಷಣವು ಸಮಾಜದ ಕೆಲವು ವರ್ಗಗಳಿಗೆ ಮಾತ್ರ ಸೀಮಿತವಾಗಿತ್ತು. ತಮಿಳು, ವಿಶೇಷವಾಗಿ ಸಂಸ್ಕೃತವನ್ನು ಸಾರ್ವತ್ರಿಕವಾಗಿ ಎಲ್ಲರಿಗೂ ಕಲಿಯಲು ಅವಕಾಶವಿರಲ್ಲಿಲ್ಲ. ಪಲ್ಲವ ಸಮಾಜ ಶಿಕ್ಷಣಕ್ಕೆ ಗೌರವ ಹಾಗೂ ಮಹತ್ವವನ್ನು ನೀಡಿದರೂ. ಅಸಂಖ್ಯಾತ ಜನ ಶಿಕ್ಷಣದಿಂದ ಪೂರ್ಣವಾಗಿ ವಂಚಿತರಾಗಿದ್ದರು. ಶಿಕ್ಷಣವಿಲ್ಲದೆಯೂ ಪಲ್ಲವ ಕಾಲದ ಸಾಮಾನ್ಯ ಜನತೆ ತಮ್ಮ ಬದುಕನ್ನು ಹಸನುಗೊಳಿಸಲು ಯತ್ನಿಸಿ ಸಫಲರಾಗಿದ್ದರು ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು. ಇಂತಹ ಸನ್ನಿವೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಅಭಿವೃದ್ಧಿ ಹೊಂದುವ ಅವಕಾಶಗಳು ಇರಲಿಲ್ಲ. ದರ್ಶನ ಶಾಸ್ತ್ರದಲ್ಲಿ ಮುಂದುವರೆದಿದ್ದರೂ, ಅದರ ಜ್ಞಾನ ಕೆಲವರಿಗೆ ಮಾತ್ರ ಸೀಮಿತವಾಗಿತ್ತು. ಯಾವುದೇ ಬದಲಾವಣೆಯಿಲ್ಲದೆ ಕರಕುಶಲಕರ್ಮಿ ಹಾಗೂ ವೃತ್ತಿಗಾರರು ಸೇವೆ ಹಾಗೂ ವಸ್ತು ಉತ್ಪಾದನೆಯಲ್ಲಿ ತೊಡಗಿದ್ದರು.

## 13.5 ಸಾರಾಂಶ ಗ್ರಹಿಸೋಣ

ಸಾರಾಂಶ ರೂಪದಲ್ಲಿ ಹೇಳುವುದಾದರೆ ಈ ಘಟಕ ಪಲ್ಲವರ ಕಾಲದ ತಮಿಳು ಸಮಾಜದ ವಿವಿಧ ಆಯಾಮಗಳನ್ನು ಕುರಿತಾದ ಚಿತ್ರಣವನ್ನು ನೀಡುತ್ತದೆ. ಈ ಕಾಲದಲ್ಲಿ ರಚಿಸಲ್ಪಟ್ಟ ಸಾಹಿತ್ಯ, ಈ ಸಾಹಿತ್ಯದ ಗುಣ ವಿಶೇಷಣ ಹಾಗೂ ಈ ಕಾಲದಲ್ಲಿದ ಶಿಕ್ಷಣ ವ್ಯವಸ್ಥೆಯ ಬಗೆಗೂ ಸಹ ನೀವು ಅರಿಯಬಹುದು. ಈ ಕಾಲದ ತಮಿಳು ಸಮಾಜ ದ್ರಾವಿಡಪೂರ್ವ, ದ್ರಾವಿಡ ಹಾಗೂ ಆರ್ಯರ ಅಂಶಗಳನ್ನು ಒಳಗೊಂಡಿದ್ದ ಸಂಸ್ಕೃತಿಯಾಗಿತ್ತು ಹಾಗೂ ಈ ಎಲ್ಲಾ ಸಂಸ್ಕೃತಿಯನ್ನು ಅನುಸರಿಸುತ್ತಿದ್ದ ವಿಭಿನ್ನ ಜನಾಂಗಗಳು ವಾಸಿಸುತ್ತಿದ್ದವು. ಗುಲಾಮಗಿರಿ ಒಂದಲ್ಲ ಒಂದು ರೀತಿಯಲ್ಲಿ ಪ್ರಚಲಿತವಾಗಿತ್ತು. ಕಾಲಕ್ರಮೇಣ ಆರ್ಯರ ಸಂಸ್ಕೃತಿ ಹಾಗೂ ಸಂಘಸಂಸ್ಥೆಗಳು ಪ್ರಬಲವಾಗಿ ಸಮಾಜದಲ್ಲಿ ಬ್ರಾಹ್ಮಣರಿಗೆ ವಿಶೇಷವಾದ ಸ್ಥಾನವನ್ನು ಕಲ್ಪಿಸಲಾಯಿತು. ಸ್ತ್ರೀಯರ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ಹಿಂದಿನಂತೆ ಸ್ತ್ರೀಯರಿಗೆ ಆಸ್ತಿಯ ಮೇಲೆ ಹಕ್ಕಿರಲಿಲ್ಲ. ಸತಿ ವ್ಯಾಪಕವಾಗಿ ಹರಡಿಲ್ಲದಿದ್ದರೂ, ಮೇಲ್ವರ್ಗದಲ್ಲಿ ಸಾಮಾನ್ಯವಾಗಿತ್ತು. ವೇಶ್ಯವೃತ್ತಿ ಪಟ್ಟಣ ಹಾಗೂ ನಗರ ಪ್ರದೇಶದಲ್ಲಿ ಪ್ರಚಲಿತವಾಗಿತ್ತು. ಶ್ರೀಮಂತರೂ ವಿಧವಿಧವಾದ ಭಕ್ಷ್ಯಗಳನ್ನು ಉಪಯೋಗಿಸುತ್ತಿದ್ದರೇ, ಜನ ಸಾಮಾನ್ಯರು ಕೆಳಮಟ್ಟದ ಆಹಾರ ಪದಾರ್ಥಗಳನ್ನು ಭಕ್ಷಿಸುತ್ತಿದ್ದರು. ಚಿನ್ನ ಬೆಳ್ಳಿಯ ಆಭರಣಗಳನ್ನು ಸ್ತ್ರೀ ಪುರುಷರಿಬ್ಬರೂ ಉಪಯೋಗಿಸುತ್ತಿದ್ದರು. ಹವಾಮಾನದ ಪ್ರಭಾವದಿಂದಾಗಿ ಜನಸಾಮಾನ್ಯರು ಕನಿಷ್ಠ ಉಡುಗೆಗಳನ್ನು ಮಾತ್ರ ತೊಡುತ್ತಿದ್ದರು. ಶ್ರೀಮಂತರು ರೇಷ್ಮೆ ಬಟ್ಟೆಗಳನ್ನು ಧರಿಸುತ್ತಿದ್ದರು. ದ್ರಾವಿಡಪೂರ್ವದ ಧಾರ್ಮಿಕ ವಿಧಿಗಳು ಹಾಗೂ ದ್ರಾವಿಡ ಮತ್ತು ಆರ್ಯರ ನಂಬಿಕೆಗಳು ಸಮಕಾಲೀನವಾಗಿ ಕಾಣಬಹುದಿತ್ತು. ಜಾತಿ ಪದ್ಧತಿ ಕಾಲಕ್ರಮೇಣ ಪ್ರಬಲವಾಯಿತು. ಹಿಂದೂ ಧರ್ಮದ ಪುನುರುತ್ಥಾನದ ಹಿನ್ನೆಲೆಯಲ್ಲಿ ಜೈನ ಮತ್ತು ಬೌದ್ಧ ಧರ್ಮಗಳು ತಮಿಳುನಾಡಿನಲ್ಲಿ ಅವಸಾನವನ್ನು ಹೊಂದಿದವು. ಪಲ್ಲವರ ಕಾಲದಲ್ಲಿ ಧಾರ್ಮಿಕ ಸಾಹಿತ್ಯ ವಿಫುಲವಾಗಿ ಸೃಷ್ಟಿಸಲಾಯಿತು. ಧಾರ್ಮಿಕೇತರ ಸಾಹಿತ್ಯದ ರಚನೆ ಕೆಟ್ಟು ಕಡಿಮೆ ಕಣ್ಮರೆಯಾಯಿತು. ನಯನ್‌ಮಾಲ್ ಮತ್ತು ಆಳ್ವಾರ್ ಸಂತರು ಸಾಹಿತ್ಯ ರಚನೆ, ಮತ್ತು ಭಕ್ತಿ

ಮಾರ್ಗದ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಸಂಸ್ಕೃತ ಹಾಗೂ ತಮಿಳು ಸಾಹಿತ್ಯಿಕ ಭಾಷೆಗಳಾಗಿ ದಕ್ಷಿಣ ಭಾರತದಲ್ಲಿ ಈ ಕಾಲಕ್ಕೆ ಪ್ರವರ್ಧಮಾನಕ್ಕೆ ಬಂದವು. ಪಲ್ಲವರ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ 'ಘಟಿಕ' ಪ್ರಮುಖವಾದ ಪಾತ್ರವನ್ನು ವಹಿಸಿತ್ತು. ಆದರೆ ಶಿಕ್ಷಣ ಸಮಾಜದ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿತ್ತು. ಉನ್ನತ ತಂತ್ರಜ್ಞಾನದ ಬೆಳವಣಿಗೆ ಈ ಕಾಲದಲ್ಲಿ ಸಾಧ್ಯವಾಗಲಿಲ್ಲ. ಉತ್ಪಾದನೆ ಪ್ರಾಚೀನ ಕಾಲದಲ್ಲಿದ್ದಂತೆ ಮುಂದುವರೆಯಿತು. ವಿಜ್ಞಾನ ಹಾಗೂ ತಂತ್ರಜ್ಞಾನ ಬಳಕೆ ಸೀಮಿತವಾಗಿತ್ತು

## 13.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

1. ಯಾವುದಾದರೂ ಇಬ್ಬರು ಪ್ರಮುಖ ಪಲ್ಲವ ದೊರೆಗಳನ್ನು ಕುರಿತಂತೆ ಟಿಪ್ಪಣಿ ಬರೆಯಿರಿ.
2. ಪಲ್ಲವ ಕಾಲದ ತಮಿಳು ಸಮಾಜದ ಲಕ್ಷಣಗಳನ್ನು ಚಿತ್ರಿಸಿ.
3. ಪಲ್ಲವ ಆಳ್ವಿಕೆಯ ಧಾರ್ಮಿಕ ಪರಿಸ್ಥಿತಿಯನ್ನು ಕುರಿತು ವ್ಯಾಖ್ಯಿಸಿ.
4. ಪಲ್ಲವ ಕಾಲದ ಸಾಹಿತ್ಯ ಮತ್ತು ಧರ್ಮ ಕುರಿತು ಚರ್ಚಿಸಿ.

**ಟಿಪ್ಪಣಿ ರಚಿಸಿ**

5. ಕ್ರಿ.ಶ. 8ನೇ ಶತಮಾನದಲ್ಲಿ ಮಹಿಳೆಯ ಸ್ಥಾನ.
6. ಬೌಧ ಧರ್ಮ ಮತ್ತು ಜೈನ ಧರ್ಮಗಳ ಅವನತಿ.
7. ಪಲ್ಲವ ಕಾಲದ ಧಾರ್ಮಿಕ ಸಾಹಿತ್ಯ
8. ಪಲ್ಲವರ ಮೂಲ
9. ಘಟಿಕ

## 13.7 ಕ್ಲಿಷ್ಟಪದಗಳು

ಅ. ಸತಿ : ಮೃತ ಪತಿಯೊಡನೆ ಪತ್ನಿಯು ಚಿತೆಏರುವುದು

ಆ. ದ್ರಾವಿಡ ಪೂರ್ವ : ದ್ರಾವಿಡ ಸಂಸ್ಕೃತಿ ಉಗಮದ ಪೂರ್ವದಲ್ಲಿದ್ದ ನಾಗರೀಕತೆಗೆ ಸಂಬಂಧಿಸಿದ ಹಾಗೆ

ಇ. ಘಟಿಕ : ಶಿಕ್ಷಣ ಸಂಸ್ಥೆ

## 13.8 ಅಭ್ಯಸನೀಯ ಗ್ರಂಥಗಳು


1. K.A.Neelakanta Sastri, *History of South India*
2. P.N.Chopra, et al, *History of South India*
3. P.N.Chopra, et al, *A Social Cultural and Economic History of India*
4. R.Gopalan, *The Pallavas of Kanchi*
5. C.Meenakshi, *Administration and Social life under the Pallavas*
6. ಜಿ. ಆರ್. ರಂಗಸ್ವಾಮಯ್ಯ, ದಕ್ಷಿಣ ಭಾರತದ ಇತಿಹಾಸ



ಡಾ.ಜಿ. ರಾಮರತನ್

## ಟಿಪ್ಪಣಿ

## ಘಟಕ -14 ಕಂಚಿಯ ಪಲ್ಲವರು-ಆಡಳಿತ, ಆರ್ಥಿಕ ಸ್ಥಿತಿಗತಿ, ಕಲೆ ಮತ್ತು ಶಿಲ್ಪಕಲೆಗೆ ಕೊಡುಗೆಗಳು

14.0 ಉದ್ದೇಶಗಳು

14.1 ಪೀಠಿಕೆ

14.2 ಆಡಳಿತ

14.2.1 ರಾಜ

14.2.2 ಮಂತ್ರಿ ಪರಿಷತ್

14.2.3 ಯುವರಾಜ

14.2.4 ಪ್ರಾಂತೀಯ ಮತ್ತು ಸ್ಥಳೀಯ ಆಡಳಿತ

14.2.5 ಸೈನಿಕ ಆಡಳಿತ

14.3 ಆರ್ಥಿಕ ಸ್ಥಿತಿಗತಿ

14.3.1 ಕೃಷಿ ಮತ್ತು ಕೈಗಾರಿಕೆಗಳು

14.3.2 ವ್ಯಾಪಾರ

14.3.3 ರಾಜ್ಯಾದಾಯದ ಮೂಲಗಳು

14.4 ಕಲೆ ಮತ್ತು ಶಿಲ್ಪಕಲೆ

14.4.1 ಲಲಿತ ಕಲೆ

14.4.2 ಮಹೇಂದ್ರವರ್ಮನ್ ಶೈಲಿ

14.4.3 ಮಾಮಲ್ಲ ಶೈಲಿ

14.4.4 ರಾಜಸಿಂಹ ಶೈಲಿ

14.4.5 ಅಪರಾಜಿತ ಶೈಲಿ

14.5 ಸಾರಾಂಶ ಗ್ರಹಿಸೋಣ

14.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

14.7 ಕ್ಲಿಷ್ಟ ಪದಗಳು

14.8 ಅಭ್ಯಸನೀಯ ಗ್ರಂಥಗಳು

ಈ ಘಟಕವನ್ನು ನಿಮ್ಮ ಅಧ್ಯಯನಕ್ಕೆ ಅನುಕೂಲವಾಗುವ ರೀತಿಯಲ್ಲಿ ಮೇಲ್ಕಂಡಂತೆ ಸರಳವಾಗಿ ವಿನ್ಯಾಸಗೊಳಿಸಲಾಗಿದೆ.

## 14.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನಿಮಗೆ ಪಲ್ಲವರ ಆಳ್ವಿಕೆಯ ಮಹತ್ವ ಮತ್ತು ರಾಜ್ಯಾಡಳಿತ ವ್ಯವಸ್ಥೆ, ಆರ್ಥಿಕತೆ ಹಾಗೂ ಕಲೆಗೆ ಅವರ ಕೊಡುಗೆಗಳು ನಿಮಗೆ ತಿಳಿದಿರಬೇಕು. ಜೊತೆಯಲ್ಲೆ ಕೆಳಕಂಡ ವಿವರಗಳು ನಿಮಗೆ ಮನವರಿಕೆಯಾಗಿರಬೇಕು.

ಅ. ಶಾತವಾಹನರ ಆಳ್ವಿಕೆಯ ಕೆಲವು ಅಂಶಗಳನ್ನು ಪಲ್ಲವರು ತಮ್ಮ ಆಡಳಿತದಲ್ಲಿ ಅಳವಡಿಸಿಕೊಂಡರು. ರಾಜ, ಮಂತ್ರಿ ಪರೀಷತ್ ಮತ್ತು ಯುವರಾಜ ಕೇಂದ್ರ ಆಡಳಿತದಲ್ಲಿ ಪ್ರಮುಖ ಪಾತ್ರವನ್ನು ಹೊಂದಿದ್ದರು.

ಆ. ವ್ಯಾಪಾರ ವಾಣಿಜ್ಯದಲ್ಲಿ ಬೆಳವಣಿಗೆಯುಂಟಾಯಿತು. ಕೃಷಿ ಹಾಗೂ ಕೈಗಾರಿಕೆಗಳು ತಂತ್ರಜ್ಞಾನದಲ್ಲಿ ಯಾವುದೇ ರೀತಿಯ ಬದಲಾವಣೆಯಿಲ್ಲದೆ ಮುಂದುವರೆದವು. ಆರ್ಥಿಕತೆ ಹಾಗೂ ಜನ ಸಮುದಾಯದ ಜೀವನಮಟ್ಟ ತೃಪ್ತಿಕರವಾಗಿತ್ತು. ಆಗ್ಗಾಗೆ ಕ್ಷಾಮಗಳು ಕಾಣಿಸಿಕೊಂಡವು.

ಇ. ದೇವಾಲಯ ನಿರ್ಮಾಣದಲ್ಲಿ ಪಲ್ಲವರ ಕೊಡುಗೆ ಅಪಾರ. ದ್ರಾವಿಡ ಶೈಲಿ ಎಂದು ಕರೆಯಲ್ಪಡುವ ಶಿಲ್ಪಕಲೆಗೆ ಪಲ್ಲವರು ಬುನಾದಿಯನ್ನು ಹಾಕಿದರು. ದೇವಾಲಯ ನಿರ್ಮಾಣದಲ್ಲಿ ಮರದ ಬದಲು ಕಲ್ಲಿನ ಉಪಯೋಗದ ಪ್ರಾರಂಭ.

ಈ. ಪಲ್ಲವ ದೊರೆಗಳು ದೇವಾಲಯ ನಿರ್ಮಾಣದಲ್ಲಿ ವಿವಿಧ ಬದಲಾವಣೆಗಳನ್ನು ಅಳವಡಿಸಿಕೊಂಡರು. ಈ ಶೈಲಿಗಳನ್ನೂ ದೊರೆಗಳ ಹೆಸರಿನಿಂದಲೇ ಕರೆಯಲಾಗುತ್ತದೆ. ಒಟ್ಟಿನಲ್ಲಿ ತಮಿಳು ಸಮಾಜಕ್ಕೆ ಮೇಲ್ಕಂಡ ಕ್ಷೇತ್ರಗಳಲ್ಲಿ ಪಲ್ಲವರ ಕೊಡುಗೆಗಳನ್ನು ಈ ಘಟಕ ಅಧ್ಯಯನ ಮಾಡಿದ ನಂತರ ನಿಮಗೆ ತಿಳಿದಿರಬೇಕು.

## 14.1 ಪೀಠಿಕೆ

ಆಡಳಿತ, ಆರ್ಥಿಕತೆ ಹಾಗೂ ಕಲೆ ಮತ್ತು ಶಿಲ್ಪ ಕಲೆಗೆ ಪಲ್ಲವರು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಅದರಲ್ಲೂ ವಿಶೇಷವಾಗಿ ದೇವಾಲಯಗಳ ನಿರ್ಮಾಣಕ್ಕೆ ಪಲ್ಲವರ ಕೊಡುಗೆ ವಿಶಿಷ್ಟವಾದುದು.

ಪಲ್ಲವರು ಅಳವಡಿಸಿಕೊಂಡ ಆಡಳಿತ ವ್ಯವಸ್ಥೆಯ ಬಗೆಗೆ ನಿಮಗೊಂದು ಒಳ ನೋಟವನ್ನು ಈ ಘಟಕ ನೀಡುತ್ತದೆ. ಮೂಲಭೂತವಾದ ಬದಲಾವಣೆಗಳನ್ನು ಹಿಂದಿದ್ದ ವ್ಯವಸ್ಥೆಯಲ್ಲಿ ಪಲ್ಲವರು ಮಾಡದಿದ್ದರೂ ಕಾರ್ಯದಕ್ಷತೆಯನ್ನು ಹೆಚ್ಚಿಸಿದರು.

ಪಲ್ಲವರ ಕಾಲದ ಆರ್ಥಿಕ ಪರಿಸ್ಥಿತಿಯ ಬಗೆಗೂ ಸಹ ಈ ಘಟಕವು ಅನೇಕ ವಿಚಾರಗಳನ್ನು ನಿಮಗೆ ತಿಳಿಸಿಕೊಡುತ್ತದೆ. ಜನ ಸಾಮಾನ್ಯರ ಆರ್ಥಿಕ ಜೀವನಕ್ಕೂ, ಅವರ ಉಡುಗೆ ತೊಡುಗೆಗಳಿಗೂ, ಶ್ರೀಮಂತರ ಜೀವನ ಶೈಲಿಗೂ ಇರುವ ವ್ಯತ್ಯಾಸವನ್ನು ನೀವು ಅರಿಯಬಹುದು. ಕೈಗಾರಿಕೆ, ಕೃಷಿ, ವ್ಯಾಪಾರ ವಾಣೀಜ್ಯೊದ್ಯಮದಲ್ಲಾದ ಬೆಳವಣಿಗೆಗಳನ್ನು ನೀವು ಈ ಘಟಕದಲ್ಲಿ ಅಧ್ಯಯನ ಮಾಡುವಿರಿ. ವಸ್ತು ಉತ್ಪಾದನೆಯಲ್ಲಿ ಯಾವುದೇ ಬದಲಾವಣೆಯಿರಲಿಲ್ಲ ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು.

ಪಲ್ಲವರ ಅಂತ್ಯಂತ ಪ್ರಮುಖವಾದ ಕೊಡುಗೆ ಎಂದರೆ, ದೇವಾಲಯ ನಿರ್ಮಾಣರಂಗದಲ್ಲಿ. ಈ ಕ್ಷೇತ್ರದಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಪಲ್ಲವರು ಜಾರಿಗೆ ತಂದರು. ನಿರ್ಮಾಣದ ವಸ್ತು ಹಾಗೂ ಶೈಲಿಗಳಲ್ಲಿ ಮಹತ್ತರವಾದ ಬದಲಾವಣೆಗಳುಂಟಾದವು. ಪ್ರತಿಯೊಬ್ಬ ರಾಜನು ಬಗೆಬಗೆಯ ಬದಲಾವಣೆಗಳನ್ನು 'ದ್ರಾವಿಡ' ಎಂದು ಕರೆಯಲ್ಪಡುವ ಈ ಶೈಲಿಯಲ್ಲಿ ಜಾರಿಗೆ ತಂದನು ಲಲಿತಕಲೆಗಳಲ್ಲೂ ಕೆಲವು ಬದಲಾವಣೆಗಳನ್ನು ಗಮನಿಸಬಹುದು.

## 14.2 ಆಡಳಿತ

ಈಗಾಗಲೇ ಹೇಳಿರುವಂತೆ ಪಲ್ಲವರ ಆಡಳಿತ ವ್ಯವಸ್ಥೆ ಮೂಲಭೂತವಾಗಿ ಯಾವುದೇ ಬದಲಾವಣೆಯಿಲ್ಲದೆ ಪೂರ್ವದಲ್ಲಿದ್ದ ವ್ಯವಸ್ಥೆಯಂತೆ ಮುಂದುವರೆಯಿತು. ಪಲ್ಲವರ ಆಡಳಿತ ವ್ಯವಸ್ಥೆಯಲ್ಲಿನ ಪ್ರಮುಖ ಲಕ್ಷಣಗಳನ್ನು ಪೂರ್ವದಲ್ಲಿನ ಶಾತವಾಹನ ಆಳ್ವಿಕೆಯ ಕಾಲದಲ್ಲೆ ಗಮನಿಸಬಹುದು. ಶಾತವಾಹನರ ಆಡಳಿತ ವ್ಯವಸ್ಥೆಯಲ್ಲಿನ ಮುಖ್ಯ ಲಕ್ಷಣಗಳಲ್ಲಿ ಒಂದಾದ ರಾಜನ ಅಪರಿಮಿತ ಅಧಿಕಾರ, ಪಲ್ಲವರ ಆಡಳಿತದಲ್ಲೂ ಕಾಣಬಹುದು. ಮಂತ್ರಿ ಪರಿಷತ್ ಹಾಗೂ ಯುವರಾಜನ ಮಹತ್ವ ಹಾಗೂ ಪಾತ್ರದಲ್ಲಿ ಗಮನಾರ್ಹವಾದ ಬದಲಾವಣೆಯೇನು ನೋಡಲು ಸಿಗುವುದಿಲ್ಲ. ಆದರೆ ಸೈನ್ಯ ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖವಾದ ಅಂಶವೇನು ಆಗಿರಲಿಲ್ಲ.

### 14.2.1 ರಾಜ

ಪಲ್ಲವರಾಜ ರಾಜ್ಯದ ಆಡಳಿತ ವ್ಯವಸ್ಥೆ ಮತ್ತು ಸರ್ಕಾರದ ಮುಖ್ಯಸ್ಥನಾಗಿದ್ದನು. ರಾಜ್ಯಾಡಳಿತದ ಎಲ್ಲಾ ವಿಭಾಗಗಳ ಮುಖ್ಯಸ್ಥನು ಆಗಿದ್ದನು. ಮಂತ್ರಿಗಳು, ಪ್ರಾಂತೀಯ ಆಡಳಿತಾಧಿಕಾರಿ, ವಿವಿಧ ವಿಭಾಗಗಳ ಮುಖ್ಯಸ್ಥರು, ಸೈನ್ಯಾಧಿಕಾರಿ, ನ್ಯಾಯಾಧೀಶ ಹಾಗೂ ಇತರ ಪ್ರಮುಖ ಅಧಿಕಾರಿಗಳ ನೇಮಕ ಮಾಡುವ ಅಧಿಕಾರವನ್ನು ಪಲ್ಲವ ರಾಜನು ಹೊಂದ್ದಿದನು. ನೆರೆ ಹೊರೆ ರಾಜ್ಯಗಳೊಂದಿಗೆ ಯುದ್ಧ, ಶಾಂತಿ ಒಪ್ಪಂದ, ವ್ಯಾಪಾರಕ್ಕೆ ಸಂಬಂಧಿಸಿದಂತೆ ಒಪ್ಪಂದಗಳು ಇತ್ಯಾದಿ ಮಾಡುವ ಅಧಿಕಾರವನ್ನು ರಾಜನು ಹೊಂದಿದ್ದನು. ರಾಜ್ಯದ ಪ್ರಜೆಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳುವ ಸಲುವಾಗಿ ಅವರ ಭಾವನೆಗಳ ಮೇಲೆ ಪ್ರಭಾವ ಬೀರುವ ಬಿರುದುಗಳನ್ನು ರಾಜ ಧರಿಸುತ್ತಿದ್ದನು. ಕೆರೆ ಕಟ್ಟೆ, ರಸ್ತೆಯಂತಹ ಸಾರ್ವಜನಿಕ ಉಪಯೋಗಗಳ ನಿರ್ಮಾಣ ಮಾಡುವ ಕಾರ್ಯಗಳಲ್ಲಿ ರಾಜ ನೇರವಾಗಿ ಭಾಗಿಯಾಗುತ್ತಿದ್ದನು. ದೇವಾಲಯ ನಿರ್ಮಾಣದಲ್ಲಿ ಪಲ್ಲವ ದೊರೆಗಳು ವಿಶೇಷವಾಗಿ ಆಸ್ಥೆಯನ್ನು ಹೊಂದಿದ್ದರು. ಬ್ರಾಹ್ಮಣರಿಗೆ ಭೂದಾನ, ಅಗ್ರಹಾರಗಳ ನಿರ್ಮಾಣ, ವಿದ್ಯಾ ಕೇಂದ್ರಗಳ ಪೋಷಣೆ ಇತ್ಯಾದಿಗಳಲ್ಲಿ ರಾಜನು ವಿಶೇಷವಾದ ಆಸಕ್ತಿಯನ್ನು ಹೊಂದಿದ್ದನು.

ರಾಜತ್ವ ಎಂದರೆ ಇತರ ಕಾಲಗಳಲ್ಲಿ ಇದ್ದಂತೆ ಪಲ್ಲವರ ಕಾಲದಲ್ಲೂ ಸರ್ವಾಧಿಕಾರತ್ವವಾಗಿತ್ತು. ರಾಜನ ದಿನ ನಿತ್ಯದ ಆಳ್ವಿಕೆಯ ಸಹಾಯಕ್ಕಾಗಿ ಮಂತ್ರಿ ಪರೀಷತ್, ಯುವರಾಜ ಹಾಗೂ ಪುರೋಹಿತ ಸಿದ್ಧರಿರುತ್ತಿದ್ದರು. ಈ ಅಧಿಕಾರಿಗಳ ಅಥವ ಮಂತ್ರಿ ಪರೀಷತ್ತಿನ ಅಭಿಪ್ರಾಯಗಳನ್ನು ರಾಜ ತಿರಸ್ಕರಿಸಬಹುದಿತ್ತು. ಈತ ನ್ಯಾಯದಾನ ವ್ಯವಸ್ಥೆಯ ಮುಖ್ಯಸ್ಥನಾಗಿದ್ದು, ಪರಮೋನ್ನತ ನ್ಯಾಯಾಧೀಶನ ಪಾತ್ರವನ್ನು ನಿರ್ವಹಿಸುತ್ತಿದ್ದನು. ಯುದ್ಧ ಮತ್ತು ದಂಡ ಯಾತ್ರೆಗಳಲ್ಲಿ ನೇರವಾಗಿ ಭಾಗವಹಿಸಿ ಸೈನ್ಯವನ್ನು ಮುನ್ನಡೆಸುತ್ತಿದ್ದನು. ರಾಜತ್ವ ವಂಶಪಾರಂಪರಿಕವಾಗಿತ್ತು. ಆದರೆ ಉತ್ತರಾಧಿಕಾರತ್ವಕ್ಕೆ ಸಂಬಂಧಿಸಿದ ಸಮಸ್ಯೆ ಹಾಗೂ ಸಿಂಹಾಸನಕ್ಕಾಗಿ ಅಂತಃ ಕಲಹಗಳು ವಿಶೇಷ ಘಟನೆಗಳಾಗಿದ್ದವು. 'ವೃಷಭ' ರಾಜ ಲಾಂಛನವಾಗಿತ್ತು. ಕೆಲವು ಮುದ್ರೆಗಳು 'ಸಿಂಹ' ವನ್ನು ಸಹ ಲಾಂಛನವಾಗಿ ಹೊಂದಿವೆ. ಕೆಲವು ಪಲ್ಲವ ದೊರೆಗಳು 'ಖಟ್ವಾಂಗ' ವನ್ನು ಸಹ ರಾಜ ಲಾಂಛನವನ್ನಾಗಿ ಬಳಸಿದರು. ಮೇಲ್ತುದಿಯಲ್ಲಿ ತಲೆಬುರುಡೆಯನ್ನು ಹೊಂದಿದ್ದ ಮರದ ದಂಡವನ್ನು 'ಖಟ್ವಾಂಗ' ಎನ್ನುತ್ತಾರೆ. ರಾಜನು ಆದಾಯಧ ವಿವಿಧ ಮೂಲಗಳನ್ನು ಹೊಂದಿದ್ದನು. ಪ್ರಮುಖವಾದ ಆದಾಯ ಮೂಲವೆಂದರೆ ಭೂಕಂದಾಯವಾಗಿತ್ತು. ವಿವಿಧ ವೃತ್ತಿಗಳ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಉಪ್ಪಿನ ಉತ್ಪಾದನೆಯ ಏಕಸ್ವಾಮ್ಯತೆ ಹಾಗೂ ತೆರಿಗೆ ರಾಜನ ಪ್ರಮುಖ ಆದಾಯ ಮೂಲವಾಗಿತ್ತು.

## 14.2.2 ಮಂತ್ರಿ ಪರಿಷತ್

ರಾಜನ ಸಹಾಯಕ್ಕೆ ಮಂತ್ರಿ ಪರಿಷತ್ ಸಿದ್ಧವಿರುತ್ತಿತ್ತು. ಸಂದರ್ಭವಿದ್ದಾಗಲೆಲ್ಲ ರಾಜನು ಮಂತ್ರಿಪರಿಷತ್ತಿನ ಅಭಿಪ್ರಾಯವನ್ನು ಮತ್ತು ಸಹಾಯವನ್ನು ಪಡೆಯುತ್ತಿದ್ದನು. ಈ ಮಂತ್ರಿ ಪರಿಷತ್ತಿನಲ್ಲಿ ಅನೇಕ ಮಂತ್ರಿಗಳಿದ್ದು ಕೆಲವರ ಪದನಾಮ ಕೆಳಕಂಡಂತಿತ್ತು. ಮಂತ್ರಿ, ಮಾತ್ರ, ರಹಸ್ಯಾಧಿಕಾರ ಇತ್ಯಾದಿ. ರಾಜನ ಆಜ್ಞೆಯನ್ನು ಜಾರಿಗೊಳಿಸುವುದು ಮಂತ್ರಿಗಳ ಕರ್ತವ್ಯವಾಗಿತ್ತು. ರಾಜನ ಆಪ್ತಕಾರ್ಯದರ್ಶಿ ಮಂತ್ರಿ ಪರಿಷತ್ತಿನ ಸದಸ್ಯನಾಗಿರುತ್ತಿದ್ದನು. ಈತನನ್ನು ಬಹಾಸ್ಯಾದಿಕರ್ತ ಎಂದು ಕರೆಯಲಾಗುತ್ತಿತ್ತು. ರಾಜನ ಖಾಸಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದ ಖಾಸಗಿ ಅಧಿಕಾರಿಯನ್ನು ವಯಿಲ್ ಕೇಲ್ ಪನ್ ಎನ್ನುತ್ತಿದ್ದರು. ಖಜಾನೆ ಅಧಿಕಾರಿ ರಾಜ್ಯದ ಆದಾಯ, ಖರ್ಚು ಇತ್ಯಾದಿಗಳ ಬಗ್ಗೆ ಲೆಕ್ಕ ಪತ್ರವನ್ನು ನಿರ್ವಹಿಸಬೇಕಿತ್ತು. ಈ ಖಜಾನೆ ಅಧಿಕಾರಿಯನ್ನು ಕೋಶಾಧ್ಯಕ್ಷ ಎನ್ನುತ್ತಿದ್ದರು. ಈತನನ್ನು ಕೆಲವು ಸಂದರ್ಭಗಳಲ್ಲಿ ಅಜ್ಞಪತಿ ಎಂದು ಸಹ ಸಂಭೋದಿಸಲಾಗುತ್ತಿತ್ತು. ನ್ಯಾಯಾಲಯಗಳಲ್ಲಿ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದವರನ್ನು ಅಧಿಕರಣ ಭೋಜಕ ಎನ್ನುತ್ತಿದ್ದರು. ಈ ಎಲ್ಲಾ ಅಧಿಕಾರಿಗಳು ನೇರವಾಗಿ ರಾಜನಿಗೆ ಜವಾಬ್ದಾರರಾಗಿದ್ದರು.

ಮೇಲಿನ ಅಂಶಗಳಿಂದ ಪಲ್ಲವರಾಜ ಅತ್ಯಂತ ಪ್ರಬಲ ವ್ಯಕ್ತಿಯಾಗಿದ್ದು ವ್ಯಾಪಕವಾದ ಅಧಿಕಾರವನ್ನು ಪಡಿದಿದ್ದನು ಎಂಬುದಾಗಿ ತಿಳಿಯಬಹುದು. ಈ ರೀತಿಯ ಅಧಿಕಾರವನ್ನು ಸಮಂಜಸವಾಗಿ ಹಾಗೂ ಜನ ಕಲ್ಯಾಣಕ್ಕಾಗಿ ಉಪಯೋಗಿಸುವ ಕಲೆ ರಾಜನಿಗೆ ಕರಗತವಾಗಿರಬೇಕಿತ್ತು ಹಾಗೂ ಈ ಅಧಿಕಾರವನ್ನು ಚಲಾಯಿಸುವ ಗುಣ ಹಾಗೂ ವ್ಯಕ್ತಿತ್ವವನ್ನು ಆತ ಹೊಂದಿರಬೇಕಿತ್ತು. ಈ ರೀತಿಯ ಗುಣ ಹಾಗೂ ವ್ಯಕ್ತಿತ್ವವನ್ನು ಹೊಂದಿಲ್ಲದ ರಾಜ ಸಿಂಹಾಸನವನ್ನೇರಿದಾಗಲೆಲ್ಲ ಪಲ್ಲವರು ಸಂಕಷ್ಟಕ್ಕೊಳಗಾದರು ಹಾಗೂ ಪಲ್ಲವ ರಾಜ್ಯ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಇಂತಹ ಸಂದರ್ಭಗಳಲ್ಲಿ ರಾಜನ ಸಮೀಪದ ಅಧಿಕಾರಿಗಳು ರಾಜ್ಯಾಧಿಕಾರವನ್ನು ತಾವೇ ಚಲಾಯಿಸಿ, ರಾಜನನ್ನು ಮೂಲೆಗುಂಪು ಮಾಡುತ್ತಿದ್ದರು. ಪಲ್ಲವ ಆಡಳಿತ ವ್ಯವಸ್ಥೆಯಲ್ಲೂ ಗ್ರಾಮ ಅತ್ಯಂತ ಚಿಕ್ಕ ಆಡಳಿತ ಘಟಕವಾಗಿತ್ತು. 'ವಾಪಿತ್ರ' ಎಂಬ ಅಧಿಕಾರಿಯು ಈ ಗ್ರಾಮ ಘಟಕವಾದ 'ಉರ್' ನಲ್ಲಿ ಆಡಳಿತ ನಿರ್ವಹಿಸುತ್ತಿದ್ದನು. ಕಂದಾಯವಸೂಲಿ ಹಾಗೂ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಸಹಾಯ ಮಾಡುವುದು ಪ್ರಾಯಶಃ ಈತನ ಜವಾಬ್ದಾರಿಯಾಗಿತ್ತೆಂದು ತೋರುತ್ತದೆ.

ಕೆಳಗೆ ನೀಡಿರುವ ನಕ್ಷೆ ಪಲ್ಲವ ಆಡಳಿತದ ವಿವಿಧ ಘಟಕಗಳ ಚಿತ್ರಣವನ್ನು ನಿಮಗೆ ನೀಡುತ್ತದೆ.

<u>ಪಲ್ಲವ ರಾಜ್ಯ</u>
(ರಾಜನ ಆಡಳಿತ ನಿರ್ವಹಣೆ)
↓
<u>ನಾಡು</u> (ಪ್ರಾಂತ್ಯ)
(ಸಾಮಂತ ಅಥವ ಪ್ರಾಂತ್ಯಾಧಿಕಾರಿಯ ಆಡಳಿತ)
↓
<u>ಕೊಟ್ಟಂ</u> (ಜಿಲ್ಲೆ)
(ದೇಶಾಟಿಕ ನಿಂದ ನಿರ್ವಹಿಸಲ್ಲಟ್ಟ ಘಟಕ)
↓
<u>ಉರ್</u> (ಗ್ರಾಮ ಅಥವ ಗ್ರಾಮಗಳ ಗುಂಪು)
(ವಾಪಿತ್ರನಿಂದ ನಿರ್ವಹಿಸಲ್ಪಟ್ಟ ಘಟಕ)

ಮೇಲ್ಕಂಡ ಅಧಿಕಾರಿಗಳನ್ನು ಹೊರತುಪಡಿಸಿ ವಿವಿಧ ವಿಭಾಗಗಳ ಆಡಳಿತವನ್ನು ನಿರ್ವಹಿಸಲು ಇನ್ನಿತರ ಅಧಿಕಾರಿಗಳನ್ನು ಸಹ ಪಲ್ಲವ ರಾಜ್ಯಾಡಳಿತ ವ್ಯವಸ್ಥೆ ಹೊಂದಿತ್ತು. ಗುಣಿಕ ಎಂಬ ಅಧಿಕಾರಿ ಕಂದಾಯ ವಸೂಲಿ ಮಾಡುವ ಜವಾಬ್ದಾರಿಯನ್ನು ಹೊಂದಿದ್ದನು. ತೀರ್ಥಿಕ ಎಂಬ ಅಧಿಕಾರಿ ಕೆರೆಕಟ್ಟೆಗಳ ನಿರ್ವಹಣೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದ್ದಿದನು. ಈ ಕೆರೆಕಟ್ಟೆಗಳು ವ್ಯವಸಾಯಕ್ಕೆ ಉಪಯುಕ್ತವಾದುದರಿಂದ ಆತನ ಹುದ್ದೆ ಪ್ರಮುಖವಾದುದಾಗಿತ್ತು. ಸ್ನಾನಘಟ್ಟಗಳು ಹಾಗೂ ಕುಡಿಯುವ ನೀರಿನ ಕೆರೆಗಳನ್ನು ತೀರ್ಥಿಕ ನಿರ್ವಹಿಸಬೇಕಿತ್ತು.

ಪ್ರತಿಯೊಂದು ಗ್ರಾಮವು ವಾರಿಯಂ ಎಂಬ ಸ್ಥಳಿಯ ಸಮಿತಿಯನ್ನು ಹೊಂದಿದ್ದು. ಈ ಸಮಿತಿ ಗ್ರಾಮಗಳ ಅಭಿವೃದ್ಧಿಕಾರ್ಯಕ್ರಮ ಇತ್ಯಾದಿಗಳ ಬಗ್ಗೆ ನಿಗಾವಹಿಸಬೇಕಿತ್ತು. ವಾರಿಯಂಗಳ ಅಸ್ತಿತ್ವದ ಬಗೆಗೆ ನಮಗೆ ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ತೆಂಗನಗುಡಿ, ತಿರುತ್ತಣಿ ಮತ್ತು ಉತ್ತರಮೇರೂರುಗಳಲ್ಲಿ ಈ ವಾರಿಯಂ ಇದ್ದ ಬಗೆ ನಮಗೆ ಮಾಹಿತಿ ದೊರಕುತ್ತದೆ. ವಾರಿಯಂ ಸದಸ್ಯರನ್ನು ಚೀಟಿ ಎತ್ತುವ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ವಾರಿಯಂ ಒಂದು ಉನ್ನತ ಸಮಿತಿಯಾಗಿದ್ದು ಇನ್ನಿತರ ಉಪಸಮಿತಿಗಳು ಇದರ ಸಹಾಯಕ್ಕೆ ನೇಮಿಸಲ್ಪಡುತ್ತಿತ್ತು. ಅಲುಂಗನಮ್ ಎಂಬುದು ಈ ರೀತಿಯ ಒಂದು ಉಪಸಮಿತಿಯಾಗಿದ್ದು ಒಂದು ಗ್ರಾಮ ಅಥವ ಹಲವು ಗ್ರಾಮಗಳ ವ್ಯಾಪಾರದ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿತ್ತು. ಗ್ರಾಮಗಳಲ್ಲಿದ್ದ ದೇವಸ್ಥಾನಗಳ ಮೇಲುಸ್ತುವಾರಿ ಮಾಡಲು ಸಹ ಒಂದು ಉಪಸಮಿತಿ ಅಸ್ತಿತ್ವದಲ್ಲಿತ್ತು. ಈ ಉಪಸಮಿತಿಯನ್ನು ಅಮೃತಗಣ ಎಂದು ಕರೆಯಲಾಗುತ್ತಿತ್ತು. ಈ ಉಪಸಮಿತಿ ಉರ್ ಅಥವ ಗ್ರಾಮಗಳ ಸಾಮಾಜಿಕ ಚಟುವಟಿಕೆಯ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿತ್ತು. ವಾರಿಯಂ ಭೂಮಾಪನ ಕರ್ತವ್ಯವನ್ನು ಸಹ ನಿರ್ವಹಿಸುತ್ತಿತ್ತು. ಪ್ರಾಯಶಃ ಈ ವಾರಿಯಂಗಳು ನ್ಯಾಯಾದಾನದ ಕರ್ತವ್ಯವನ್ನು ಸಹ ನಿರ್ವಹಿಸುತ್ತಿದ್ದವೆಂದು ತೋರುತ್ತದೆ.

## 14.2.3 ಯುವರಾಜ

ಆಳುವ ರಾಜನ ಸಮರ್ಥ ಪುತ್ರನೊಬ್ಬನನ್ನು ಅಥವ ಹಿರಿಯ ಪುತ್ರನನ್ನು ಯುವರಾಜನ ಹುದ್ದೆಗೆ ನಾಮಕರಣ ಮಾಡಲಾಗುತ್ತಿತ್ತು. ಯುವರಾಜನನ್ನು ಯುವ ಮಹಾರಾಜ ಎಂದು ಸಹ ಸಂಭೋಧಿಸಲಾಗುತ್ತಿತ್ತು. ರಾಜ್ಯದ ಉತ್ತರಾಧಿಕಾರಿಯನ್ನು ಸ್ವತಃ ರಾಜನ ನಿಯಂತ್ರಣದಲ್ಲೆ ಸೂಕ್ತವಾದ ಶಿಕ್ಷಣ ಹಾಗೂ ಇತರ ರಾಜಯೋಗ್ಯ ಕಲೆಗಳನ್ನು ಕಲಿಸಲಾಗುತ್ತಿತ್ತು. ಯುವರಾಜನ ಅಂತಸ್ತಿಗೆ ತಕ್ಕುದಾದ ರೀತಿಯಲ್ಲಿ ಆತ ಶಿಕ್ಷಣವನ್ನು ಪಡೆಯುತ್ತಿದ್ದನು. ವಿಶೇಷವಾಗಿ ರಾಜ್ಯಾಡಳಿತದಲ್ಲಿ ತರಬೇತಿ ಹಾಗೂ ಯುದ್ಧ ಕೌಶಲಗಳನ್ನು ಅತ್ಯಂತ ಅವಶ್ಯಕವಾಗಿ ಯುವರಾಜ ಕಲಿಯಲೇ ಬೇಕಿತ್ತು. ಸಾಮಾನ್ಯವಾಗಿ ರಾಜನೊಡಗೂಡಿ ಯುರಾಜ ಸೈನಿಕ ಕಾರ್ಯಾಚರಣೆ ಹಾಗೂ ಶತ್ರುಗಳ ವಿರುದ್ಧದ ಕದನಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದನು. ಈ ಅನುಭವ ಆತ ರಾಜನಾದ ನಂತರ ಆತನಿಗೆ ಸಹಾಯಕ ಅಂಶವಾಗುತ್ತಿತ್ತು. ಪ್ರಜೆಗಳ ಸಂಪರ್ಕ ಕಾಲದಲ್ಲೂ ರಾಜನೊಂದಿಗೆ ಯುವರಾಜನು ಭಾಗವಹಿಸಿ, ಜನಸಾಮಾನ್ಯರ ಸುಖ ದುಖಃಗಳ ಬಗ್ಗೆ ವಿಚಾರಿಸುತ್ತಿದ್ದನು. ಇದರಿಂದಾಗಿ ಆತ ಜನಮನ್ನಣೆ ಹಾಗೂ ಜನಪ್ರಿಯತೆಗಳಿಸಲು ಸಾಧ್ಯವಾಗುತ್ತಿತ್ತು. ಆಡಳಿತದ ವಿವಿಧ ಆಯಾಮಗಳನ್ನು ಕಲಿಸುವ ದೃಷ್ಟಿಯಿಂದ ಅನೇಕ ಸಂದರ್ಭಗಳಲ್ಲಿ ಯುವರಾಜನನ್ನು ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಲಾಗುತ್ತಿತ್ತು. ರಾಜ್ಯ ನೀತಿ ಹಾಗೂ ಪ್ರಮುಖ ವಿಷಯಗಳ ಬಗೆಗೆ ನಿರ್ಣಯವನ್ನು ತೆಗೆದು ಕೊಳ್ಳುವ ಪೂರ್ವದಲ್ಲಿ ರಾಜನು ಯುವರಾಜನ ಅಭಿಪ್ರಾಯವನ್ನು ಪಡೆಯುವುದು ಒಂದು ಪರಂಪರೆಯಾಗಿತ್ತು. ಭೂದಾನ ನೀಡಿರುವುದನ್ನು, ಹಾಗೂ ನೀರಾವರಿ ವ್ಯವಸ್ಥೆಯನ್ನು ಯುವರಾಜನು ಅನೇಕ ಸಂದರ್ಭಗಳಲ್ಲಿ ನಿರ್ಮಿಸಿರುವುದನ್ನು ಪಲ್ಲವರ ಆಳ್ವಿಕೆಯಲ್ಲಿ ನಾವು ಗಮನಿಸಬಹುದು.

## 14.2.4 ಪ್ರಾಂತೀಯ ಮತ್ತು ಸ್ಥಳೀಯ ಆಡಳಿತ

ಆಡಳಿತದಲ್ಲಿ ಶಿಸ್ತು ಮತ್ತು ದಕ್ಷತೆಯ ದೃಷ್ಟಿಯಿಂದ ಪಲ್ಲವ ರಾಜ್ಯವನ್ನು ಘಟಕಗಳಲ್ಲಿ ವಿಭಜಿಸಲಾಗಿತ್ತು. ಪ್ರಥಮ ಹಂತದಲ್ಲಿ ರಾಜ್ಯವನ್ನು ಪ್ರಾಂತ್ಯಗಳನ್ನಾಗಿ ವಿಭಜಿಸಲಾಗಿತ್ತು. ಪ್ರಾಂತ್ಯಗಳನ್ನು 'ನಾಡು' ಎಂಬುದಾಗಿ ಕರೆಯಲಾಗಿತ್ತು. ನಾಡುಗಳ ಸಂಖ್ಯೆಯನ್ನು ಖಚಿತವಾಗಿ ಹೇಳಲು ಆಧಾರಗಳು ಲಭ್ಯವಿಲ್ಲ. ನಾಡುಗಳ ಸಂಖ್ಯೆ ಕಾಲದಿಂದ ಕಾಲಕ್ಕೆ ಬದಲಾಗುತ್ತಿತ್ತು. 'ನಾಡು' ಮುಂದಿನ ಹಂತದಲ್ಲಿ 'ಕೊಟ್ಟಂ' ಎಂಬ ಸಣ್ಣ ಘಟಕಗಳನ್ನಾಗಿ ವಿಭಜಿಸಲಾಗಿತ್ತು. ಪ್ರತಿಯೊಂದು ನಾಡಿನಲ್ಲೂ ಅನೇಕ ಕೊಟ್ಟಂಗಳಿರುತ್ತಿದ್ದವು. 'ಕೊಟ್ಟಂ' ಎಂಬ ಘಟಕವನ್ನು ಪುನಃ 'ಉರ್' ಎಂಬುದಾಗಿ ವಿಭಜಿಸಲಾಗಿತ್ತು, 'ಉರ್' ಒಂದು ಗ್ರಾಮ ಅಥವ ಅನೇಕ ಗ್ರಾಮಗಳ ಒಂದು ಸಣ್ಣ ಘಟಕವಾಗಿತ್ತು, 'ಸಾಮಂತ' ನಾಡನ್ನು ಆಳುವ ಅಧಿಕಾರಿಯಾಗಿದ್ದನು. ಸಾಮಂತನ ಬದಲು ಕೆಲವೊಮ್ಮೆ ಪ್ರಾಂತ್ಯಾಧಿಕಾರಿಗಳು ಪಲ್ಲವ ರಾಜನ ಇಚ್ಛಾನುಸಾರ ಅಧಿಕಾರದಲ್ಲಿ ಮುಂದುವರೆಯುತ್ತಿದ್ದರು. ಈ ಪ್ರಾಂತ್ಯಾಧಿಕಾರಿಗಳ ಅಧಿಕಾರ, ಜವಾಬ್ದಾರಿ ಇತ್ಯಾದಿಗಳ ಬಗ್ಗೆ ವಿವರವಾಗಿ ತಿಳಿಯಲು ನಮಗೆ ಸಾಕಷ್ಟು ಆಧಾರಗಳಿಲ್ಲ. ಪ್ರಾಯಶಃ ಸಾಮಂತ ಅಥವ ಪ್ರಾಂತ್ಯಾಧಿಕಾರಿ ರಾಜನ ಪ್ರತಿನಿಧಿಯಾಗಿದ್ದು, ಪ್ರಾಂತಿಯ ಮಟ್ಟದಲ್ಲಿ ರಾಜಕೀಯ ಶಾಂತಿ ಮತ್ತು ಸ್ಥಿರತೆಯನ್ನು ರೂಢಿಸಲು ಶ್ರಮಿಸಬೇಕಿತ್ತು ಹಾಗೂ ರಾಜನ ಆಜ್ಞೆಗಳನ್ನು ಜಾರಿಗೊಳಿಸಬೇಕಿತ್ತು. 'ದೇಶಾಟಿಕ' 'ಕೊಟ್ಟಂ' ನ ಆಡಳಿತಾಧಿಕಾರಿಯಾಗಿದ್ದನು. ಭೂಕಂದಾಯ ಹಾಗೂ ಇತರ ತೆರಿಗೆಗಳನ್ನು ವಸೂಲಿ ಮಾಡಿ ಅದನ್ನು ರಾಜನ ಖಜಾನೆಗೆ ಸಲ್ಲಿಸುವುದು ಪ್ರಾಯಶಃ ಈ 'ದೇಶಾಟಿಕ'ನ ಪ್ರಥಮ ಕರ್ತವ್ಯವಾಗಿತ್ತು ಎಂದು ಅಭಿಪ್ರಾಯ ಪಡಲಾಗಿದೆ. ಇತರ ವಂಶಗಳ ಆಳ್ವಿಕೆಯಲ್ಲಿದಂತೆ ಕೆಲವು ಸಮಿತಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯಾಲಯಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವೆಂದು ತೋರುತ್ತದೆ. ಸ್ಥಳಿಯ ಸಣ್ಣ ಪ್ರಮಾಣದ ವಾಜ್ಯಗಳನ್ನು ಮಾತ್ರ ಇಲ್ಲಿ ತಿರ್ಮಾನವಾಗುತ್ತಿದ್ದಿರಬೇಕು.

ಈ ವಿವಿಧ ಸಮಿತಿ ಹಾಗೂ ಉಪಸಮಿತಿಗಳ ಬಗ್ಗೆ ವಿವರವಾದ ಮಾಹಿತಿ ಇದುವರೆವಿಗೂ ಲಭ್ಯವಾಗಿಲ್ಲ. ಈ ಸಮಿತಿಗಳು ಪಲ್ಲವರ ಆಳ್ವಿಕೆಯಲ್ಲಿ ನಿರ್ವಹಿಸುತ್ತಿದ ಜವಾಬ್ದಾರಿ ಬಗೆಗೂ ಸಹ ನಿಖರವಾದ ಮಾಹಿತಿ ಶಿಲಾಶಾಸನಗಳಲ್ಲಿ ಅಥವ ಸಮಕಾಲೀನ ಸಾಹಿತ್ಯ ಕೃತಿಗಳಾಲ್ಲಾಗಲಿ ಸಿಕ್ಕಿಲ್ಲ. ನಾವು ಈ ಸ್ಥಳಿಯ ಸಮಿತಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ತಮಿಳುನಾಡಿನ ಚೋಳರ ಆಳ್ವಿಕೆಯ ಕಾಲದಲ್ಲಿ ಶಿಲಾಶಾಸನಗಳ ಮೂಲಕ ಅರಿಯಬಹುದು.

## 14.2.5 ಸೈನಿಕ ಆಡಳಿತ

ಪಲ್ಲವ ರಾಜ್ಯದ ವಿಸ್ತರಣೆಯಲ್ಲಿ ಸೈನ್ಯ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿತು. ಪಲ್ಲವ ರಾಜ್ಯದ ಸಮಗ್ರತೆಯನ್ನು ಕಾಪಾಡುವುದು ಹಾಗೂ ಶತ್ರುಗಳನ್ನು ಎದುರಿಸುವುದು ಪಲ್ಲವ ಸೈನ್ಯದ ಪ್ರಮುಖ ಜವಾಬ್ದಾರಿಯಾಗಿತ್ತು. ಪಲ್ಲವರು ತಮ್ಮ ರಾಜಕೀಯ ಪ್ರಾಮುಖ್ಯತೆಯನ್ನು ದಕ್ಷಿಣ ಭಾರತದ ರಾಜಕಾರಣದಲ್ಲಿ ಉಳಿಸಿಕೊಳ್ಳಲು ಸದಾಕಾಲ ಬಾದಾಮಿ ಚಾಳುಕ್ಯರು ಹಾಗೂ ಮಧುರೈ ಪಾಂಡ್ಯರೊಂದಿಗೆ ಕಲಹದಲ್ಲಿ ತೊಡಗಿರಬೇಕಾಯಿತು. ಈ ಕಲಹದಲ್ಲಿ ವಿಜಯಿಗಳಾಗಲು ಪಲ್ಲವ ದೊರೆಗಳು ಪ್ರಬಲ ಹಾಗೂ ಶಿಸ್ತಿನಿಂದ ಕೂಡಿದ ಭಾರಿ ಸೈನ್ಯವನ್ನು ಹೊಂದಿರಬೇಕಿತ್ತು. ಈ ಸನ್ನದ್ಧ ಸೈನ್ಯದ ನಿಖರವಾದ ಗಾತ್ರ, ಸೈನ್ಯದ ಸಂಘಟನೆ ಮತ್ತು ನಿರ್ವಹಣೆಯ ಮೂಲಗಳ ಬಗೆಗೆ ನಮಗೆ ಖಚಿತವಾದ ಮಾಹಿತಿ ಲಭ್ಯವಾಗಿಲ್ಲ. ಪಲ್ಲವ ರಾಜಧಾನಿ ಕಂಚಿಯನ್ನು ರಕ್ಷಿಸಲು ಸದಾ ಸನ್ನದ್ಧ ಸೈನ್ಯವನ್ನು ಪಲ್ಲವರು ಹೊಂದಿದ್ದರು ಎಂಬುದಾಗಿ ತಿಳಿದು ಬರುತ್ತದೆ. ಸೇನಾಪತಿ ಸೈನ್ಯದ ಮುಖ್ಯಸ್ಥನಾಗಿದ್ದು, ಅವನು ನೇರವಾಗಿ ರಾಜನಿಂದ ನೇಮಿಸಲ್ಪಟ್ಟು, ನೇರವಾಗಿ ಆತನಿಗೆ ಜವಾಬ್ದಾರನಾಗಿದ್ದನು. ನಾಯಕ ಈ ಸೇನಾಪತಿಯ ಕೈ ಕೆಳಗಿನ ಅಧಿಕಾರಿಯಾಗಿದ್ದನು. ಇವನು ಸಣ್ಣ ತುಕಡಿಗಳ ನಾಯಕತ್ವವನ್ನು ನಿರ್ವಹಿಸುತ್ತಿದ್ದನು.

ಪಲ್ಲವರು ಸೈನ್ಯದೊಂದಿಗೆ ಅನೇಕ ಯುದ್ಧ ನೌಕೆಗಳನ್ನು ಹೊಂದಿದ್ದರು. ಈ ಯುದ್ಧ ನೌಕೆಗಳ ಸಹಾಯದಿಂದ ಪಲ್ಲವರು ಅನೇಕ ಬಾರಿ ನೆರೆಯ ರಾಷ್ಟ್ರವಾದ ಶ್ರೀಲಂಕಾ ವಿರುದ್ಧ ದಂಡೆತ್ತಿ ಹೋಗಿದ್ದರು. ಈ ಪಲ್ಲವ ಯುದ್ಧ ನೌಕೆಗಳ ಬಗ್ಗೆ ಹೆಚ್ಚಿನ ಮಾಹಿತಿಯು ನಮಗೆ ಲಭ್ಯವಾಗಿಲ್ಲ. ಸಾಗರೋತ್ತರ ವ್ಯಾಪಾರದಲ್ಲಿ ವ್ಯಾಪಕವಾದ ಹಿತಾಸಕ್ತಿಯನ್ನು ಪಲ್ಲವರು ಹೊಂದಿದ್ದರಿಂದ ಸ್ವಾಭಾವಿಕವಾಗಿ ಉತ್ತಮವಾದ ಯುದ್ಧ ನೌಕೆಗಳನ್ನು ಹೊಂದಿರುವುದು ಅನಿವಾರ್ಯವಾಗಿತ್ತು. ತೀರ ಪ್ರದೇಶದ ತೀವ್ರ ವ್ಯಾಪಾರವು ಸಹ ಪಲ್ಲವರ ನೌಕಾದಳ ಒದಗಿಸಿದ ರಕ್ಷಣೆಯ ಮೇಲೆ ನಿರ್ಭರವಾಗಿತ್ತು.

## 14.3 ಆರ್ಥಿಕ ಸ್ಥಿತಿಗತಿ

ತಮಿಳುನಾಡಿನ ಜನರನ್ನು ಪಲ್ಲವರ ಆಳ್ವಿಕೆಯಲ್ಲಿ ಅವರು ಅನುಸರಿಸುತ್ತಿದ್ದ ವೃತ್ತಿಯ ಪ್ರಕಾರ ಗುರುತಿಸಲಾಗುತ್ತಿತ್ತು. ಇವರ ಕಾಲದಲ್ಲಿ ನೂತನ ವೃತ್ತಿಗಳು ಅಸ್ತಿತ್ವಕ್ಕೆ ಬಂದಿದುದರಿಂದ ಹೊಸ ಜಾತಿಗಳು ಸಹ ಅಸ್ತಿತ್ವಕ್ಕೆ ಬಂದವು. ಆದರೆ ಈ ವಿವಿಧ ಜಾತಿಗಳನ್ನು ಗುರುತಿಸುವ ಸಲುವಾಗಿ ಪಲ್ಲವರ ಕಾಲದಲ್ಲಿ ಯಾವುದೇ ರೀತಿಯ ಜನಗಣತಿಯನ್ನು ನಡೆಸಲಾಗಲಿಲ್ಲ. ರಾಷ್ಟ್ರ ಸಂಪತ್ತನ್ನು ಸಮಾನವಾಗಿ ಎಲ್ಲರಲ್ಲೂ ಹಂಚಿಕೆಯಾಗಬೇಕೆಂಬ ಪರಿಕಲ್ಪನೆ ಪಲ್ಲವರ ಆಳ್ವಿಕೆಯಲ್ಲಿರಲಿಲ್ಲ. ಆದುದರಿಂದ ಸಮಾಜದ ವಿವಿಧ ಘಟಕಗಳಲ್ಲಿ ಆರ್ಥಿಕ ಅಸಮಾನತೆ ಎದ್ದು ತೋರುತ್ತಿತ್ತು. ಇದನ್ನು ಸರಿಪಡಿಸಲು ಪಲ್ಲವರು ಯಾವುದೇ ಆರ್ಥಿಕ ಕಾರ್ಯಕ್ರಮವನ್ನು ರೂಪಿಸಿದಂತೆ ಕಾಣುವುದಿಲ್ಲ. ಒಂದು ಕಡೆ ಶ್ರೀಮಂತರು ಮತ್ತು ಆಳುವ ವರ್ಗದವರು ಅದ್ದೂರಿ ಮತ್ತು ಐಷಾರಾಮ ಜೀವನವನ್ನು ನಡೆಸುತ್ತಿದ್ದರೆ, ಮತ್ತೊಂದೆಡೆ ಜನಸಾಮಾನ್ಯರು ಅನೇಕ ಸಂಕಷ್ಟಗಳಿಗೆ ಆಗಾಗ್ಗೆ ಈಡಾಗುವುದನ್ನು ಕಾಣುತ್ತೇವೆ. ರಾಜನ ಆಸ್ಥಾನದ ಜೀವನ ಶೈಲಿ ಹಾಗೂ ಜನಸಾಮಾನ್ಯರ ಆರ್ಥಿಕ ಬಡತನ ಹಾಗೂ ಸವಾಲುಗಳ ಬಗೆಗೆ ವಿದೇಶಿ ಯಾತ್ರಿಕರು ಅನೇಕ ವಿವರಗಳನ್ನು ನೀಡಿದ್ದಾರೆ.

### 14.3.1 ಕೃಷಿ ಮತ್ತು ಕೈಗಾರಿಕೆಗಳು

ಪ್ರಾಚೀನ ಭಾರತದ ಇನ್ನಿತರ ಪ್ರದೇಶಗಳಲ್ಲಿದ್ದಂತೆ ಪಲ್ಲವರ ರಾಜ್ಯದಲ್ಲೂ ಕೃಷಿ, ವ್ಯಾಪಾರ ವಾಣಿಜ್ಯೋದ್ಯಮ ಹಾಗೂ ಗುಡಿಕೈಗಾರಿಕೆಗಳು ಆರ್ಥಿಕ ಚಟುವಟಿಕೆಯ ಪ್ರಮುಖ ಅಂಶಗಳಾಗಿದ್ದವು. ಗ್ರಾಮಾಂತರ ಜನ ಸಂಖ್ಯೆಯ ಹೆಚ್ಚಿನ ಭಾಗ ಕೃಷಿಕರಾಗಿದ್ದರು. ವ್ಯಾಪಾರಿಗಳು ಹಾಗೂ ವಸ್ತು ಉತ್ಪಾದನೆಯಲ್ಲಿ ತೊಡಗಿದ್ದವರು ನಗರ ಪ್ರದೇಶದ ಜನಸಂಖ್ಯೆಯಲ್ಲಿ ಬಹು ಸಂಖ್ಯಾತರಾಗಿದ್ದರು. ಒಟ್ಟಿನಲ್ಲಿ ಗ್ರಾಮಾಂತರ ಜನಸಂಖ್ಯೆ ಹೆಚ್ಚಿನ ಭಾಗವಾಗಿದ್ದುದರಿಂದ ಗ್ರಾಮಾಂತರ ಆರ್ಥಿಕ ವ್ಯವಸ್ಥೆ ರಾಜ್ಯದ ಆರ್ಥಿಕತೆಯ ಬೆನ್ನೆಲುಬಾಗಿತ್ತು. ಕೃಷಿ ಉತ್ಪಾದನೆ, ಹಾಗೂ ಕೃಷಿ ಉತ್ಪಾದನೆಯ ವ್ಯಾಪಾರ ಪಲ್ಲವ ರಾಜ್ಯದ ಆರ್ಥಿಕ ಚಟುವಟಿಕೆಯ ಪ್ರಮುಖ ಅಂಗಗಳಾಗಿದ್ದವು. ಪಲ್ಲವರ ಕಾಲದ ಗುಡಿ ಕೈಗಾರಿಕೆಗಳು ಸಹ ಕೃಷಿ ಅವಲಂಬಿತ ಕೈಗಾರಿಕೆಗಳಾಗಿದ್ದವು. ಮರಗೆಲಸ, ಅಕ್ಕಸಾಲಿ, ನೇಯ್ಗೆ, ಎಣ್ಣೆ ಉತ್ಪಾದನೆ, ಕಟ್ಟಡನಿರ್ಮಾಣ ಇತ್ಯಾದಿಗಳು ಪ್ರಮುಖ ಕೈಗಾರಿಕೆಗಳಾಗಿದ್ದವು. ಸಮುದ್ರ ತೀರಪ್ರದೇಶದಲ್ಲಿ ಮೀನು ಹಿಡಿಯುವುದು, ಉಪ್ಪು ತಯಾರಿಸುವುದು ಹಾಗೂ ಹಡಗುಗಳ ನಿರ್ಮಾಣ ಪ್ರಮುಖವಾದ ಕೈಗಾರಿಕೆಗಳಾಗಿದ್ದವು. ಬಹುಪಾಲು ಕೈಗಾರಿಕೆಗಳಲ್ಲಿ ಉತ್ಪಾದನೆಯ ತಾಂತ್ರಿಕತೆ ಪ್ರಾಚೀನವಾಗಿತ್ತು. ಕೃಷಿ ಉತ್ಪಾದನೆಯಲ್ಲೂ ಸಹ ಯಾವುದೆ ಅವಿಷ್ಕಾರಗಳು ಪಲ್ಲವರ ಕಾಲದಲ್ಲಿ ಘಟಿಸಲಿಲ್ಲ. ಕೃಷಿ ಉತ್ಪಾದನೆಗೆ ಬಳಸುತ್ತಿದ್ದ ಉಪಕರಣಗಳಾಗಲಿ ಅಥವ ಕೃಷಿ ಉತ್ಪನ್ನಗಳನ್ನು ಶೇಖರಿಸಿಡುವ ವ್ಯವಸ್ಥೆಯಾಗಲಿ ವೈಜ್ಞಾನಿಕವಾಗಿರಲಿಲ್ಲ. ಆದುದರಿಂದ ಕೃಷಿ ಇಳುವರಿ ಕೆಳಮಟ್ಟದಾಗಿತ್ತು.

## 14.3.2 ವ್ಯಾಪಾರ

ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ನಿಯತವಾದ ಮಾರುಕಟ್ಟೆಗಳಿದ್ದವು. ಈ ಮಾರುಕಟ್ಟೆಗಳಲ್ಲಿ ಮಾರುವವರು ಮತ್ತು ಕೊಳ್ಳುವವರು ಒಟ್ಟಾಗಿ ಒಂದೆಡೆಸೇರುತ್ತಿದ್ದರು. ಇಂತಹ ಮಾರುಕಟ್ಟೆಗಳಲ್ಲಿ ಸಾಮಾನ್ಯವಾಗಿ ಮಾರಾಟಕ್ಕಿದ್ದ ವಸ್ತುಗಳು ಅಪರೂಪದ ಹಾಗೂ ಬೆಲೆಬಾಳುವ ವಸ್ತುಗಳಾಗಿದ್ದು ಶ್ರೀಮಂತರು ಮಾತ್ರ ಕೊಂಡುಕೊಳ್ಳಬಹುದಾಗಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿದ್ದ ಮಾರುಕಟ್ಟೆಗಳು ನಿಯತವಾದುದಾಗಿರಲಿಲ್ಲ. ಅವು ಅರೆಕಾಲಿಕವಾಗಿದ್ದು ಕೃಷಿ ಉತ್ಪಾದನೆಯನ್ನು ಅವಲಂಬಿಸಿತ್ತು. ಸುಗ್ಗಿಯ ಕಾಲದಲ್ಲಿ ನಿಯತವಾಗಿ ಗ್ರಾಮಾಂತರ ಪ್ರದೇಶದಲ್ಲಿ ಮಾರುಕಟ್ಟೆಗಳು ಸೇರುತ್ತಿದ್ದವು. ಇಲ್ಲಿ ಗ್ರಾಮಾಂತರ ವಸ್ತು ಉತ್ಪಾದಕರು ಹಾಗೂ ಕೃಷಿ ಉತ್ಪಾದಕರು ಭೇಟಿಯಾಗುತ್ತಿದ್ದರು. ವಸ್ತುವಿನಿಮಯ ಪದ್ಧತಿ ಸಾಮಾನ್ಯವಾಗಿ ಜಾರಿಯಲ್ಲಿದ್ದ ವ್ಯವಸ್ಥೆಯಾಗಿತ್ತು. ದೂರ ಪ್ರದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ತಮಿಳು ವರ್ತಕರು ಹೊಂದಿದ್ದರೆಂಬುದಕ್ಕೆ ಆಧಾರಗಳಿವೆ. ಅತ್ಯಂತ ಪ್ರಮುಖವಾದ ರಫ್ತಿನ ವಸ್ತುವೆಂದರೆ ಬಟ್ಟೆಯಾಗಿತ್ತು. ಪ್ರಮುಖವಾಗಿ ಆಮದುಮಾಡಿಕೊಳ್ಳುತ್ತಿದ್ದ ವಸ್ತುಗಳೆಂದರೆ ಕುದುರೆಗಳು ಹಾಗೂ ಮಾದಕ ಪಾನೀಯಗಳು. ರೋಮ್, ಈಜಿಪ್ಟ್, ಶ್ರೀಲಂಕಾ ಮತ್ತು ಆಗ್ನೇಯಾ ಏಷ್ಯದ ರಾಷ್ಟ್ರಗಳಿಂದ ವರ್ತಕರು ತಮಿಳು ನಾಡಿನ ಬಂದರುಗಳಿಗೆ ನಿಯತವಾಗಿ ವ್ಯಾಪಾರದ ಉದ್ದೇಶದಿಂದ ಭೇಟಿ ನೀಡುತ್ತಿದ್ದರು.

## 14.3.3 ರಾಜ್ಯಾದಾಯದ ಮೂಲಗಳು

ಭೂಕಂದಾಯ ರಾಜ್ಯಾದಾಯದ ಪ್ರಮುಖ ಮೂಲವಾಗಿತ್ತು. ಈ ಬಾಬ್ತಿನಿಂದ ಹೊರತುಪಡಿಸಿ ಇತರ ವಿವಿಧ ಮೂಲಗಳಿಂದಲೂ ಸರ್ಕಾರವು ಆದಾಯವನ್ನು ಪಡೆಯುತ್ತಿತ್ತು. ಉತ್ಪಾದನೆಯ ವಿವಿಧ ಚಟುವಟಿಕೆಗಳ ಮೇಲಿನ ತೆರಿಗೆ, ಸಾಗಾಣಿಕೆಯ ಮೇಲಿನ ಸುಂಕ ಹಾಗೂ ವ್ಯಾಪಾರವಹಿವಾಟಿ ಮೇಲಿನ ತೆರಿಗೆ ಇನ್ನಿತರ ಆದಾಯ ಮೂಲಗಳಾಗಿದ್ದವು. ಉಪ್ಪು ಉತ್ಪಾದನೆ ರಾಜ್ಯದ ಏಕಸ್ವಾಮ್ಯವಾಗಿದ್ದು ಈ ಮೂಲದಿಂದಲೂ ಸರ್ಕಾರವೂ ಗಣನೀಯವಾದ ಆದಾಯವನ್ನು ಗಳಿಸುತ್ತಿತ್ತು.

ದೇಶದ ಆದಾಯದ ಪ್ರಮುಖ ಭಾಗವು ರಾಜ, ಆತನ ಪರಿವಾರ ಹಾಗೂ ಆತನ ಆಶ್ರಿತರ ಪೋಷಣೆಗೆ ವ್ಯಯವಾಗುತ್ತಿತ್ತು. ಪಲ್ಲವ ದೊರೆಗಳು ರಾಜ್ಯಾದಾಯದ ಒಂದು ಭಾಗವನ್ನು ಲೋಕೋಪಯೋಗಿ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದರು. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ನೀರಾವರಿ ವ್ಯವಸ್ಥೆಯ ನಿರ್ಮಾಣದಲ್ಲಿ ಪಲ್ಲವ ದೊರೆಗಳು ವಿಶೇಷವಾದ ಆಸಕ್ತಿಯನ್ನು ತೋರಿದರು. ನೂರಾರು ಕೆರೆಗಳನ್ನು ಪಲ್ಲವರು ತಮ್ಮ ರಾಜ್ಯದ ಉದ್ದಗಲಕ್ಕೂ ನಿರ್ಮಿಸಿದುದನ್ನು ನಾವು ಇಲ್ಲಿ ಗಮನಿಸಬೇಕು. ಮನಮಂದೂರ್‌ನ ಚಿತ್ರಮೇಘತಟಾಕ, ಪರಮೇಶ್ವರತಟಾಕ, ವರಿಯಾಮೇಘತಟಾಕ ಕೆಲವು ಪ್ರಸಿದ್ಧ ಕೆರೆಗಳಾಗಿದ್ದವು. ರಾಜನಿಂದ ನೇಮಕಗೊಂಡ ಅಧಿಕಾರಿಗಳು ಕೃಷಿ ಉದ್ದೇಶಕ್ಕೊಸ್ಕರ ನೀರಿನ ಹಂಚಿಕೆಯನ್ನು ಮಾಡುವ ವ್ಯವಸ್ಥೆ ಪಲ್ಲವರ ಕಾಲದಲ್ಲಿ ರೂಢಿಯಲ್ಲಿತ್ತು.

## 14.4 ಕಲೆ ಮತ್ತು ಶಿಲ್ಪಕಲೆ

ದಕ್ಷಿಣ ಭಾರತದ ಇತಿಹಾಸದಲ್ಲಿ ಕಲೆ ಮತ್ತು ಶಿಲ್ಪಕಲೆಗೆ ಪಲ್ಲವರು ನೀಡಿರುವ ಕೊಡುಗೆಗಳಿಂದಾಗಿ, ಅವರು ಅತ್ಯಂತ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ದೇವಾಲಯ ಹಾಗೂ ಇನ್ನಿತರ ಕಟ್ಟಡಗಳ ನಿರ್ಮಾಣದಲ್ಲಿ ನೂತನ ತಂತ್ರ ಪ್ರಯೋಗವನ್ನು ಪಲ್ಲವರ ಕಾಲದಲ್ಲಿ ನಾವು ಗಮನಿಸಲೇಬೇಕಾದ ಅಂಶ. ಈ ನೂತನ ತಂತ್ರದಲ್ಲಿ ಮರದ ಬದಲಿಗೆ ನಿರ್ಮಾಣದಲ್ಲಿ ಕಲ್ಲಿನ ವ್ಯಾಪಕ ಬಳಕೆಯನ್ನು ಕಾಣುತ್ತೇವೆ. ಕಲ್ಲನ್ನು ಹೊರತುಪಡಿಸಿ ಇಟ್ಟಿಗೆ ಮತ್ತು ಇತರ

ಸಾಮಗ್ರಿಗಳ ಬಳಕೆ ಗಮನಾರ್ಹವಾಗಿ ಇಳಿಮುಖವಾಗುವುದು ಗಮನಿಸಬಹುದು. ಇದರಿಂದಾಗಿ ಕಲ್ಲಿನಲ್ಲಿ ನಿರ್ಮಾಣವಾದ ದೇವಸ್ಥಾನಗಳು ಹಾಗೂ ಇತರ ಕಟ್ಟಡಗಳು ಹದಿನೈದು ಶತಮಾನಗಳು ಕಳೆದಿದ್ದರು ಇನ್ನೂ ಸುಭದ್ರವಾಗಿರುವುದನ್ನು ನಾವು ಕಾಣುತ್ತೇವೆ.

ಪಲ್ಲವರು ಕುರಿತಂತೆ ಕಲೆ ಮತ್ತು ಶಿಲ್ಪಕಲೆಗೆ ನೀಡಿದ ಪ್ರಾಮುಖ್ಯತೆಯನ್ನು ಕೆ.ಎ. ನೀಲಕಂಠಶಾಸ್ತ್ರಿಯವರ ಹೇಳಿಕೆ ಗಮನಾರ್ಹ. "ದಕ್ಷಿಣ ಭಾರತದ ಕಲೆಯ ಇತಿಹಾಸದಲ್ಲಿ ಪಲ್ಲವರ ಶಿಲ್ಪಕಲೆ ಮತ್ತು ಮೂರ್ತಿಶಿಲ್ಪ ಅತ್ಯಂತ ಉಜ್ವಲವಾದ ಅಧ್ಯಾಯವಾಗಿದೆ" ಎಂಬುದಾಗಿ ಅವರು ವಿಶ್ಲೇಷಿಸಿದ್ದಾರೆ. "ಅನೇಕ ಪ್ರಬಲರಾಜ ಮನೆತನಗಳು ದಕ್ಷಿಣ ಭಾರತದ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಅವರೆಲ್ಲರನ್ನು ಒಟ್ಟುಗೂಡಿಸಿದರೂ, ಪಲ್ಲವರು ಕಲೆ ಮತ್ತು ಶಿಲ್ಪಕಲೆಗೆ ನೀಡಿರುವ ಕೊಡುಗೆಯನ್ನು ಮೀರಲು ಸಾಧ್ಯವಿಲ್ಲ. ಪಲ್ಲವರ ನಿರ್ಮಾಣ ದ್ರಾವಿಡ ಶಿಲ್ಪಶೈಲಿಗೆ ಬುನಾದಿಯನ್ನು ಒದಗಿಸಿತು" ಎಂಬುದಾಗಿ ಅತ್ಯಂತ ಪ್ರಸಿದ್ಧ ಕಲಾ ಇತಿಹಾಸಕಾರನಾದ ಪರ್ಸಿಬ್ರೌನ್ ಹೇಳಿದ್ದಾನೆ. ಅನೇಕ ಇತಿಹಾಸಕಾರರ ಪ್ರಕಾರ ದ್ರಾವಿಡ ಶೈಲಿಯ ಪರಂಪರೆಯನ್ನು ಪ್ರಾರಂಭಿಸಿದದು ಪಲ್ಲವರು.

ಪಲ್ಲವರ ಶಿಲ್ಪಕಲೆ ಹಂತಹಂತವಾಗಿ ವಿಕಸನಗೊಂಡ ಪ್ರಕ್ರಿಯೆಯಾಗಿತ್ತು. ಆದುದರಿಂದ ವಿವಿಧ ಶೈಲಿಗಳ ಅಡಿಯಲ್ಲಿ ಪಲ್ಲವರ ಕಲೆಯ ಇತಿಹಾಸವನ್ನು ಅಧ್ಯಯನ ಮಾಡಬೇಕು. ಪಲ್ಲವರ ಕಲೆಯಲ್ಲಿ ನಾಲ್ಕು ಪ್ರಮುಖ ಶೈಲಿಗಳನ್ನು ಗಮನಿಸಬಹುದು. ಈ ನಾಲ್ಕು ಶೈಲಿಗಳು ನಾಲ್ಕು ಪ್ರಮುಖ ದೊರೆಗಳ ಹೆಸರಿನಲ್ಲಿ ಅಧ್ಯಯನ ಮಾಡಬಹುದು. ಅವುಗಳೆಂದರೆ

ಅ. ಮಹೇಂದ್ರವರ್ಮನ್ ಶೈಲಿ

ಆ. ಮಾಮಲ್ಲ ಶೈಲಿ

ಇ. ರಾಜಸಿಂಹ ಶೈಲಿ ಮತ್ತು

ಈ. ಅಪರಾಜಿತ ಶೈಲಿ

ಪಲ್ಲವರು ಲಲಿತಕಲೆಗಳಿಗೂ ಸಹ ರಾಜಾಶ್ರಯ ಮತ್ತು ಪ್ರೋತ್ಸಾಹವನ್ನು ನೀಡಿದರು. ವಿಶೇಷವಾಗಿ ಸಂಗೀತ ಮತ್ತು ವರ್ಣ ಚಿತ್ರಕಲೆ ಪಲ್ಲವರಿಂದ ಪ್ರೋತ್ಸಾಹಗೊಂಡಿತು.

## 14.4.1 ಲಲಿತ ಕಲೆ

ಲಲಿತಕಲೆಗಳಿಗೆ ಪಲ್ಲವರ ಕೊಡುಗೆ ಪ್ರಶಂಸಾರ್ಹವಾಗಿದೆ. ಆದರೆ ಸಮಗ್ರ ಅಧ್ಯಯನ ಹಾಗೂ ಮೌಲ್ಯಮಾಪನಕ್ಕೆ ತಕ್ಕುದಾದ ಆಧಾರಗಳು ಲಭ್ಯವಿಲ್ಲ. ಇದರಿಂದಾಗಿ ಪಲ್ಲವರ ಕಾಲದ ಲಲಿತಕಲೆಗಳ ಇತಿಹಾಸ ಅಧ್ಯಯನ ಅಪೂರ್ಣವಾಗುಳಿದಿದೆ. ಕುಡಿಮಿಯ ಮಲೈ ಮತ್ತು ತಿರುಮಂಗಮ್ ಶಿಲಾಶಾಸನಗಳು ಸಂಗೀತಕ್ಕೆ ಸಂಬಂಧಪಟ್ಟ ಆಧಾರಗಳಾಗಿವೆ. ಈ ಶಾಸನಗಳು ಮೊದಲನೇ ಮಹೇಂದ್ರ ವರ್ಮನ ಕಾಲಕ್ಕೆ ಸೇರಿದವುಗಳೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಇತಿಹಾಸಕಾರರು ಈ ಶಿಲಾಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಆಶ್ರಯದಾತರು ಪಾಂಡ್ಯ ದೊರೆಗಳೆಂದು ಸಹ ವಾದಿಸುತ್ತಾರೆ. ಆದರೆ ಈ ಎರಡು ಪ್ರಮುಖ ಶಾಸನಗಳು ಪಲ್ಲವರ ಕಾಲಕ್ಕೆ ಸೇರಿದವು ಎಂಬುದು ನಿರ್ವಿವಾದ ಹಾಗೂ ಪ್ರಮುಖವಾದ ಅಂಶವಾಗಿದೆ. ಸಂಗೀತಕ್ಕೆ ಸಂಬಂಧಪಟ್ಟ ಹಾಗೆ ಈ ಎರಡು ಶಾಸನಗಳಲ್ಲಿ ಲಭ್ಯವಾಗುವ ಅಂಶಗಳಿಂದ ಪಲ್ಲವರ ಕಾಲದಲ್ಲಿದ್ದ ಸಂಗೀತ ಕಲೆಯ ಬಗ್ಗೆ ಸ್ಥೂಲವಾದ ಪರಿಕಲ್ಪನೆಯನ್ನು ಪಡೆಯಬಹುದು. ಈ ಶಾಸನಗಳು ಹಾಡುಗಾರಿಕೆ ಮತ್ತು ವಾದ್ಯ ಸಂಗೀತ ಬಗೆಗೆ ವಿವರಗಳನ್ನು ನೀಡುತ್ತವೆ. ಪಲ್ಲವ ದೊರೆಗಳ ಜೊತೆಯಲ್ಲೆ ಶ್ರೀಮಂತರು ಹಾಗೂ ಆಳುವ ವರ್ಗದವರು ಲಲಿತ ಕಲೆಗಳಿಗೆ ಪ್ರೋತ್ಸಾಹವನ್ನು ನೀಡಿದರು.

ವರ್ಣಚಿತ್ರಗಳ ರಚನೆಯನ್ನು ಪಲ್ಲವ ದೊರೆಗಳು ಪ್ರೋತ್ಸಾಹಿಸಿದರು. ಸಿತ್ತನ್ನವಾಸಲ್ ವರ್ಣ ಚಿತ್ರಗಳು ಅತ್ಯಂತ ಪ್ರಸಿದ್ಧವಾದ ಪಲ್ಲವ ಕಾಲದ ವರ್ಣಚಿತ್ರಗಳಾಗಿವೆ. ಇವು ತಮಿಳು

ನಾಡಿನ ಪ್ರಾರಂಭಕಾಲದ ಗೋಡೆ ವರ್ಣಚಿತ್ರಗಳಾಗಿವೆ. ನಿಸರ್ಗ ಹಾಗೂ ಆಕಾಶಕಾಯಗಳು ಈ ವರ್ಣ ಚಿತ್ರಗಳ ವಸ್ತು ಮಾಧ್ಯಮವಾಗಿವೆ.

## 14.4.2 ಮಹೇಂದ್ರವರ್ಮನ್ ಶೈಲಿ

ಒಂದನೇ ಮಹೇಂದ್ರವರ್ಮನ್ ಆಳ್ವಿಕೆಯಲ್ಲಿ ಮಹಾಬಲಿಪುರಂ "ದಕ್ಷಿಣ ಭಾರತದ ಶಿಲ್ಪಕಲೆ ಮತ್ತು ಮೂರ್ತಿ ಶಿಲ್ಪ ಕಲೆಯ ಉಗಮ ಸ್ಥಾನವಾಯಿತು" ಎಂಬುದಾಗಿ ಅನೇಕ ಕಲಾ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಮಹೇಂದ್ರವರ್ಮನ್ ಶೈಲಿ ಕ್ರಿ.ಶ. 600ರಿಂದ 625ರ ಅವಧಿಯಲ್ಲಿ ವಿಕಸನಗೊಂಡಿತು. ಶಿಲಾಸ್ತಂಭಗಳ ಆಧಾರದಿಂದ ನಿರ್ಮಾಣಗೊಂಡಿರುವ ಮಂಟಪಗಳು ಈ ಶೈಲಿಯ ಪ್ರಮುಖವಾದ ಲಕ್ಷಣ. ಈ ಮಂಟಪಗಳು ಸಾಮಾನ್ಯ ಹಜಾರಗಳಾಗಿದ್ದು, ಹಿಂದಿನ ಗೋಡೆಗೆ ಹೊಂದಿಕೊಂಡಂತೆ ಒಂದು ಅಥವ ಎರಡು ಕೋಣೆಗಳನ್ನು ಹೊಂದಿವೆ. ಈ ಮಂಟಪಗಳಿಗೆ ಸಾಲುಸಾಲಾದ ಶಿಲಾ ಸ್ತಂಭಗಳ ಮೂಲಕ ಪ್ರವೇಶವನ್ನು ಕಲ್ಪಿಸಲಾಗಿದೆ. ಈ ಮಂಟಪಗಳು ಕಟ್ಟಡಗಳ ವರ್ಗಕ್ಕೆ ಸೇರಿಸಲಾಗುವುದಿಲ್ಲ. ಶಿಲಾ ಬಂಡೆಗಳನ್ನು ಕೊರೆಯುವುದರ ಮೂಲಕ ಈ ದೇವಾಲಯಗಳ ನಿರ್ಮಾಣ ಮಾಡಿರುವುದರಿಂದ ಅವುಗಳನ್ನು ಶಿಲೆಗಳಿಂದ ಕೊರೆದ ದೇವಾಲಯಗಳೆಂದು ಹೇಳುತ್ತೇವೆ. ಉಂದವಳ್ಳಿಯ ಅನಂತಶಯನ ಮತ್ತು ಭೈರವಕೊಂಡ ಮಂಟಪಗಳು ಹಾಗೂ ಉತ್ತರ ಆರ್ಕಾಟ್‌ನಲ್ಲಿರುವ ಮಂಟಪಗಳು ಪ್ರಸಿದ್ಧವಾದ ಕೆಲವು ಈ ಕಾಲದ ರಚನೆಗಳು. ಉಂದವಳ್ಳಿ ಗುಂಟೂರು ಜಿಲ್ಲೆಯಲ್ಲಿದೆ.

ಈ ಮಂಟಪಗಳಲ್ಲದೇ ಒಂದನೇ ಮಹೇಂದ್ರವರ್ಮನ್ ಮತ್ತು ಮಹೇಂದ್ರವರ್ಮನ್ ಶೈಲಿಗೆ ಸೇರಿದ ಇನ್ನಿತರ ಮಂಟಪಗಳನ್ನು ಈ ಕೆಳಗೆ ಹೆಸರಿಸಲಾಗಿದೆ.

ಅ. ಮಂಡಗಪಟ್ಟುವಿನ ಲಕ್ಷೀತಾಯಂತನ
ಆ. ಪಲ್ಲವರಮ್ ನ ಪಂಚಪಾಂಡವ
ಇ. ಮಾಮಂದೂರಿನ ರುದ್ರತಸಿಲ್ಲರ
ಈ. ಕುರಂಗನಿಲ್ ಮುತ್ತನ್‌ನ ಕಮಂಡಕಮ್
ಉ. ವಲ್ಲಂನ ವಸಂತೇಶ್ವರ
ಊ. ಮಹೇಂದ್ರವಾಡಿಯ ಮಹೇಂದ್ರ ವಿಷ್ಣು
ಋ. ಮನಂದೂರ್‌ನ ವಿಷ್ಣು
ೠ. ತಿರುಚನಾಪಳ್ಳಿಯ ಲಲಿಂತಂಕುರ ಪಲ್ಲವೇಶ್ವರ
ಎ. ದಲವನೂರಿನ ಶತ್ರುಮಲ್ಲೇಶ್ವರಾಲಯ ಮತ್ತು
ಏ. ಸಿಯಮಂಗಲದ ಅವನಿಭಾಜನ ಪಲ್ಲವೇಶ್ವರ

## 14.4.3 ಮಾಮಲ್ಲಶೈಲಿ

ಕ್ರಿ.ಶ. 625ರಿಂದ ಕ್ರಿ.ಶ. 674ರ ಮಧ್ಯದ ಅವಧಿಯಲ್ಲಿ ಮಾಮಲ್ಲ ಶೈಲಿಯು ಅಭಿವೃದ್ಧಿಗೊಂಡಿತು. ಮಹಾಬಲಿಪುರಂ ಈ ಶೈಲಿಯ ಪ್ರಮುಖ ಕೇಂದ್ರವಾಗಿದೆ. ಆಧುನಿಕ ಚೆನ್ನೈ (ಮದ್ರಾಸ್) ನಿಂದ 60ಕಿಲೋಮಿಟರ್ ದೂರದಲ್ಲಿ ಸಮುದ್ರ ತೀರದಲ್ಲಿರುವ ಒಂದು ಪಟ್ಟಣ ಈ ಮಹಾಬಲಿಪುರಂ. ಈ ಶಿಲ್ಪಕಲೆಯ ಕೇಂದ್ರವನ್ನು ಅಭಿವೃದ್ಧಿಗೊಳಿಸಿದವನು ಒಂದನೇ ನರಸಿಂಹ ವರ್ಮನ್. ಇತಿಹಾಸದಲ್ಲಿ ಈ ದೊರೆಯನ್ನು ಮಾಮಲ್ಲನೆಂದು ಕರೆಯಲಾಗಿದೆ. ಆತ ಪ್ರೋತ್ಸಾಹಿಸಿದ ಕಲಾ ಶೈಲಿಯನ್ನು ಮಾಮಲ್ಲ ಶೈಲಿಯೆಂದು ಹೆಸರಿಸಲಾಗಿದೆ. ಏಕ ಶಿಲೆಯಿಂದ ನಿರ್ಮಿತವಾಗಿರುವ ದೇವಸ್ಥಾನಗಳು ಈ ಶೈಲಿಯ ಪ್ರಮುಖ ಲಕ್ಷಣ. ಮಹೇಂದ್ರವರ್ಮನ್ ಶೈಲಿಯು ಮುಂದಿನ ಹಂತದ ಬೆಳವಣಿಗೆ ಇದಾಗಿದೆ. "ನೂತನ ಮತ್ತು ಹೆಚ್ಚಿನ ಅಲಂಕಾರದಿಂದ ಕೂಡಿರುವ ಕೊರೆದ

ಗುಹಾಲಯ ಮತ್ತು ಕಲ್ಲಿನ ಬಂಡೆಯಿಂದ ಕೊರೆದಿರುವ ದೇವಾಲಯ (ವಿಮಾನಗಳು ಮತ್ತು ರಥಗಳು) ಮತ್ತು ಗಮನಾರ್ಹ ಎತ್ತರದ ಉಬ್ಬು ಚಿತ್ರಗಳನ್ನು " ಮಾಮಲ್ಲ ಶೈಲಿಯು ಹೊಂದಿದೆ. ಮಹಾಬಲಿಪುರಂನಲ್ಲಿ ಒಟ್ಟು ಹತ್ತು ಮಂಟಪಗಳಿವೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ:

ಅ. ವರಾಹ ಮಂಟಪ

ಆ. ತ್ರಿಮೂರ್ತಿ ಮಂಟಪ

ಇ. ಮಹಿಷಾಸುರಮರ್ಧಿನಿ ಮಂಟಪ

ಈ. ಐವರು ಪಾಂಡವರ ಐದು ಮಂಟಪಗಳು

ಎರಡು ಶಿಲಾಸ್ತಂಭಗಳ ಸಾಲಿನ ಮಧ್ಯೆ ಪ್ರವೇಶ ಮಾರ್ಗವನ್ನು ವರಾಹ ದೇವಾಲಯ ಹೊಂದಿದೆ. ಕುಳಿತಿರುವ ಸಿಂಹದ ಮೇಲಿರುವ ಸ್ತಂಭಗಳನ್ನು ಈ ದೇವಾಲಯ ಹೊಂದಿದೆ. ಈ ದೇವಾಲಯದಲ್ಲಿ ಬಿಡಿಸಿರುವ ಸೂರ್ಯ, ದುರ್ಗಾ, ಗಜಲಕ್ಷ್ಮಿ, ವರಾಹವತಾರ ಮೂರ್ತಿಗಳು ಪ್ರಸಿದ್ಧವಾದ ಕೃತಿಗಳಾಗಿವೆ. ಮೇಲೆ ಹೇಳಿದ ಹಾಗೆ ಈ ನಿರ್ಮಾಣಗಳೆಲ್ಲವು ಹೆಚ್ಚು ಅಲಂಕೃತವೂ ಮತ್ತು ಎತ್ತರವೂ ಆಗಿರುವ ದೇವಾಲಯಗಳಾಗಿವೆ.

ಪ್ರಸಿದ್ಧ ಕಲಾ ಇತಿಹಾಸಕಾರ ಪರ್ಸಿಬ್ರೌನ್ ಮಾಮಲ್ಲ ಶೈಲಿಯ ಪ್ರಮುಖ ಲಕ್ಷಣವನ್ನು ಕುರಿತಂತೆ ಈ ರೀತಿ ಹೇಳಿದ್ದಾನೆ. "ಬೊದಿಗೆಯ ಸ್ತಂಭದ ಮೇಲೆ ಕಳಸ, ತಡಿಕುಂಭ, ಪದ್ಮ ಮತ್ತು ಫಲಕ ಕಂಡು ಬರುತ್ತದೆ". ಈ ಲಕ್ಷಣಗಳು ಸಾರ್ವತ್ರಿಕವಾಗಿ ಎಲ್ಲಾ ದೇವಾಲಯಗಳಲ್ಲೂ ಕಾಣಸಿಗುವುದಿಲ್ಲ. ಸ್ತಂಭಗಳ ಅಡಿಪಾಯ ಸಿಂಹಗಳ ಮೇಲೆ ನಿರ್ಮಿಸಲಾಗಿದೆ. ಗರ್ಭಗುಡಿಯು ಮಂಟಪದೊಳಗೆ ಚಾಚಿಕೊಂಡಿದ್ದು, ವಿಮಾನ ಎಲ್ಲಾ ಪ್ರಮುಖ ಅಂಶಗಳನ್ನು ಹೊಂದಿದೆ.

ಪಗೋಡ ಅಥವ ರಥ ಎಂದು ಕರೆಯಲಾಗಿರುವ ಶಿಲೆಯಲ್ಲಿ ಕೊರೆದಿರುವ ದೇವಾಲಯಗಳನ್ನು ಸಹ ಮಹಾಬಲಿಪುರಂನಲ್ಲಿ ಕಾಣಬಹುದು. ಈ ರಥಗಳನ್ನು ನಿರ್ಮಿಸಿದವನು ಒಂದನೇ ನರಸಿಂಹವರ್ಮನ್. ಈತ ನಿರ್ಮಿಸಿದ ಮಂಟಪಗಳನ್ನು ಪಾಂಡವರ ಮಂಟಪಗಳೆಂದು ಕರೆದಿದ್ದಾನೆ. ಪಾಂಡವರ ಮಂಟಪಗಳಲ್ಲಿ ಗಮನ ಸೆಳೆಯುವ ಮಂಟಪಗಳೆಂದರೆ ದ್ರೌಪದಿ, ಭೀಮ, ಅರ್ಜುನ, ಸಹದೇವ ಮತ್ತು ಧರ್ಮರಾಯ ಅವರ ಹೆಸರಿನಲ್ಲಿರುವ ಮಂಟಪಗಳು. ಇವೆಲ್ಲ ವಿವಿಧ ಗಾತ್ರದ ರಥಗಳಾದರೂ ಶೈಲಿಯಲ್ಲಿ ಒಂದೇ ರೀತಿಯಲ್ಲಿವೆ. ಅತ್ಯಂತದೊಡ್ಡ ರಥ 356 ಅಡಿ ಅಗಲ, 42 ಅಡಿ ಉದ್ದ ಹಾಗೂ 40 ಅಡಿ ಎತ್ತರವಾಗಿದೆ. ಈ ರಥಗಳು ಕ್ರಿ.ಶ. ಏಳನೇ ಶತಮಾನದ ಪ್ರಾರಂಭದ ವರ್ಷಗಳಿಗೆ ಸೇರಿದ ನಿರ್ಮಾಣಗಳಾಗಿವೆ. ಮೇಲೆ ಹೇಳಿದ ನಿರ್ಮಾಣಗಳಲ್ಲಿ ಅತ್ಯಂತದೊಡ್ಡ ಮಂಟಪವೆಂದರೆ ಧರ್ಮರಾಯನ ಮಂಟಪ. ಈ ಮಂಟಪ "ಪಲ್ಲವ ದೇವಾಲಯದ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಮುಂಭಾಗದಲ್ಲಿ ಸಿಂಹಗಳನ್ನು ಅಡಿಪಾಯವನ್ನಾಗಿ ಹೊಂದಿರುವ ಶಿಲಾ ಸ್ತಂಭಗಳು, ಪಿರಮಿಡ್ ಆಕೃತಿಯ ಗೋಪುರ ಮತ್ತು ಸಣ್ಣ ಸಣ್ಣ ಗೋಪುರಗಳ ಮೇಲ್ ಚಾವಣಿ". ಭೀಮ ಮತ್ತು ಸಹದೇವ ರಥಗಳು ಚತುರಸ್ರಾಕಾರದ ನಿರ್ಮಾಣಗಳಾಗಿದ್ದು ಬೌದ್ಧರ ಚೈತ್ಯಾಲಯಗಳನ್ನು ಹೋಲುತ್ತವೆ. ಈ ರಥಗಳು ಎರಡು ಅಥವ ಮೂರು ಮಹಡಿಗಳನ್ನು ಹೊಂದಿವೆ. ಈ ರಥಗಳು ದ್ರಾವಿಡ ಶೈಲಿಯ ಪರಂಪರೆಯ ಪ್ರಾರಂಭವನ್ನು ಪ್ರತಿನಿಧಿಸುತ್ತವೆ, ಅದರಲ್ಲೂ ವಿಶೇಷವಾಗಿ ದ್ರಾವಿಡ ಶೈಲಿಯ ಗೋಪುರದ ಪ್ರಾರಂಭವನ್ನು ಇಲ್ಲಿ ಕಾಣಬಹುದು. ಈ ಗೋಪುವ ಮುಂದೆ ಆರು ಶತಮಾನಗಳ ನಂತರ ಅದ್ಭುತ ದ್ರಾವಿಡ ಶೈಲಿಯ ಗೋಪುರವಾಗಿ ಅಭಿವೃದ್ಧಿ ಹೊಂದಿದ್ದನ್ನು ಚೋಳರ ಕಾಲದಲ್ಲಿ ಕಾಣಬಹುದು. ಈ ಎಲ್ಲಾ ರಥಗಳು ಕಲಾತ್ಮಕವಾಗಿ ನಿರ್ಮಾಣಗೊಂಡಿವೆ. ದೇವಾನುದೇವತೆಗಳ ಚಿತ್ರ, ಪಕ್ಷಿ ಪ್ರಾಣಿಗಳ ಚಿತ್ರ, ಪುರುಷ ಸ್ತ್ರಿಯರ ಚಿತ್ರಗಳನ್ನು ಅತ್ಯಂತ ಕಲಾತ್ಮಕವಾಗಿ ಬಿಡಿಸಲಾಗಿದೆ.

ಈ ಮಂಟಪಗಳ ಸಮಿಪದಲ್ಲೆ 98 ಅಡಿ ಉದ್ದದ, 46 ಅಡಿ ಅಗಲದ ಮತ್ತು 30 ಅಡಿ ಎತ್ತರದ ಉಬ್ಬು ಚಿತ್ರವಿದೆ. ಈ ಬೃಹತ್ ಉಬ್ಬು ಚಿತ್ರ ಪಲ್ಲವರ ಶಿಲ್ಪ ಕಲೆಯ ಉನ್ನತ ಮಟ್ಟದ

ಕೌಶಲಕ್ಕೆ ಸಾಕ್ಷಿಯಾಗಿದೆ. ಪ್ರಾರಂಭದಲ್ಲಿ ಇತಿಹಾಸಕಾರರು ಇದನ್ನು ಅರ್ಜುನನ ತಪ್ಪಸ್ಸಿನ ಚಿತ್ರವೆಂದು ಭಾವಿಸಿದ್ದರು. ಆದರೆ ಈಗ ಅದನ್ನು 'ಗಂಗೆ ಧರೆಗೆ ಇಳಿಯುವ ' ಚಿತ್ರಣವೆಂದು ಗುರುತಿಸಲಾಗಿದೆ. ಫಾದರ್ ಹೇರಾಸ್ ಈ ಚಿತ್ರದ ವರ್ಣನೆಯನ್ನು ಮನೋಜ್ಞ ವಿವರಿಸಿದ್ದಾರೆ. "ಇಬ್ಬರು ನಾಗಾಗಳು ಹೊಳೆಯ ಮಧ್ಯದಲ್ಲಿ ನೀರಿನಲ್ಲಿ ಸಂತೋಷದಿಂದಿದ್ದಾರೆ; ಬ್ರಾಹ್ಮಣನೊಬ್ಬ ಹೆಗಲ ಮೇಲೆ ನೀರಿನ ಬಿಂದಿಗೆಯೊಂದಿಗೆ ಮನೆಗೆ ಮರಳುತ್ತಿದ್ದಾನೆ; ಜಿಂಕೆಯೊಂದು ಬಾಯಾರಿಕೆಯನ್ನು ಪರಿಹರಿಸಲು ಹೊಳೆಗೆ ಬರುತ್ತಿದೆ. ಮೇಲೆ ಎರಡು ಹಂಸಗಳು ನೀರಿಗಿಳಿಯಲು ಸಿದ್ಧವಾಗಿವೆ ; ಅಡಿಯಲ್ಲಿ ಒಂದು ಸಣ್ಣ ದೇವಾಲಯದ ಸುತ್ತಲೂ ಅನೇಕ ಋಷಿಮುನಿಗಳು ತಪ್ಪಸನ್ನು ಆಚರಿಸುತ್ತಿದ್ದಾರೆ. ಹೊಳೆಯ ಮತ್ತೊಂದು ದಡದಲ್ಲಿ ಋಷಿಮುನಿಗಳನ್ನು ಅನುಸರಿಸುತ್ತಾ ಬೆಕ್ಕೊಂದು ಮುಂದಿನ ಎರಡು ಕೈಕಾಲುಗಳನ್ನೆತ್ತಿ ತಲೆಯ ಮೇಲಿಟ್ಟು ದೇಹದ ಭಾರವನ್ನು ಹಿಂಗಾಲುಗಳ ಮೇಲೆ ಹಾಕಿ ತಪ್ಪಸ್ಸಿನ ಭಂಗಿಯಲ್ಲಿದೆ. ಈ ಮಧ್ಯೆ ಕಾಡಿನ ಮೂಷಿಕ ಒಂದು ತನ್ನ ಶತ್ರುವಾದ ಬೆಕ್ಕು ತಪ್ಪಸ್ಸಿನ ಭಂಗಿಯಲ್ಲಿರುವುದನ್ನು ಕಂಡು ಹೆದರಿಕೆಯಿಲ್ಲದೆ ಅತ್ತಿಂದಿತ್ತ ಓಡಾಡುತ್ತಿದೆ ಮತ್ತು ತಪೋಭಂಗಿಯಲ್ಲಿರುವ ಬೆಕ್ಕನ್ನು ಪೂಜಿಸುವ ಹಾಗೆ ಕಾಣುತ್ತದೆ".

ಮತ್ತೊಬ್ಬ ಕಲಾ ಇತಿಹಾಸಕಾರ ಈ ಉಬ್ಬು ಚಿತ್ರವನ್ನು ಗಾತ್ರದಲ್ಲಿ ಹಿರಿದಾದ ಮತ್ತು ಉಬ್ಬು ಚಿತ್ರಗಳ ಪೈಕಿ ಅತ್ಯಂತ ಶ್ರೇಷ್ಠವಾದ ಕೃತಿಯೆಂದು ಹೇಳಿದ್ದಾನೆ. ಈ ಹೇಳಿಕೆಯನ್ನು ಗಮನಿಸಿದರೆ ಈ ಶಿಲ್ಪಕಲೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬಹುದು. ನೂತನ ಶೈಲಿಯೊಂದರ ಉಗಮದಲ್ಲಿ ಈ ಉಬ್ಬು ಚಿತ್ರದ ಪಾತ್ರ ಗಮನಾರ್ಹವಾದುದು ಎಂಬುವುದರಲ್ಲಿ ಸಂಶಯವಿಲ್ಲ.

## 14.4.4 ರಾಜಸಿಂಹ ಶೈಲಿ

ಕ್ರಿ.ಶ. ಎಂಟನೇ ಮತ್ತು ಕ್ರಿ.ಶ. ಹತ್ತನೆ ಶತಮಾನದ ಮಧ್ಯದ ಅವಧಿಯಲ್ಲಿ ಪ್ರವರ್ಧಮಾನಕ್ಕೆ ಬಂದ ಪಲ್ಲವ ಶೈಲಿಯನ್ನು ರಾಜಸಿಂಹ ಶೈಲಿಯೆಂದು ವರ್ಗೀಕರಿಸಲಾಗಿದೆ. ಈ ಕಾಲದಲ್ಲಿ ಒಂದೆ ಕಲ್ಲಿನಿಂದ ಕೊರೆದ ದೇವಸ್ಥಾನಗಳ ಬದಲು ಕಟ್ಟಡ ರೂಪದಲ್ಲಿ ನಿರ್ಮಾಣವಾದ ದೇವಾಲಯಗಳನ್ನು ಕಾಣುತ್ತೇವೆ. ಕಲ್ಲನ್ನು ವ್ಯಾಪಕವಾಗಿ ಈ ಕಟ್ಟಡ ನಿರ್ಮಾಣದಲ್ಲಿ ಉಪಯೋಗಿಸಲಾಗಿದೆ. ಮಹಾಬಲಿಪುರಂನಲ್ಲಿನ ತೀರ ದೇವಾಲಯ ಈ ಶೈಲಿಯ ಪ್ರಥಮ ಉದಾಹರಣೆಯಾಗಿದೆ. ಈ ದೇವಸ್ಥಾನದಲ್ಲಿ ಗರ್ಭಗೃಹವು ಸಮುದ್ರದ ಕಡೆ ಮುಖಮಾಡಿದೆ. ಈ ದೇವಸ್ಥಾನದ ಪಶ್ಚಿಮದಲ್ಲಿ ಮಂಟಪವೊಂದಿದ್ದು ಅದು ಈಗ ನಾಶಗೊಂಡಿದೆ. ಈ ಶೈಲಿಯ ಉನ್ನತ ಮಟ್ಟದ ದೇವಾಲಯವನ್ನು ಕಂಚಿಯ ಕೈಲಾಸನಾಥ ದೇವಸ್ಥಾನವೆಂದು ಪರಿಗಣಿಸಲಾಗಿದೆ. ಈ ದೇವಾಲಯವನ್ನು ನಿರ್ಮಿಸಿದಾಗ ಪಲ್ಲವ ರಾಜ್ಯವನ್ನು ಆಳುತ್ತಿದ್ದವನು ರಾಜಸಿಂಹ. ಈ ದೇವಾಲಯದ ಗರ್ಭಗೃಹ ಪಿರಮಿಡ್ ಆಕಾರದ ಗೋಪುರವನ್ನು ಹೊಂದಿದೆ. ಈ ದೇವಾಲಯದ ಅತೀ ಸನಿಹದಲ್ಲೆ ಮಂಟಪವಿದೆ, ಈ ಮಂಟಪವನ್ನು ಬೇರೆಯಾಗಿ ನಿರ್ಮಿಸಲಾಗಿದೆ. ಎರಡು ಶತಮಾಗಳ ನಂತರ ಅಂತರಾಳ ಒಂದರ ಮೂಲಕ ಈ ಎರಡು ಕಟ್ಟಡಗಳನ್ನು ಸೇರಿಸಲಾಗಿದೆ. ಕಂಚಿಯಲ್ಲಿರುವ ವೈಕುಂಠಪೆರುಮಾಳ್ ದೇವಾಲಯವು ಈ ಶೈಲಿಗೆ ಸೇರಿದ್ದು, ಅದು ಅತ್ಯಂತ ಸುಂದರವಾದ ನಿರ್ಮಾಣವೆಂದು ಅಭಿಪ್ರಾಯಪಡಲಾಗಿದೆ.

## 14.4.5 ಅಪರಾಜಿತ ಶೈಲಿ

ಪಲ್ಲವರ ಶೈಲಿಯಲ್ಲಿ ಕಟ್ಟಕಡೆಯ ಹಂತವೆಂದರೆ ಅಪರಾಜಿತ ಶೈಲಿಯಲ್ಲಿ ನಿರ್ಮಾಣವಾದ ದೇವಾಲಯಗಳು. ಪೂರ್ವದ ದೇವಾಲಯಗಳಿಂದ ಈ ಅಂತಿಮ ಹಂತದ ಶೈಲಿಯನ್ನು ಬೇರ್ಪಡಿಸುವ ಒಂದು ಅಂಶವೆಂದರೆ ಬೋದಿಗೆಯ ಮೇಲಿರುವ ಚೌಕಟ್ಟು. ಇದನ್ನು ಅಪರಾಜಿತ ಶೈಲಿಯಲ್ಲಿ

ಪೂರ್ಣವಾಗಿ ಅಭಿವೃದ್ಧಿಗೊಳಿಸಲಾಯಿತು. ಅಪರಾಜಿತ ಶೈಲಿಯಲ್ಲಿ ನಿರ್ಮಾಣವಾಗಿರುವ ಅತ್ಯಂತ ಪ್ರಮುಖ ದೇವಾಲಯವೆಂದರೆ ಬಾಹೂರ್ ದೇವಾಲಯ. ಆದರೆ ಈ ಶೈಲಿಯಲ್ಲಿ ಹೆಚ್ಚಿನ ಸಂಖ್ಯೆಯ ಕಟ್ಟಡಗಳಾಗಲೀ ಅಥವ ದೇವಾಲಯಗಳಾಗಲೀ ನಿರ್ಮಾಣಗೊಳ್ಳಲಿಲ್ಲ.

## 14.5 ಸಾರಾಂಶವನ್ನು ಗ್ರಹಿಸೋಣ

ಈ ಘಟಕ ಪ್ರಥಮವಾಗಿ ಪಲ್ಲವರ ಆಡಳಿತ ಪ್ರಮುಖ ಲಕ್ಷಣಗಳನ್ನು ತಿಳಿಸುತ್ತದೆ. ಪಲ್ಲವರ ಆಡಳಿತ ಕೆಲ ಮಟ್ಟಿಗೆ ಶಾತವಾಹನರ ಆಡಳಿತದ ಅಂಶಗಳನ್ನು ಅಳವಡಿಸಿಕೊಂಡಿತ್ತು. ಪಲ್ಲವರಾಜ ಶಾಸನಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಮುಖ್ಯಸ್ಥನಾಗಿದ್ದನು. ಅವನ ಸಹಾಯಕ್ಕೆ ಮಂತ್ರಿ ಪರಿಷತ್ತನ್ನು ನೇಮಿಸಿಕೊಂಡಿದ್ದನು. ಅವನ ಆದೇಶಗಳನ್ನು ಜಾರಿಗೆ ತರುವುದು ಹಾಗೂ ಆಡಳಿತದಲ್ಲಿ ರಾಜನಿಗೆ ಸಹಾಯ ಮಾಡುವುದು ಮಂತ್ರಿ ಪರಿಷತ್ತಿನ ಕಾರ್ಯವಾಗಿತ್ತು. ಹಿರಿಯ ಪುತ್ರನನ್ನು ಯುವರಾಜನನ್ನಾಗಿ ನೇಮಿಸಿ ಮುಂದಿನ ರಾಜನಾಗಿ ತರಬೇತಿ ನೀಡಲಾಗುತ್ತಿತ್ತು.

ಪಲ್ಲವರ ಆರ್ಥಿಕ ವ್ಯವಸ್ಥೆ ಹಿಂದಿನ ವ್ಯವಸ್ಥೆಗಿಂತಲೂ ಭಿನ್ನವಾಗಿರಲಿಲ್ಲ. ಆದರೆ ಅನೇಕ ನೂತನ ವೃತ್ತಿಗಳು ಈ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿದುದರಿಂದ ಅನೇಕ ಜಾತಿ ಹಾಗೂ ಉಪಜಾತಿಗಳು ಹುಟ್ಟಿಕೊಂಡವು. ಕೃಷಿ ಪಲ್ಲವ ಆರ್ಥಿಕತೆಯ ಪ್ರಮುಖ ಅಂಗವಾಗಿತ್ತು. ಕೈಗಾರಿಕೆಗಳು ಕೃಷಿಯನ್ನು ಅವಲಂಬಿಸಿತ್ತು. ವ್ಯಾಪಾರವಾಣಿಜ್ಯದ ಮೇಲೆ ತೆರಿಗೆ ಅಥವ ಸುಂಕವನ್ನು ಹೇರುವುದರ ಮೂಲಕ ರಾಜ್ಯ ಈ ರಂಗದ ಮೇಲೆ ನಿಯಂತ್ರಣವನ್ನು ಸಾಧಿಸಿತ್ತು. ಕೃಷಿಕರ ಜೀವನ ಮಟ್ಟದಲ್ಲಿ ಯಾವುದೇ ಬದಲಾವಣೆ ಕಂಡು ಬರುವುದಿಲ್ಲ. ಹಿಂದಿನಂತೆ ಅವರ ಆರ್ಥಿಕ ಮಟ್ಟ ತೃಪ್ತಿಕರವಾಗಿರಲಿಲ್ಲ.

ಆರ್ಥಿಕ ಅಥವ ಆಡಳಿತ ರಂಗಕ್ಕೆ ಪಲ್ಲವರು ಹೊಸ ಆಯಾಮವನ್ನೇನು ನೀಡದಿದ್ದರೂ, ಕಲೆ ಮತ್ತು ಶಿಲ್ಪಕಲೆಗೆ ಅಮೋಘವಾದ ಕೊಡುಗೆಗಳನ್ನು ನೀಡಿದ್ದಾರೆ. ಪಲ್ಲವರು ದ್ರಾವಿಡ ಶೈಲಿಯ ಶಿಲ್ಪಕಲೆಯ ಜನಕರೆಂದು ಪರಿಗಣಿಸಲಾಗಿದೆ. ಬಂಡೆಗಳಲ್ಲಿ ಕೊರೆದ ದೇವಾಲಯಗಳಿಂದ ಪ್ರಾರಂಭಿಸಿದ ಪಲ್ಲವರು ಅಂತಿಮವಾಗಿ ಕಟ್ಟಡ ರೂಪದ ದೇವಾಲಯಗಳ ನಿರ್ಮಾಣದ ಪರಂಪರೆಯನ್ನು ಪ್ರಾರಂಭಿಸಿದರು. ಮರ ಹಾಗೂ ಇನ್ನಿತರ ನಾಶವಾಗುವ ಕಟ್ಟಡ ನಿರ್ಮಾಣ ಸಾಮಗ್ರಿಗಳ ಬದಲಾಗಿ ಕಲ್ಲನ್ನು ವ್ಯಾಪಕವಾಗಿ ಬಳಸುವ ವಿಧಾನವನ್ನು ಪಲ್ಲವರು ಜಾರಿಗೊಳಿಸಿದರಿಂದ ಅವರ ಸುಂದರ ದೇವಾಲಯಗಳು ಇಂದಿಗೂ ಸಹ ಉಳಿದುಕೊಂಡಿವೆ. ಸುಮಾರು ನಾಲ್ಕು ಶತಮಾನಗಳ ಅವಧಿಯಲ್ಲಿ ಅಭಿವೃದ್ಧಿಗೊಂಡ ಪಲ್ಲವರ ಕಲೆ ಮತ್ತು ಶಿಲ್ಪಕಲೆಯನ್ನು ಸ್ಥೂಲವಾಗಿ ನಾಲ್ಕು ಪ್ರಮುಖ ಶೈಲಿಗಳನ್ನಾಗಿ ಗುರುತಿಸಲಾಗಿದೆ.

## 14.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

ಅ. ಪಲ್ಲವರ ಆಡಳಿತದ ಪ್ರಮುಖ ಲಕ್ಷಣಗಳನ್ನು ಕುರಿತು ಚರ್ಚಿಸಿ.

ಆ. ಸಂಗಮ್ ಯುಗದ ನಂತರದಲ್ಲಿ ಕಂಡು ಬರುವ ಆರ್ಥಿಕ ಪರಿಸ್ಥಿತಿಯನ್ನು ಕುರಿತು ವಿಮರ್ಶಾತ್ಮಕ ಟಿಪ್ಪಣಿಯನ್ನು ಬರೆಯಿರಿ.

ಇ. ದೇವಾಲಯ ನಿರ್ಮಾಣ ಕಲೆಗೆ ಪಲ್ಲವರ ಕೊಡುಗೆಗಳನ್ನು ಅಂದಾಜು ಮಾಡಿ.

ಈ. ಪಲ್ಲವ ಕಲೆ ಮತ್ತು ಶಿಲ್ಪ ಕಲೆಯ ಬೆಳವಣಿಗೆಯಲ್ಲಿನ ಪ್ರಮುಖ ಹಂತಗಳನ್ನು ಚಿತ್ರಿಸಿ.

ಉ. ಪಲ್ಲವರ ಆಡಳಿತ ಮತ್ತು ಆರ್ಥಿಕ ವ್ಯವಸ್ಥೆಯನ್ನು ಪರೀಕ್ಷಿಸಿ.

ಊ. ಪಲ್ಲವರು ದ್ರಾವಿಡ ಶೈಲಿಯ ದೇವಾಲಯ ನಿರ್ಮಾಣದ ಜನಕರು ಎಂಬ ಅಭಿಪ್ರಾಯವನ್ನು ಪರಿಶೀಲಿಸಿ.

## 14.7 ಕ್ಲಿಷ್ಟ ಪದಗಳು

| | | | |
|---|---|---|---|
| 1. | ಅಗ್ರಹಾರ | : | ಬ್ರಾಹ್ಮಣರ ವಸತಿಗಳ ಗೃಹಗಳ ಸಮೂಹ |
| 2. | ಸರ್ವಾಧಿಕಾರಿ | : | ರಾಜ್ಯದ ಸರ್ವಅಧಿಕಾರವನ್ನು ಕೇಂದ್ರೀಕರಿಸಿ ಕೊಂಡಿರುವ ವ್ಯಕ್ತಿ |
| 3. | ಸಾಮಂತ | : | ಪ್ರಬಲ ದೊರೆಯೊಬ್ಬನ ನಿಯಂತ್ರಣದಲ್ಲಿರುವ ಮತ್ತೊಬ್ಬ ರಾಜ |
| 4. | ಸನ್ನದ್ಧ ಸೈನ್ಯ | : | ಸದಾ ಜಾಗೃತವಾಗಿರುವ ಸೈನ್ಯ |
| 5. | ತಟಾಕ | : | ಕೆರೆ |

## 14.8 ಅಭ್ಯಸನೀಯ ಗ್ರಂಥಗಳು


1. K.A. Nilakanta Sastri, *History of South India*
2. R.Gopalan, *The Pallavas of Kanchi*
3. N.Subramaniyam, *History of Tamilnad*
4. ಜಿ.ಆರ್. ರಂಗಸ್ವಾಮಯ್ಯ, **ದಕ್ಷಿಣ ಭಾರತದ ಇತಿಹಾಸ**



**ಡಾ || ಜಿ. ರಾಮರತನ್**




ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4–060/2013–2014 ದಿನಾಂಕ : 24–09–2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✛ **M.Ed Study Centres : 06**


STUDENT
Multimedia learning material
INSTRUCTIONAL SYSTEM